Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–27 | ಜೂನ್ 30–ಜುಲೈ 6, 2025 | ಪುಟ 16 | ರೂ.10/–
Volume-19 | Issue-27 | June 30-July 6, 2025 | Pages 16 | Price. 10/-



ದೇವನಹಳ್ಳಿ:

ಕಾರ್ಪೊರೇಟ್ ಶಕ್ತಿಗಳ ಕಣ್ಸನ್ನೆಯಂತೆ ಭೂ ಸ್ವಾಧೀನ - ಸಿಡಿದು ನಿಂತ ರೈತ ಚಳುವಳಿ- ಕಂಪನ



ಮೋದಿ ಸರ್ಕಾರದ ಹನ್ನೊಂದು ವರ್ಷಗಳು:

ದಾರುಣ ಪರಿಸ್ಥಿತಿಗೆ ಉತ್ತರಿಸಲು ದುಡಿಯುವ ವರ್ಗ ಸನ್ನದ್ಧ



ಹಟ್ಟಿ ಚಿನ್ನದ ಗಣಿ ಕಾರ್ಮಿಕ ಸಂಘದ ಚುನಾವಣೆ:
ಸಿಐಟಿಯು ಅಭೂತಪೂರ್ವ ಗೆಲುವು
ಘನತೆಯ ಬದುಕಿಗಾಗಿ ಶ್ರಮಜೀವಿಗಳ ಸಂಘರ್ಷ

1975-77 ತುರ್ತು ಪರಿಸ್ಥಿತಿ: ಆರ್.ಎಸ್.ಎಸ್. ನ ನಿಜ ಉದ್ದೇಶ ಬಯಲು

ಭ್ರಷ್ಟಾಚಾರ ಮಟ್ಟ ಹಾಕದಿರುವುದು ಜನದ್ರೋಹ

ಸಂಘರ್ಷ ಪ್ರಜಾಪ್ರಭುತ್ವಕ್ಕಾಗಿ, ಸ್ಥಾಪನೆಯಾದದ್ದು ಸರ್ವಾಧಿಕಾರ

ಭಾಗ 31

ಜಿ.ಎನ್. ನಾಗರಾಜ್

ಇಂಗ್ಲೆಂಡಿನ ಪಾರ್ಲಿಮೆಂಟ್ ಪರ ಸೈನ್ಯದಲ್ಲಿ ಒಂದು ಪೆರೇಡ್ ನಡೆಯುತ್ತಿದೆ. ಸೈನಿಕರು ತಂತಮ್ಮ ತುಕಡಿಯ ಸೇನಾಧಿಪತಿಗಳ ನೇತೃತ್ವದಲ್ಲಿ ಶಿಸ್ತಿನಿಂದ ಸಾಲಾಗಿ ನಿಂತಿದ್ದಾರೆ. ಸೈನ್ಯದ ಮಹಾ ದಂಡನಾಯಕ, ಉಪ ಮಹಾ ದಂಡನಾಯಕರು ತುಕಡಿಗಳ ಪರಿಶೀಲನೆ ನಡೆಸುತ್ತಾ, ಸಲ್ಯೂಟ್‌ಗಳನ್ನು ಸ್ವೀಕರಿಸುತ್ತಾ ಬರುತ್ತಿದ್ದಾರೆ.

ಆದರೆ, ಇದೇನಿದು ಹಲವು ತುಕಡಿಗಳ ತಲೆಯ ಮೇಲೆ ಹಿಂದೆದೂ ಸೈನ್ಯದಲ್ಲಿ ಕಾಣದ, ಅಗಲವಾದ ಕಾಗದ ಹಾಳೆಗಳು ಕಾಣುತ್ತಿವೆ! ಮಹಾ ದಂಡನಾಯಕರಿಗೆ ಶಾಕ್ ಮತ್ತು ಸಿಟ್ಟು. ಅದನ್ನು ಹತ್ತಿರದಿಂದ ಗಮನಿಸುತ್ತಾರೆ. ಓಹ್! ಅದು ಸೈನ್ಯದೊಳಗಿನ ಲೆವಲರ್ಸ್ ದೇಶದ ಮುಂದಿಟ್ಟ ಸಂವಿಧಾನ–"ಅಗ್ರಿಮೆಂಟ್ ಆಫ್ ಪೀಪಲ್"(ಜನತೆಯ ಒಪ್ಪಂದ)ದ ಪ್ರತಿಗಳು. ಅದನ್ನು ತಲೆಯ ಮೇಲಿನ ತಮ್ಮ ಸೈನಿಕ ಶಿರಸ್ತ್ರಾಣಗಳಿಗೆ ಎಲ್ಲರಿಗೂ ಕಾಣುವಂತೆ ಸಿಕ್ಕಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ ತೋಳಿನ ಮೇಲೆ ಗಾಢ ಹಸುರಿನ ಬಣ್ಣದ ರಿಬ್ಬನ್‌ಗಳನ್ನು ಕಟ್ಟಿಕೊಂಡಿದ್ದಾರೆ.

ಸೈನಿಕ ಸಮವಸ್ತ್ರಕ್ಕೆ ಪರಕೀಯವಾದ ಇವೆಲ್ಲಿಂದ, ಏಕೆ ಬಂತು?

ಸೈನ್ಯದಲ್ಲಿನ ಲೆವಲರ್ಸ್ ತುಕಡಿಗಳು ಒತ್ತಾಯಿಸಿದ ಸಂವಿಧಾನದ ಚರ್ಚೆ ಬಿರುಸಾಗಿ ವಾರಗಟ್ಟಲೆ ನಡೆಯಿತಲ್ಲ. ಅದರಲ್ಲಿ ಕೆಲವು ಅಂಶಗಳ ಬಗ್ಗೆ ಸಮ್ಮತಿ ಮೂಡಿ ಬಂತು.

ಲೆವಲರ್ಸ್ ಸೈನಿಕ ಪ್ರತಿನಿಧಿಗಳು, ಹೀಗೆ ಒಪ್ಪಿತವಾದ ಅಗ್ರಿಮೆಂಟ್ ಆಫ್ ಪೀಪಲ್ ಅನ್ನು ಇಡೀ ಸೈನ್ಯದ ಮುಂದೆ ಮಂಡಿಸಬೇಕು. ಅವರ ಒಪ್ಪಿಗೆಯನ್ನು ಪಡೆದು ನಂತರ ಯಾವ ಜನತೆಯ ಹೆಸರಿನಲ್ಲಿ ಈ ಒಪ್ಪಂದವನ್ನು ತಯಾರಿಸಲಾಗಿದೆಯೋ ಆ ಇಂಗ್ಲೆಂಡ್‌ನ ಜನರಲೆಲ್ಲರ ಮುಂದೆ ಅವರ ಅಭಿಪ್ರಾಯ ಮತ್ತು ಒಪ್ಪಿಗೆಗೆ ಇಡಬೇಕು ಎಂಬುದು ಲೆವಲರ್ಸ್ ಪ್ರತಿನಿಧಿಗಳ ಒತ್ತಾಯವಾಗಿತ್ತು. ಸೈನ್ಯ ಮಂಡಳಿಯ ಚರ್ಚೆಯಲ್ಲಿ ಇಡೀ ಸೈನ್ಯದ ಪೆರೇಡ್‌ನಲ್ಲಿ ಅಗ್ರಿಮೆಂಟ್ ಅನ್ನು ಮಂಡಿಸುವ ಪ್ರಸ್ತಾಪಕ್ಕೆ ಒಪ್ಪಲಾಯಿತು. ಸೈನ್ಯದೊಳಗಿನ ಲೆವಲರ್ಸ್‌ಗಳು ಪ್ರಜಾಪ್ರಭುತ್ವದ ಬಗ್ಗೆ ತಮ್ಮ ಅಭಿಪ್ರಾಯಗಳಿಗೆ ಮನ್ನಣೆ ಸಿಕ್ಕಿತು. ಮುಂದಿನ ಹೆಜ್ಜೆಗಳಲ್ಲಿ ಎಲ್ಲರ ಸಮ್ಮತಿ ದೊರಕಿಸಿಕೊಳ್ಳುವುದೊಂದೇ ಬಾಕಿ ಎಂದು ಭಾವಿಸಿ ಖುಷಿಯಾದರು. ಆದರೆ ನಡೆದಿದ್ದೇ ಬೇರೆ.

ಪ್ರಜಾಪ್ರಭುತ್ವಕ್ಕಾಗಿ ಬಲಿ

ಸೈನ್ಯದಲ್ಲಿ ಮಹಾ ದಂಡನಾಯಕನಾಗಿದ್ದ ಫೇರ್‌ಫಾಕ್ಸ ತನ್ನ ಧೈರ್ಯ, ಕೆಚ್ಚಿನಿಂದ, ಮಿಲಿಟರಿ ಚಾಣಾಕ್ಷತನದಿಂದಾಗಿ ಸೈನಿಕರ ಗೌರವವನ್ನು ಪಡೆದಿದ್ದ. ಅವನಿಗೆ ಇವೆಲ್ಲ ಒಂಚೂರು ಇಷ್ಟವಿರಲಿಲ್ಲ. ಅವನು ಸೈನ್ಯದಲ್ಲಿ ರಾಜಕೀಯದ ಚರ್ಚೆಯಿಂದ ದೂರ ಇರುತ್ತಿದ್ದ. ಇಂತಹ ಚರ್ಚೆಗಳಲ್ಲಿ ಭಾಗವಹಿಸುವುದರಿಂದ ತನ್ನ ಬಗ್ಗೆ ಸೈನಿಕರಿಗಿರುವ ಗೌರವವನ್ನು ಕಡಿಮೆ ಮಾಡಿಕೊಳ್ಳುವುದು ಇಷ್ಟವಿರಲಿಲ್ಲ. ಈ ಗೌರವವನ್ನು ಗ್ರಾಂಡಿಗಳು ತಮ್ಮ ಉದ್ದೇಶ ಸಾಧನೆಗಾಗಿ ಉಪಯೋಗಿಸಿಕೊಂಡರು.

ಸೈನ್ಯವನ್ನೆಲ್ಲ ಒಂದೆಡೆ ಸೇರಿಸಿದರೆ ತಮ್ಮ ಉದ್ದೇಶ ಸಾಧನೆಗೆ ತೊಂದರೆಯಾಗುವುದೆಂದು ಭಾವಿಸಿದ ಗ್ರಾಂಡಿಗಳು, ಸೇನೆಯನ್ನು ಮೂರು ಭಾಗವಾಗಿ ವಿಂಗಡಿಸಿ ಬೇರೆ ಬೇರೆ ಸ್ಥಳಗಳಲ್ಲಿ ಅಗ್ರಿಮೆಂಟ್ ಅನ್ನು ಮುಂದಿಡಲು ಕ್ರೋಮ್‌ವೆಲ್ ಲೆವಲರ್ಸ್ ಪ್ರತಿನಿಧಿಗಳನ್ನು ಒಪ್ಪಿಸಿದರು.

ಇದೇ ವೇಳೆಗೆ ಸೈನ್ಯದ ದಳಗಳು ಸೇರುವ ನಾಲ್ಕು ದಿನ ಮೊದಲು ರಾಜ ಸೆರೆಯಿಂದ ತಪ್ಪಿಸಿಕೊಂಡು ಬಿಟ್ಟ. ಇದನ್ನು ಕ್ರೋಮ್‌ವೆಲ್ ಸ್ವತಃ ಸಂಚು ಮಾಡಿ ತಪ್ಪಿಸಿಕೊಳ್ಳುವಂತೆ ಮಾಡಿದ್ದಿರಬಹುದೆಂಬ ಅಭಿಪ್ರಾಯವನ್ನು ಕೆಲವು ಇತಿಹಾಸಕಾರರು ವ್ಯಕ್ತಪಡಿಸಿದ್ದಾರೆ. ಏನಾದರೂ ಇರಲಿ, ಗ್ರಾಂಡಿಗಳು ಈ ಸದವಕಾಶವನ್ನಂತೂ ಚೆನ್ನಾಗಿ ಬಳಸಿಕೊಂಡರು.

ರಾಜಪ್ರಭುತ್ವವನ್ನು ಕಿತ್ತೆಸೆಯಲು ಹಲವು ಯುದ್ಧಗಳಲ್ಲಿ ಪಟ್ಟ ಸಾವು ಸಂಕಟಗಳು ಸೈನಿಕರ ನೆನಪಿಗೆ ಬರುವ ವಾತಾವರಣ, ಸೈನ್ಯದ ಶಿಸ್ತು ಮತ್ತು ಐಕ್ಯತೆ ಪ್ರಾಮುಖ್ಯತೆ ಪಡೆದ ಸಮಯ.

ಇಂತಹ ಸನ್ನಿವೇಶದಲ್ಲಿ ಸೈನಿಕರ ಮುಂದೆ ಚರ್ಚೆ ಮಾಡಿ ಒಪ್ಪಲಾಗಿದ್ದ ಅಗ್ರಿಮೆಂಟ್ ಅನ್ನು ಮಂಡಿಸಲಿಲ್ಲ. ಅದಕ್ಕೆ ಬದಲಾಗಿ ಫೈರ್‌ಫಾಕ್ಸ್ ತನ್ನದೇ ಆದ ಹೇಳಿಕೆಯನ್ನು ಮಂಡಿಸಿದ.

ಅದರಲ್ಲಿ ಪ್ರಧಾನವಾಗಿ ಸೈನಿಕರ ಅಶಿಸ್ತು ಅನೈಕ್ಯತೆಯ ಬಗ್ಗೆ ತನ್ನ ಬೇಸರವನ್ನು ವ್ಯಕ್ತಪಡಿಸಲಾಗಿತ್ತು ಹಾಗೂ ಸೈನಿಕರ ಸಂಬಳ ಬಾಕಿ ಇತ್ಯಾದಿ ಅವರ ಸೈನ್ಯ ಸೇವೆಯ ಸಮಸ್ಯೆಗಳನ್ನು ಪರಿಹರಿಸುವ ಭರವಸೆ ನೀಡಲಾಗಿತ್ತು.



ಆದರೆ ಸಾಂವಿಧಾನಿಕ ಚರ್ಚೆಯ ಸಮ್ಮತಿಯ ಅಂಶಗಳನ್ನು ಮೂಗಿಗೆ ತುಪ್ಪ ಹಚ್ಚುವಂತೆ ಅಸ್ಪಷ್ಟವಾದ ಕೆಲವು ಮಾತುಗಳನ್ನು ಒಳಗೊಂಡಿತ್ತು.

ಸೈನಿಕರ ಮೊದಲ ಪೆರೇಡ್ ಇಂತಹ ಹಿನ್ನೆಲೆಯಲ್ಲಿ ನಡೆದಾಗ ಲೆವಲರ್ಸ್ ಅಗ್ರಿಮೆಂಟ್ ಅಫ್ ಪೀಪಲ್ ಅನ್ನು ತಲೆಯ ಮೇಲೆ ಧರಿಸಿದ ಸೈನಿಕರನ್ನು ನೋಡಿದ ಕ್ರೋಮ್‌ವೆಲ್, ಈಗ ಇವರನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳದಿದ್ದರೆ ಮುಂದೆ ಇಂತಹ ಅವಕಾಶ ದೊರಕುವುದಿಲ್ಲವೆಂದು ಭಾವಿಸಿದ. ಸೈನಿಕರು ತಲೆಯ ಮೇಲಿನ ಅಗ್ರಿಮೆಂಟ್ ಪ್ರತಿಗಳನ್ನು ತೆಗೆದು ಹಾಕಲು ಆಜ್ಞೆ ಮಾಡಿದ. ಸೈನಿಕರು ದೃಢವಾಗಿ ನಿರಾಕರಿಸಿದಾಗ ಈ ಬಂಡಾಯವನ್ನು ಹತ್ತಿಕ್ಕಲು ನಿರ್ಧರಿಸಿ ಅವರ ತಲೆಯ ಮೇಲಿದ್ದ ಆ ಪ್ರತಿಗಳನ್ನು ತಾನೇ ಮುಂದಾಗಿ ಕಿತ್ತೆಸೆದ. ಅವರಲ್ಲಿ ಮೂವರು ಸೈನಿಕರನ್ನು ಬಂಧಿಸಿ, ಅಲ್ಲೇ ಆಗಲೇ ಮಿಲಿಟರಿ ವಿಚಾರಣೆ ನಡೆಸಿ ಅವರಿಗೆ ಮರಣ ದಂಡನೆ ವಿಧಿಸಲಾಯಿತು. ಅವರ ನಡುವೆ ಲಾಟರಿ ತೆಗೆದು ಒಬ್ಬನನ್ನು ಕ್ರೋಮ್‌ವೆಲ್ ಗುಂಡಿಟ್ಟು ಹತ್ಯೆ ಮಾಡಿದ. ಮತ್ತೆ ಹನ್ನೊಂದು ಜನರನ್ನು ಬಂಧಿಸಿದರು.

ಸೈನಿಕರಿಗೆ ಇದು ಇಕ್ಕಟ್ಟನ್ನು ಉಂಟುಮಾಡಿತು. ಅವರು ಪೆರೇಡ್‌ನ ಭಾಗವಾಗಿ ಸೈನಿಕ ಶಿಸ್ತನ್ನು ಪಾಲಿಸಬೇಕು. ರಾಜನ ಪರಾರಿಯ ಸಂದರ್ಭದಲ್ಲಿ ಸೈನ್ಯದ ಒಗ್ಗಟ್ಟಿನ ಅಗತ್ಯ ಒಂದು ಕಡೆ, ಮುಂದಿನ ಪ್ರಜಾಪ್ರಭುತ್ವದ ಬಗ್ಗೆ ತಮ್ಮ ದೃಢ ಅಭಿಪ್ರಾಯ ಮತ್ತೊಂದು ಕಡೆ. ತಮ್ಮ ಭಿನ್ನಾಭಿಪ್ರಾಯ ವ್ಯಕ್ತಪಡಿಸಲು ಅಲ್ಲಿ ಸೇರಿದ್ದದ್ದು ಚರ್ಚೆ ಮಾಡುವ ಸಭೆಯಲ್ಲ, ಪೆರೇಡ್.

ಹೀಗೆ ಹತ್ಯೆ, ಬಂಧನ, ದಂಡನಾಯಕರ ಜನಪ್ರಿಯತೆ ಇವುಗಳಿಂದ ಸೃಷ್ಟಿಯಾದ ಗಂಭೀರ ವಾತಾವರಣದಲ್ಲಿ ಫೈರ್‌ಫಾಕ್ಸ್ ಯುದ್ಧ ಆರಂಭವಾದಾಗಿನಿಂದ ಮಹಾ ದಂಡನಾಯಕರು, ದಂಡನಾಯಕರಿಂದ ಕೂಡಿದ ಯುದ್ಧ ಮಂಡಳಿ ಇತ್ತಲ್ಲಾ ಆ ಮಂಡಳಿಗೆ, ಮೇಲಿನ ಸೇನಾಧಿಕಾರಿಗಳಿಗೆ ಸೈನಿಕರು, ತುಕಡಿಗಳ ನಾಯಕರು ವಿಧೇಯರಾಗಿರಬೇಕೆಂಬ ಘೋಷಣೆ ಮಾಡಿದ.

ಹೀಗೆ ಮತದಾನದ ಹಕ್ಕು ಆಸ್ತಿಯ ಸಂರಕ್ಷಣೆಯ ವರ್ಗ ಸಂಘರ್ಷದ ಪ್ರಶ್ನೆಯಾದಂತೆ ಸೈನ್ಯದ ಒಗ್ಗಟ್ಟಿನ ಪ್ರಶ್ನೆಯೂ ಕೂಡಾ ವರ್ಗ ಸಂಘರ್ಷದ ಪ್ರಶ್ನೆಯಾಯಿತು. ಪ್ರಾಣವನ್ನು ಪಣಕ್ಕಿಟ್ಟು ಯುದ್ಧದಲ್ಲಿ ಹೋರಾಡಿದ ದುಡಿಯುವ ವರ್ಗದ ಸೈನಿಕರು ಇಡೀ ಇಂಗ್ಲೆಂಡ್‌ನ ಜನತೆಯ ಪರವಾಗಿ ಮುಂದಿಟ್ಟ ಪ್ರಜಾಪ್ರಭುತ್ವದ ಪ್ರಸ್ತಾವಗಳ ಬಗ್ಗೆ ಮೂಡಿದ ಸಮ್ಮತಿಯ ಆಧಾರದಲ್ಲಿ ತತ್ವಬದ್ಧ ಒಗ್ಗಟ್ಟು, ಸೈನಿಕ ಶಿಸ್ತಿನ ಹೆಸರಿನಲ್ಲಿ ವಂಚನೆಯ ಮೂಲಕ ಹೇರಿದ ಶ್ರೀಮಂತ ಗ್ರಾಂಡಿಗಳಿಗೆ ವಿಧೇಯರಾದ ಒಗ್ಗಟ್ಟು.

ದುಡಿಯುವ ವರ್ಗದ ಸೈನಿಕರು ರಾಜ ಪ್ರಭುತ್ವದ ಪಾಳೆಯಗಾರಿ ವ್ಯವಸ್ಥೆಯಲ್ಲಿ ಶತ ಶತಮಾನಗಳಿಂದ ಸಾಮಂತರುಗಳಿಗೆ, ಜಹಗೀರುದಾರರಿಗೆ ಡೊಗ್ಗು ಸಲಾಮು ಹೊಡೆಯುತ್ತಾ, ಅವರ ದಬ್ಬಾಳಿಕೆಗೆ ವಿಧೇಯರಾಗಿದ್ದವರೇ ಅಲ್ಲವೇ? ಕೇವಲ ನಾಲ್ಕೈದು ವರ್ಷಗಳಿಂದ ರಾಜಪ್ರಭುತ್ವದ ಸಂಕಟಗಳನ್ನು ತೊಲಗಿಸಬೇಕೆಂಬ ಎಚ್ಚರ ಪಡೆದವರು. ಶತ ಶತಮಾನಗಳಿಂದ, ಕುತಂತ್ರ, ತಳತಂತ್ರಗಳು ವಂಚನೆಗಳಲ್ಲಿ ಪಳಗಿದ ರಾಜ, ಸಾಮಂತ, ಜಹಗೀರುದಾರರ ಆಟ ಮಾಟಗಳನ್ನು ಹೇಗೆ ಅರಿತಾರು? ಈ ಒಟ್ಟಾರೆ ಸಂದರ್ಭದಲ್ಲಿ ತತ್ಕಾಲಕ್ಕೆ ಗ್ರಾಂಡಿಗಳು ಬಯಸಿದ ರೀತಿಯ ಒಗ್ಗಟ್ಟು ಸಾಧಿತವಾಯಿತು.

ಹಿಂದೆ "ರಾಜನ ವಿಚಾರಣೆ ಮತ್ತು ಮರಣ ದಂಡನೆ" ಎಂಬ ಲೇಖನದಲ್ಲಿ ವಿವರಿಸಿದಂತೆ ಕ್ರೋಮ್‌ವೆಲ್ ಮತ್ತು ಗ್ರಾಂಡಿಗಳಿಗೆ ರಾಜನ ಸೈನ್ಯವನ್ನು ಸೋಲಿಸಲು, ರಾಜನಿಷ್ಠರ ಜೊತೆ ರಾಜನ ಕುತಂತ್ರಗಳು ಅದನ್ನು ಹಿಮ್ಮೆಟ್ಟಿಸಲು, ಅದರ ಕೀರ್ತಿಯನ್ನು ತನ್ನ ಮುಡಿಗೇರಿಸಿಕೊಳ್ಳಲು ಕ್ರೋಮ್‌ವೆಲ್‌ಗೆ ಲೆವಲರ್ಸ್ ಪರ ಸೈನ್ಯದ ಬೆಂಬಲ ಅವಶ್ಯವಾಗಿತ್ತು. ಅಷ್ಟೇ ಅಲ್ಲದೆ ಪಾರ್ಲಿಮೆಂಟ್‌ನಲ್ಲಿ ಬಹುಮತ ಹೊಂದಿದ್ದ ಕ್ರೋಮ್‌ವೆಲ್‌ನನ್ನು ಮೂಲೆಗುಂಪು ಮಾಡಲು ವಿವಿಧ ಪ್ರಯತ್ನಗಳನ್ನು ಎಸಗುತ್ತಿದ್ದ, ಕ್ರೋಮ್‌ವೆಲ್ ಮತ್ತು ಅವನ ಜೊತೆಗಾರರಿಗಿಂತ ಮಹಾ ಶ್ರೀಮಂತರ ಗುಂಪನ್ನು ಎದುರಿಸಲು ಲೆವಲರ್ಸ್ ಸಹಾಯ ಮತ್ತೆ ಮತ್ತೆ ಅನಿವಾರ್ಯವಾಗಿತ್ತು. ಆಗೆಲ್ಲ ಲೆವಲರ್ಸ್ ವಿಚಾರಗಳಿಗೆ ಮಾನ್ಯತೆ ನೀಡುವಂತೆ ನಟಿಸುತ್ತಿದ್ದರು. ಚರ್ಚೆ, ಸಮಿತಿಗಳನ್ನು ಏರ್ಪಡಿಸುತ್ತಿದ್ದ. ಅವರ ಪ್ರಸ್ತಾವದ ಕೆಲವು ಅಂಶಗಳನ್ನು ಒಳಗೊಳ್ಳುವ ಹೇಳಿಕೆಗಳು ಹೊರಬೀಳುತ್ತಿದ್ದವು.

ರಾಜನ ವಿರುದ್ಧ ಎರಡನೇ ಅಂತರ್ಯುದ್ಧ

ರಾಜನನ್ನು ಮತ್ತೆ ಬಂಧನಕ್ಕೊಳಪಡಿಸಿದ ಮೇಲೆ ಅಂತಹುದೊಂದು ಬಿಕ್ಕಟ್ಟು ಉದ್ಭವವಾಯಿತು. ರಾಜ 1647ರ ಡಿಸೆಂಬರ್ ಮಧ್ಯದಲ್ಲಿ ಸ್ಕಾಟ್ಲೆಂಡ್‌ನ ಜೊತೆ ಒಳಸಂಚು ರೂಪಿಸಿದ. ಅದೇ ಸಮಯದಲ್ಲಿ ರಾಜನಿಷ್ಠರು ಲಂಡನ್ ಮತ್ತು ಇಂಗ್ಲೆಂಡಿನ ಇತರ ಭಾಗಗಳಲ್ಲಿ ದಂಗೆ ಎದ್ದರು.

ಆಗ ಸೈನ್ಯದೊಳಗಿನ ಒಗ್ಗಟ್ಟು ಬಹಳ ತುರ್ತಿನ ಅಂಶವಾಯಿತು. ಕ್ರೋಮ್‌ವೆಲ್ ಮತ್ತು ಗ್ರಾಂಡೀಗಳಿಗೆ ಸಂವಿಧಾನಿಕ ಚರ್ಚೆಗಳ ನಂತರ ಲೆವಲರ್ಸ್‌ಗಳನ್ನು ಹತ್ತಿಕ್ಕಿದ ನಂತರದ ಸೈನ್ಯದ ಒಗ್ಗಟ್ಟು ಕೇವಲ ಮಿಲಿಟರಿ ಶಿಸ್ತಿನ ಹೇರಿಕೆಯಷ್ಟೇ ಹೊರತು ಮನಃಪೂರ್ವಕವಾಗಿ ರೂಪುಗೊಂಡದ್ದಲ್ಲ ಎಂಬುದರ ಅರಿವಿತ್ತು. ಸೈನಿಕರ ನಡುವೆ ಲೆವಲರ್ಸ್ ವಿಚಾರಗಳು ಬಹಳ ಆಳವಾಗಿ ಬೇರು ಬಿಟ್ಟಿವೆ. ಆದ್ದರಿಂದ ಅವುಗಳಿಗೆ ಮಾನ್ಯತೆ ಸಿಕ್ಜರೆ ಮಾತ್ರ ನೈಜ ಒಗ್ಗಟ್ಟು ರೂಪುಗೊಳ್ಳುತ್ತದೆ ಎಂದು ಭಾವಿಸಿದರು. ರಾಜನ ಸಂಚು ಬಹಿರಂಗವಾದ ಕೆಲವೇ ದಿನಗಳಲ್ಲಿ ಲೆವಲರ್ಸ್ ಸೈನಿಕ ಪ್ರತಿನಿಧಿಗಳನ್ನು ಒಳಗೊಂಡ ಸೈನಿಕ ಮಂಡಳಿಯ ಸಭೆ ಸೇರಿಸಿದರು. ಅದರಲ್ಲಿ ಹಿಂದೆ ಬಂಧಿಸಿದ್ದ 11 ಜನ ಲೆವಲರ್ಸ್ ಸೈನಿಕರು ಮತ್ತು ತುಕಡಿಯ ಅಧಿಕಾರಿಗಳನ್ನು ಬಿಡುಗಡೆ ಮಾಡಲಾಯಿತು. ಹಿಂದಿನ ಎಲ್ಲ ಉಲ್ಲಂಘನೆಗಳಿಗೆ ಕ್ಷಮಾದಾನ ನೀಡಲಾಯಿತು. ಲೆವಲರ್ಸ್ ಕಡೆಯ ಪ್ರಮುಖ ಸೇನಾಧಿಕಾರಿಗೆ ವೈಸ್ ಅಡ್ಮಿರಲ್ ಎಂಬ ಉಚ್ಚ ಸ್ಥಾನ ನೀಡಲಾಯಿತು.

ಏಳೆಂಟು ತಿಂಗಳ ಕಾಲ ಯುದ್ಧ ನಡೆದು ರಾಜಪರ ಸೈನ್ಯವನ್ನು ಕ್ರೋಮ್‌ವೆಲ್ ನೇತೃತ್ವದ ಸೈನ್ಯ ಮತ್ತೆ ಸೋಲಿಸಿತು.

ಆದರೆ ಕ್ರೋಮ್‌ವೆಲ್ ರಾಜಧಾನಿಯಿಂದ ದೂರ ಇದ್ದ ಅದೇ ಸಮಯದಲ್ಲಿ ಪಾರ್ಲಿಮೆಂಟಿನ ಬಹುಮತದ ಗುಂಪು ರಾಜನೊಡನೆ ರಾಜಿಯ ಒಂದು ಪ್ರತಿಕ್ರಾಂತಿ ನಡೆಸಲು ಪಾರ್ಲಿಮೆಂಟಿನಲ್ಲಿ ನಿರ್ಣಯ ಮಾಡಿ ಇಲ್ಲಿಯವರೆಗಿನ ಎಲ್ಲ ಸಾಧನೆಯನ್ನು ನುಚ್ಚು ನೂರು ಮಾಡುವ ಕುಕೃತ್ಯಕ್ಕೆ ಮುಂದಾಯಿತು.

ಮತ್ತೆ ಕ್ರೋಮ್‌ವೆಲ್‌ಗೆ ಸೈನ್ಯದ ಸಂಪೂರ್ಣ ಬೆಂಬಲದ ಅಗತ್ಯ ಬಿತ್ತು. ಮತ್ತೆ ಜನತೆಯ ಒಪ್ಪಂದವನ್ನು ಚರ್ಚಿಸಿ ಸೈನ್ಯದ ಸರ್ವ ಸಮ್ಮತಿಯ ಒಪ್ಪಂದಕ್ಕೆ ಬರಲು 16 ಜನರ ಒಂದು ಸಮಿತಿಯನ್ನು ರಚಿಸಲಾಯಿತು. (ಹಿಂದಿನ ಚರ್ಚೆಯ ಫಲವಾದ ಸರ್ವ ಸಮ್ಮತಿಯ ಒಪ್ಪಂದವನ್ನು ಸೈನ್ಯದ ಮುಂದಿಡಲು ಗ್ರಾಂಡಿಗಳು ನಿರಾಕರಿಸಿದ್ದರಲ್ಲ.) ಈ ಸಮಿತಿ ಹಲವು ತಿಂಗಳ ಕಾಲ ಚರ್ಚಿಸಿ ಒಂದು ಸರ್ವ ಸಮ್ಮತಿಯ ತೀರ್ಮಾನಗಳಿಗೆ ಬಂದಿತು. ಲೆವಲರ್ಸ್‌ಗಳಿಗೆ ತಮ್ಮ ವಿಚಾರಗಳಿಗೆ, ಅದರ ಬಗೆಗಿನ ಹೋರಾಟಕ್ಕೆ ಜಯ ಸಿಕ್ಕಿತು ಎಂಬ ಭಾವನೆ ಬರುವಂತಾಯಿತು.

ಗ್ರಾಂಡಿಗಳ ಕ್ಷಿಪ್ರ ಕ್ರಾಂತಿ:

ಈ ಸಮಿತಿ ಚರ್ಚೆಗಳನ್ನು ನಡೆಸುತ್ತಿರುವಾಗಲೇ ಸೈನ್ಯ ಪಾರ್ಲಿಮೆಂಟಿನ ದ್ವಾರಗಳನ್ನು ಆಕ್ರಮಿಸಿ ಬಹುಮತದ ಗುಂಪಿನ 140 ಪಾರ್ಲಿಮೆಂಟಿನ ಸದಸ್ಯರನ್ನು ಹೊರಹಾಕಲಾಯಿತು. ಈ ಮೂಲಕ ಕ್ರೋಮ್‌ವೆಲ್ ಮತ್ತು ಗ್ರಾಂಡಿಗಳ ಬಹುಮತ ಸ್ಥಾಪನೆಯಾದ ಕೂಡಲೇ ರಾಜನಿಗೆ ಮರಣ ದಂಡನೆ ಶಿಕ್ಷೆ ವಿಧಿಸಲಾಯಿತು.

ಪುಟ 10 ಕ್ಕೆ

ಸಂಪಾದಕೀಯ

ಭ್ರಷ್ಟಾಚಾರ ಮಟ್ಟ ಹಾಕದ ಜನದ್ರೋಹ

ಕರ್ನಾಟಕದ ವಿವಿಧ ಇಲಾಖೆಗಳಲ್ಲಿ ಬೇರು ಬಿಟ್ಟಿರುವ ಭ್ರಷ್ಟಾಚಾರದ ಬಗೆಗಿನ ಆರೋಪ ಗಂಭೀರ ಸ್ವರೂಪವನ್ನು ಪಡೆದುಕೊಂಡಿದೆ. ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷದ ಶಾಸಕರೇ ಗಟ್ಟಿ ದನಿಯಲ್ಲಿ ಭ್ರಷ್ಟಾಚಾರದ ಸ್ವರೂಪ, ತಮಗಾಗಿರುವ ಅನುಭವ ಹತಾಶೆಗಳನ್ನು ಸಾರ್ವಜನಿಕವಾಗಿಯೇ ವ್ಯಕ್ತಪಡಿಸಿದ್ದಾರೆ. ಕರ್ನಾಟಕ ಯೋಜನಾ ಆಯೋಗದ ಉಪಾಧ್ಯಕ್ಷರಾದ ಶಾಸಕ ಬಿ.ಆರ್.ಪಾಟೀಲರು 'ವಸತಿ ನಿಗಮ'ದಲ್ಲಿ ಮನೆ ಹಂಚಿಕೆ ಹಣ ಕೊಟ್ಟವರಿಗೆ ಮಾತ್ರ ಸಾಧ್ಯ ಎಂದಿದ್ದರೆ, ಅದೇ ಪಕ್ಷದ ಹಿರಿಯ ಶಾಸಕ ರಾಜು ಕಾಗೆ ಯವರು ಪಾಟೀಲರ ಆರೋಪದಲ್ಲಿ ಸತ್ಯಾಂಶ ಇದೆ ಎಂದು, ಪ್ರಕರಣಗಳನ್ನು ಬಿಡಿಸಿಟ್ಟಿದ್ದಾರೆ. ಅದೇ ಪಕ್ಷದ ಶಾಸಕ ಬೇಳೂರು ಗೋಪಾಲಕೃಷ್ಣರವರು 'ಪಾಟೀಲರ ಆರೋಪ ನಿಜವಾಗಿದ್ದರೆ ಸಂಬಂಧಿಸಿದ ಸಚಿವರು ರಾಜಿನಾಮೆ ಕೊಡಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ' ಎಂದು ದನಿಗೂಡಿಸಿದ್ದಾರೆ. ಬೆಂಗಳೂರು ದಕ್ಷಿಣ ತಾಲೂಕು ಕಛೇರಿಗೆ ದಿಢೀರನೇ ಭೇಟಿ ನೀಡಿದ ಕಂದಾಯ ಇಲಾಖೆಯ ಸಚಿವ ಕೃಷ್ಣ ಭೈರೇಗೌಡರು ಹಲವು ಬಾರಿ ಕಛೇರಿಗೆ ಅಲೆದಾಡಿದರೂ ಕೆಲಸ ಮಾಡಿಕೊಡದ ಬಗ್ಗೆ ಸಾರ್ವಜನಿಕರು ಗಮನ ಸೆಳೆದಾಗ 'ಲಂಚದ ರೇಟ್ ಬೋರ್ಡ್ ಹಾಕಿ ಬಿಡಿ' ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಇವು ಸ್ಯಾಂಪಲ್‌ಗಳಾಗಿ ಕಾಣುವ ಈ ಪ್ರಕರಣಗಳು. ಆದರೆ ಸರ್ಕಾರಿ ಕಚೇರಿಗಳಲ್ಲಿ ರಾಜಾರೋಷವಾಗಿ ಚಾಲನೆಯಲ್ಲಿ ಇರುವ ಭ್ರಷ್ಟಾಚಾರದ ನಿದರ್ಶನವಾಗಿದೆ. ಅದು ಉನ್ನತ ಆಡಳಿತ ಅಧಿಕಾರದ ಕೇಂದ್ರಗಳಲ್ಲಿಯೂ ಹಣದ ಭ್ರಷ್ಟಾಚಾರ ಸಾಂಸ್ಥಿಕ ಸ್ವರೂಪವನ್ನು ಪಡೆದು ನೆಲೆಗೊಂಡಿರುವ ಗಂಭೀರ ಪರಿಸ್ಥಿತಿಯನ್ನು ಮನಗಾಣಿಸುತ್ತಿದೆ.

ಕರ್ನಾಟಕದ ಬಹುತೇಕ ಯಾವುದೇ ಕಚೇರಿಗಳಿಗೆ ಹೋದರೂ ಅಲ್ಲಿ ಸಣ್ಣಪುಟ್ಟ ಕೆಲಸಗಳಿಗೂ ಇಂತಿಷ್ಟು ಹಣವನ್ನು ಕೊಡಲೇಬೇಕು ಎಂಬ ಅಲಿಖಿತ ನಿಯಮ ಇದೆ. ಯಾವುದೇ ಕೆಲಸಗಳು ಯಾವುದೇ ಫೈಲ್ಗಳು ಸರಿದಾಡುವುದಿಲ್ಲ ಮತ್ತು ಕೆಲಸ ಆಗುವುದಿಲ್ಲ ಎಂಬುದು ಜಗಜ್ಜಾಹೀರಾಗಿ ಕೇಳಿಸುತ್ತದೆ ಮತ್ತು ಕಾಣಿಸುತ್ತದೆ. ಹಣ ನೀಡದೆ ಅಧಿಕಾರ ಸ್ಥಾನ –ಹುದ್ದೆ ಸಿಗುವುದಿಲ್ಲ ಎಂಬುದನ್ನು ಎಷ್ಟೋ ಬಾರಿ ಅಧಿಕಾರಿಗಳು ಮೊಗಮ್ ಆಗಿ ಮಾತನಾಡುವಷ್ಟು, ಇಲ್ಲವೇ ಸಾರ್ವಜನಿಕರೇ ಉತ್ತರಿಸಬೇಕಾದ ಪ್ರಶ್ನೆಯಾಗುವಷ್ಟು ಹದಗೆಟ್ಟಿದೆ. ಈ ಹಿಂದೆ ಬಿಜೆಪಿ ಸೋತು ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗಲೂ ಮತ್ತು ಈಗ ಕೂಡ ಬಿಜೆಪಿ ಆಡಳಿತದಲ್ಲಿದ್ದ ಭ್ರಷ್ಟಾಚಾರದ ಸ್ವರೂಪ ಮತ್ತು ವಿಧಾನಗಳನ್ನು ಎಳ್ಳಷ್ಟಾದರೂ ಬದಲಾಯಿಸಿರುವುದು ಕಂಡು ಬರುವುದಿಲ್ಲ. ಭ್ರಷ್ಟ ವಿಧಾನಗಳನ್ನು ಅತ್ಯಂತ ಕಾಳಜಿಯಿಂದ ಉಳಿಸಿಕೊಂಡಿರುವುದು ಮಾತ್ರವಲ್ಲ ಹೊಸ ಕಸುವಿನೊಂದಿಗೆ ಇನ್ನಷ್ಟು ವಿಸ್ತರಿಸಿದೆ. ಹಗಲು ದರೋಡೆ ನಡೆಯುತ್ತಿದ್ದರೂ ಏನೂ ಮಾಡಲಾಗದೇ ಜನತೆ ಹತಾಶವಾಗಿ ಮಾತನಾಡಿಕೊಳ್ಳುತ್ತಾರೆ.

ಬಿ.ಆರ್.ಪಾಟೀಲ್, ರಾಜು ಕಾಗೆಯವರು ಈಗ ಮಾತನಾಡಿರುವುದು ಯಾಕೆ ಎನ್ನುವುದಕ್ಕೆ ವ್ಯಾಖ್ಯಾನಗಳು ಬೇರೆ ಇರಬಹುದಾದರೂ ವಿಷಯ ವಾಸ್ತವವನ್ನು ಮರೆ ಮಾಚುವಂತಿಲ್ಲ. ಈ ಆರೋಪಗಳು ಹೈಕಮಾಂಡ್ ವರೆಗೂ ಹೋಗಿರುವುದು ಮತ್ತು ಮುಖ್ಯಮಂತ್ರಿಗಳು ಸಂಬಂಧಿಸಿದ ವರನ್ನು ಕರೆದು ಮಾತನಾಡುತ್ತೇನೆ ಎಂದು ಹೇಳಿರುವುದು ಪಕ್ಷದೊಳಗಿನ ಹೊಂದಾಣಿಕೆಗೆ ಸಹಾಯಕವಾಗಬಹುದೇ ಹೊರತಾಗಿ ಭ್ರಷ್ಟಾಚಾರ ನಿಗ್ರಹ ಮಾಡುವ ಕಡೆಗೆ ಕ್ರಮ ಎಂದಾಗುವುದಿಲ್ಲ. ಇಲ್ಲಿವರೆಗೂ ಸರ್ಕಾರ ಭ್ರಷ್ಟಾಚಾರದ ಬಗ್ಗೆ ಗಟ್ಟಿ ಧ್ವನಿಯನ್ನೇ ಹೊರಡಿಸಿಲ್ಲ ಎನ್ನುವುದು ಗಮನಾರ್ಹ. ಪರಿಸ್ಥಿತಿ ಹೀಗಿರುವಾಗ ತಾವು ಭ್ರಷ್ಟಾಚಾರದ ವಿರೋಧಿಗಳು ಅದನ್ನು ತಡೆಗಟ್ಟಿದ್ದೇವೆ ಎಂದು ಹೇಳಿಕೊಳ್ಳುವುದು ಯಾವ ರೀತಿಯಲ್ಲೂ ಸಮರ್ಥನೀಯವಲ್ಲ. ಬದಲಾಗಿ, ಆತ್ಮ ವಂಚನೆಯೇ ಆಗಿದೆ. ಭ್ರಷ್ಟಾಚಾಚಾರಕ್ಕೆ ಸಿಕ್ಕಿರುವ ಮುಕ್ತಾವಕಾಶವು ಸಾರ್ವಜನಿಕ ನಂಬಿಕೆಗೆ ಬಗೆದ ದ್ರೋಹವಾಗಿದೆ. ಯಾಕೆಂದರೆ ಹಿಂದಿನ ಬಿಜೆಪಿ ಸರ್ಕಾರ ಶೇ.40ರಷ್ಟು ಲಂಚದ ಸರ್ಕಾರ ಎಂದು ಬಹುದೊಡ್ಡದಾಗಿ ಪ್ರಚಾರಿಸಿ ಭ್ರಷ್ಟಾಚಾರ ನಿರ್ಮೂಲನೆಯ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷ ಜನತೆಗೆ ಪರಿಹಾರವನ್ನು ನೀಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಅಧಿಕಾರಕ್ಕೆ ಬಂದ ಹೊಸ್ತಿಲಿನಿಂದಲೇ ಆಡಳಿತವನ್ನು ಬಿಗಿಗೊಳಿಸಿ, ಪಾರದರ್ಶಕಗೊಳಿಸಿ ಭ್ರಷ್ಟಾಚಾರವನ್ನು ತಡೆಗಟ್ಟುವಲ್ಲಿ ದೃಢ ಕ್ರಮಗಳನ್ನು ಕೈಗೊಳ್ಳಬೇಕಿತ್ತು. ಆದರೆ ಬಿಜೆಪಿ ಅಧಿಕಾರದ ಅವಧಿಯಲ್ಲಿ ಆಗಿರುವ ಭ್ರಷ್ಟಾಚಾರದ ದೂರಿನ ಕೆಲವು ಪ್ರಕರಣಗಳನ್ನು ನ್ಯಾಯಮೂರ್ತಿ ನಾಗಮೋಹನದಾಸ್, ನ್ಯಾ. ಡಿ.ಕುನ್ಹಾ ಅವರ ನೇತೃತ್ವದ ಆಯೋಗಗಳನ್ನು ನೇಮಿಸಿ ತನಿಖೆಗೆ ಒಪ್ಪಿಸಿ ವರದಿಯನ್ನು ಪಡೆಯುವುದು ಭ್ರಷ್ಟಾಚಾರದ ವಿರುದ್ಧದ ಹೋರಾಟವಾಗುವುದಿಲ್ಲ. ಮತ್ತು ಅದು ಭ್ರಷ್ಟಾಚಾರವನ್ನು ತಡೆಯುವುದಿಲ್ಲ. ನಿಷ್ಟುರ ಕ್ರಮ ವಹಿಸಬೇಕಾದ ಪ್ರಕರಣಗಳು ಇವಾದರೂ ಉದ್ದೇಶಿತ ಗುರಿಯೇ ದುರ್ಬಲವಾಗಿರುವಾಗ ಅಥವಾ ಸಾರ್ವಜನಿಕ ಹಿತದ ಬದ್ಧತೆ ಇಲ್ಲದಿರುವಾಗ ಕೇವಲ ರಾಜಕೀಯ ಉದ್ದೇಶಿತ ಪ್ರಕ್ರಿಯೆಗಳಾಗಿ ನಿಷ್ಕ್ರಿಯ ಪ್ರದರ್ಶನಗಳಾಗಬಹುದು. ಅತಿ ವಿರಳ ಪದ್ಧತಿ ಎಂಬಂತೆ ಆಯೋಗಗಳ ವರದಿಗಳ ವಾಸ್ತವಿಕ ಅಂಶಗಳನ್ನು ಇರಿಸಿಕೊಂಡು ಒಂದು ವೇಳೆ ಕೆಲವರ ಮೇಲೆ ಕ್ರಮ ವಹಿಸಬಹುದಾದರೂ ಆಡಳಿತವನ್ನು ಸ್ವಚ್ಛಗೊಳಿಸಿದಂತೇನೂ ಆಗುವುದಿಲ್ಲ. ಕರ್ನಾಟಕದಲ್ಲಿನ ಅದಿರಿನ ಗಣಿಗಳ್ಳರ ಲೂಟಿಯಿಂದ ರಾಜ್ಯ ಬೊಕ್ಕಸಕ್ಕೆ ಆಗಿರುವ ಒಂದೂವರೆ ಲಕ್ಷ ಕೋಟಿಯಷ್ಟು ಅಕ್ರಮ ಹಣವನ್ನು ವಶಪಡಿಸಿಕೊಳ್ಳಬೇಕು ಎಂದು ಆಗ್ರಹಿಸಿದ ಸಚಿವ ಹೆಚ್.ಕೆ.ಪಾಟೀಲರ ಪತ್ರ ನಿರ್ಲಕ್ಷಿಸುವಂತಹುದಲ್ಲ.

ಭ್ರಷ್ಟಾಚಾರದ ನಿಗ್ರಹಕ್ಕೆಂದು ರಚಿಸಲಾಗಿರುವ ಲೋಕಾಯುಕ್ತದ ಒಳಗೂ ಕೆಲವು ಉನ್ನತ ಅಧಿಕಾರಿಗಳು ಭ್ರಷ್ಟಾಚಾರದ ಪ್ರಕರಣಗಳಲ್ಲಿ ಸಿಲುಕಿರುವುದು ವರದಿಯಾಗಿದೆ. ಇದು ಸನ್ನಿವೇಶದ ಗಂಭೀರತೆಯನ್ನು ಮನಗಾಣಿಸುತ್ತದೆ. ಬೇಲಿಯೇ ಎದ್ದು ಹೊಲ ಮೇಯುತ್ತಿರುವ ದುರಂತ ಇದು. ಮೇಲಾಗಿ ಭ್ರಷ್ಟಾಚಾರದ ವಿರುದ್ಧ ಒಂದಿಷ್ಟು ಕ್ರಮಗಳನ್ನು ಕೈಗೊಳ್ಳಬಹುದಾದ ಅಧಿಕಾರ ಶಕ್ತಿ ಇದ್ದ ಲೋಕಾಯುಕ್ತ ವ್ಯವಸ್ಥೆಯು ಮಿತಿಯಲ್ಲಾದರೂ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿರುವಾಗಲೇ ಅದನ್ನು ಬಲಪಡಿಸದೇ ಭ್ರಷ್ಟಾಚಾರ ವಿರೋಧಿ ದಳ ಎನ್ನುವುದನ್ನು ಕಾಂಗ್ರೆಸ್ ಸರಕಾರವೇ ರಚಿಸಿದ್ದು (2026) ಲೋಕಾಯುಕ್ತವನ್ನು ಬಲಪಡಿಸುವ ಕ್ರಮ ಆಗದೇ ದುರ್ಬಲಗೊಳಿಸುವುದೇ ಆಗಿತ್ತು. ಲಕ್ಷಾಂತರ ಕೋಟಿ ವಂಚನೆಯ ಅಕ್ರಮ ಗಣಿಗಾರಿಕೆಯ ಹಗರಣವನ್ನು ಬಯಲಿಗೆಳೆದು ಕರ್ನಾಟಕ ಲೋಕಾಯುಕ್ತ ಖ್ಯಾತವಾಗಿತ್ತು.

ಆಡಳಿತದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುವ ಕರ್ನಾಟಕ ಲೋಕಸೇವಾ ಆಯೋಗ (ಕೆ.ಪಿ.ಎಸ್.ಸಿ) ದಲ್ಲಿನ ಭ್ರಷ್ಟಾಚಾರ, ಜಾತಿ, ಸ್ವಜನಪಕ್ಷಪಾತಕ್ಕೆ ಕಡಿವಾಣವೇ ಇಲ್ಲ. ಅದು ಹಗರಣಗಳಿಂದ ಮುಕ್ತವೂ ಆಗಲಿಲ್ಲ.

ಹೀಗಿರುವಾಗ ಸಿದ್ಧರಾಮಯ್ಯ, ಡಿ.ಕೆ.ಶಿವಕುಮಾರ್ ರವರು ಈಗಲೂ ಸ್ವಪಕ್ಷೀಯರಿಂದ ಬಂದ ಆರೋಪಗಳಿಗೆ ಕೇವಲ ಉತ್ತರಿಸುವುದು, ಭಿನ್ನಮತೀಯರ ಬಾಯಿ ಮುಚ್ಚಿಸುವುದು ಬಂದ ಆರೋಪಗಳಿಗೆ ಉತ್ತರ ಆಗಲಾರದು. ಮುಖ್ಯಮಂತ್ರಿಗಳು, ಹೈಕಮಾಂಡ್ ಒಟ್ಟಾರೆ ಈಗಿನ ಪರಿಸ್ಥಿತಿ ಬದಲಾಯಿಸಲು ದಿಟ್ಟ ಕ್ರಮ ವಹಿಸಬೇಕು.

ಅತಿ ಭ್ರಷ್ಟ ಮತ್ತು ಮತೀಯ ದ್ವೇಷ ಕಾರುವ ಕೋಮುವಾದಿ ಶಕ್ತಿಗಳನ್ನು ಸೋಲಿಸಿದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಕೊಟ್ಟಿರುವ ಜನಾದೇಶವನ್ನು ಗಮನದಲ್ಲಿರಿಸಿ ಆಡಳಿತವನ್ನು ಸರಿದಾರಿಗೆ ತರಬೇಕಿದೆ. ಭ್ರಷ್ಟಾಚಾರ ನಿಗ್ರಹಿಸುವ ಸಂಸ್ಥೆಗಳಿಗೆ ಹೆಚ್ಚಿನ ಬಲ ಮತ್ತು ಸ್ವಾತಂತ್ರ್ಯವನ್ನು ನೀಡಬೇಕಿದೆ. ಸಚಿವ ಸಂಪುಟದಿಂದ ಹಿಡಿದು ಎಲ್ಲಾ ಹಂತಗಳಲ್ಲೂ ಭ್ರಷ್ಟಾಚಾರದ ತಡೆಗೆ ಸಮರವನ್ನು ಸಾರದಿದ್ದಲ್ಲಿ ಮತ್ತು ಅದಕ್ಕೆ ಬೇಕಾದ ರಾಜಕೀಯ ಇಚ್ಛಾಶಕ್ತಿ ತೋರಿ ಕ್ರಮ ವಹಿಸದಿದ್ದಲ್ಲಿ ಇದು ಅಸಾಧ್ಯ. ಈಗಾಗಲೇ ಸರ್ಕಾರದ ವಿರುದ್ಧ ಭುಗಿಲೇಳುತ್ತಿರುವ ಅತೃಪ್ತಿಯನ್ನು ಬಳಸಿ ತಿರಸ್ಕಾರಗೊಂಡ ಭ್ರಷ್ಟ ಕೋಮುವಾದಿ ಶಕ್ತಿಗಳು ಅಧಿಕಾರಕ್ಕೆ ಬರಲು ಎಲ್ಲವನ್ನು ಬಳಸುತ್ತಿವೆ. ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರವೇ ಅದಕ್ಕೆ ಅವಕಾಶಗಳನ್ನು ಮಾಡಿಕೊಡುತ್ತಿದೆ. ಹೀಗಾಗಿ ಭ್ರಷ್ಟಾಚಾರದ ವಿರುದ್ಧದ ಕಠಿಣ ಕ್ರಮಗಳು ಮತ್ತು ಜನತೆಗೆ ನೀಡುವ ಪರಿಹಾರಗಳು ಅಂತಹ ಶಕ್ತಿಗಳನ್ನು ಎದುರಿಸಲು ಅವಕಾಶಗಳನ್ನು ನಿರ್ಮಿಸುತ್ತದೆ. ಹೀಗಾಗಿ ಇದು ಅತ್ಯಂತ ಮಹತ್ವದ ರಾಜಕೀಯ ಕರ್ತವ್ಯವೂ ಆಗಿದೆ ಎನ್ನುವುದನ್ನು ಮರೆಯಕೂಡದು.

ಬಿಹಾರದಲ್ಲಿ ಚುನಾವಣಾ ಪಟ್ಟಿಗಳ 'ವಿಶೇಷ ಗಾಢ ಪರಿಷ್ಕರಣೆ' ಎನ್‌ಆರ್‌ಸಿ ತೆರನ ಕ್ರಮ, ಇದನ್ನು ಕೈಬಿಡಬೇಕು-ಸಿಪಿಐ(ಎಂ)

ಬಿಹಾರದಲ್ಲಿ ಚುನಾವಣಾ ಆಯೋಗ 'ವಿಶೇಷ ಗಾಢ ಪರೀಕ್ಷಣೆ' ನಡೆಸಲು ನಿರ್ಧರಿಸಿದೆ. ಈ ಸಮಸ್ತ ಕ್ರಮ ಪ್ರಸ್ತಾವಿತ ಎನ್‌ಆರ್‌ಸಿಯಂತೆಯೇ ಇದೆ. ಇದನ್ನು ಮತದಾರರ ಒಂದು ವಿಭಾಗದ ಮೇಲೆ ಗುರಿಯಿಡಲು ಬಳಸಬಹುದು, ಆಮೂಲಕ ಅವರಿಗೆ ಮತದಾನದ ಹಕ್ಕನ್ನು ವಂಚಿಸಬಹುದು ಎಂಬ ಭಯ ಇದೆ. ಆದ್ದರಿಂದ ಇದನ್ನು ಕೈಬಿಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ನೀಲೋತ್ಪಲ್ ಬಸು ಚುನಾವಣಾ ಆಯುಕ್ತರನ್ನು ಆಗ್ರಹಿಸಿದ್ದಾರೆ.

ಚುನಾವಣಾ ಪಟ್ಟಿಗಳ ಪರಾಮರ್ಶೆ ಒಂದು ಸಾಮಾನ್ಯ ಪ್ರಕ್ರಿಯೆ. ಆದರೆ ಚುನಾವಣಾ ಆಯೋಗದ ಪ್ರಸ್ತಾವನೆಗಳಲ್ಲಿ ಚುನಾವಣಾ ಪಟ್ಟಿಯಲ್ಲಿ ಹೆಸರುಗಳನ್ನು ಸೇರಿಸುವ/ತೆಗೆಯುವ ಬಹುಪಾಲು ಹೊಣೆಯನ್ನು ಮತದಾರರ ಮೇಲೆಯೇ ಹೇರಿರುವಂತೆ ಕಾಣಿಸುತ್ತದೆ. ಇದಲ್ಲದೆ, ಇದನ್ನು ಕೈಗೆತ್ತಿಕೊಂಡಿರುವ ಸಮಯವೂ ಕಳವಳ ಉಂಟು ಮಾಡುವಂತದ್ದು, ಏಕೆಂದರೆ ಚುನಾವಣೆ ಸಮೀಪದಲ್ಲಿರುವಾಗಲೇ ಇದನ್ನು ನಡೆಸಲಾಗುತ್ತಿದೆ ಎಂದು ನೀಲೋತ್ಪಲ ಬಸು ಮುಖ್ಯ ಚುನಾವಣಾ ಆಯುಕ್ತರಿಗೆ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ. ಬಿಹಾರ ವಿಧಾನಸಭಾ ಚುನಾವಣೆಗಳು ಕಳೆದ ಬಾರಿ ಅಕ್ಟೋಬರ್–ನವಂಬರ್ ತಿಂಗಳಲ್ಲಿ ನಡೆದಿದ್ದವು. ಆಯೋಗ ಅಂಗೀಕರಿಸಿರುವ ವಿಧಿ–ವಿಧಾನ ಹಲವು ಕಾರಣಗಳಿಂದಾಗಿ ಆಕ್ಷೇಪಕಾರಿ ಎಂದಿರುವ ಅವರು ತಮ್ಮ ಪತ್ರದಲ್ಲಿ ಪಕ್ಷದ ಆಕ್ಷೇಪಗಳನ್ನು ಹೀಗೆ ಪಟ್ಟಿ ಮಾಡಿದ್ದಾರೆ:

1. ಇಂತಹ ಒಂದು ಕ್ರಮವನ್ನು ಕೈಗೊಳ್ಳುವ ಮೊದಲು ಚುನಾವಣಾ ಆಯೋಗ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕಾಗಿತ್ತು. ಅದರ ಬದಲು ಈ ಕಾರ್ಯಕ್ರಮದ ಆರಂಭವನ್ನು ಔಪಚಾರಿಕವಾಗಿ ತಿಳಿಸಲಷ್ಟೇ ಸಭೆ ಕರೆಯಲಾಯಿತು.
2. ಇಂತಹ ಒಂದು ವಿಸ್ತಾರವಾದ ಕ್ರಮವನ್ನು ರಾಜ್ಯದಲ್ಲಿ ಚುನಾವಣೆ ನಡೆಯುವ ಕೆಲವೇ ತಿಂಗಳ ಮೊದಲು ಕೈಗೊಳ್ಳುವುದು ವಾತಾವರಣವನ್ನು ಕದಡುತ್ತದೆ ಮತ್ತು ಅಪಾಯದಿಂದ ಕೂಡಿದೆ. ಈ ಇಡೀ ಕ್ರಮವನ್ನು ಪೂರ್ಣಗೊಳಿಸಲು ಕೊಟ್ಟಿರುವ ಸಮಯ ಚೌಕಟ್ಟು ಕೇವಲ ಒಂದು ತಿಂಗಳು.
3. ಅನರ್ಹ ಮತದಾರರ ಹೆಸರನ್ನು ತೆಗೆಯುವ ಹೊಣೆಗಾರಿಕೆ ಸಂಬಂಧಪಟ್ಟ ಬಿಎಲ್‌ಒಗಳದ್ದು. ಒಂದು ನಿರ್ದಿಷ್ಟ ಸ್ಥಳದಲ್ಲಿ ಮತದಾರರಾಗಿ ತಮ್ಮ ದಾವೆಯನ್ನು ತಾವೇ ಊರ್ಜಿತಗೊಳಿಸುವ ಹೊಣೆಯನ್ನು ಸಾಮಾನ್ಯ ಮತದಾರರ ಮೇಲೆ ಹೇರಲು ಸಾಧ್ಯವಿಲ್ಲ. ಈಗಾಗಲೇ ಪಟ್ಟಿಯಲ್ಲಿರುವ ಮತದಾರರು ಇದನ್ನು ಮಾಡಬೇಕೆಂದು ನಿರೀಕ್ಷಿಸಲಾಗಿದೆ.
4. ಈಗಾಗಲೇ ಮತದಾರರಾಗಿರುವವರಿಗೆ ಬಿಎಲ್‌ಒ 'ಗಣನೆ ಪತ್ರ'ವನ್ನು (ಎನ್ಯುಮರೇಷನ್ ಫಾರಂ) ಕೊಡುವಲ್ಲಿ ವಿಫಲನಾದರೆ ಮತ್ತು ಆ ಮತದಾರರಿಗೆ ಅದನ್ನು ಪಡೆಯುವ ವಿಧಾನದ ಬಗ್ಗೆ ತಿಳಿದಿಲ್ಲವಾದರೂ ಆ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆಯಲಾಗುವುದು. ಇಂಟರ್ನೆಟ್ ಸಂಪರ್ಕ ಮತ್ತು ಇ–ಸಾಕ್ಷರತೆ ಒತ್ತಟ್ಟಿಗಿರಲಿ, ಸಾಮಾನ್ಯ ಸಾಕ್ಷರತೆಯೂ ಇಲ್ಲದಿರುವಾಗ, ಇಂತಹ ಮತದಾರರು ಫಾರಂಗಳನ್ನು ಡೌನ್‌ಲೋಡ್/ಅಪ್‌ಲೋಡ್ ಮಾಡಬೇಕೆಂದು ಚುನಾವಣಾ ಆಯೋಗ ಹೇಗೆ ತಾನೇ ನಿರೀಕ್ಷಿಸುತ್ತದೆ?
5. ಈಗ ಮತದಾರರಾಗಿರುವವರು ಎಲ್ಲರೂ ವಾಸದ ಪುರಾವೆಯನ್ನು ಒದಗಿಸಬೇಕು ಎಂದು ಒತ್ತಾಯಿಸುವುದು, ಹೇಳಿದ ದಸ್ತಾವೇಜುಗಳು ಇಲ್ಲದವರಿಗೆ ಅನಗತ್ಯ ಕಿರುಕುಳಕ್ಕೆ ದಾರಿ ಮಾಡಿಕೊಡುತ್ತದೆ.
6. ತಂದೆ–ತಾಯಿಯರ ಪುರಾವೆಗಳಿಗೆ ಒತ್ತಾಯಿಸುವುದು ವಿಷಯವನ್ನು ಮತ್ತಷ್ಟು ಕ್ಲಿಷ್ಟಗೊಳಿಸುತ್ತದೆ.
7. ಇದರಿಂದಾಗಿ ಬೇರೆಲ್ಲೂ ಮತದಾರರಾಗಿ ನೋಂದಾಯಿತರಾಗಿರದ, ತಮ್ಮ ವಿಳಾಸದಿಂದ ತಾತ್ಕಾಲಿಕವಾಗಿ ವಲಸೆ ಹೋಗಿರುವ, ಪ್ರಸ್ತುತ ರಾಜ್ಯದಲ್ಲಿ ಇರದ ಮತ್ತು ಈ ಕಾರ್ಯಕ್ರಮ ಮುಕ್ತಾಯವಾಗುವ ಮೊದಲು ಮರಳಿ ಬರಲಾಗದ ಹಲವಾರು ನೈಜ ಮತದಾರರ ಹೆಸರುಗಳನ್ನು ತೆಗೆದು ಹಾಕಲಾಗುವುದು.
8. ಈ ಸಮಸ್ತ ಕ್ರಮ ಪ್ರಸ್ತಾವಿತ ಎನ್‌ಆರ್‌ಸಿಯಂತೆಯೇ ಇದೆ. ಇದನ್ನು ಮತದಾರರ ಒಂದು ವಿಭಾಗದ ಮೇಲೆ ಗುರಿಯಿಡಲು ಬಳಸಬಹುದು, ಆ ಮೂಲಕ ಅವರಿಗೆ ಮತದಾನದ ಹಕ್ಕನ್ನು ವಂಚಿಸಬಹುದು ಎಂಬ ಭಯ ಉಂಟಾಗಿದೆ.

ಬಿಹಾರದ ಮುಖ್ಯ ಚುನಾವಣಾ ಆಯುಕ್ತರು ಜೂನ್ 25ರಂದು ಕರೆದ ಸಭೆಯಲ್ಲಿ ಭಾಗವಹಿಸಿದ ರಾಜಕೀಯ ಪಕ್ಷಗಳಲ್ಲಿ ಹೆಚ್ಚಿನವು ಈ ಕ್ರಮವನ್ನು ವಿರೋಧಿಸಿದವು ಮತ್ತು ಅದನ್ನು ಕೈಬಿಡುವಂತೆ ಕೇಳಿದವು ಎಂಬುದನ್ನೂ ಗಮನಿಸಬೇಕಾಗಿದೆ ಎಂದು ನೀಲೋತ್ಪಲ ಬಸು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಬಿಹಾರದಲ್ಲಿ ಕೈಗೊಳ್ಳಬೇಕೆಂದಿರುವ ಈ ಕ್ರಮವನ್ನು ಸದ್ಯದಲ್ಲಿ ನಡೆಯಲಿರುವ ಇತರ ಚುನಾವಣೆಗಳಲ್ಲೂ ಅಂಗೀಕರಿಸುವುದಾಗಿ ಚುನಾವಣಾ ಆಯೋಗ ಘೋಷಿಸಿರುವುದು ಕಳವಳಕಾರಿ. ಈ ಕಸರತ್ತನ್ನು ಕೈಬಿಡಬೇಕು ಎಂದು ಚುನಾವಣಾ ಆಯೋಗವನ್ನು ತಮ್ಮ ಪತ್ರದಲ್ಲಿ ನೀಲೋತ್ಪಲ ಬಸು ಆಗ್ರಹಿಸಿದ್ದಾರೆ.

ಜೂನ್ 25: ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಪ್ರತಿರೋಧದ ದಿನ

ಬಿ.ವಿ. ರಾಘವುಲು

ಜೂನ್ 25, 1975 ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ ದಿನ. ಸರ್ಕಾರ ವಿರೋಧ ಪಕ್ಷಗಳ ನೂರಾರು ನಾಯಕರನ್ನು ರಾತ್ರೋರಾತ್ರಿ ಬಂಧಿಸಿ ಜೈಲಿಗೆ ಹಾಕಿತು. ಸೆನ್ಸಾರ್ಶಿಪ್ ಹೇರುವ ಮೂಲಕ ಪತ್ರಿಕಾ ಮಾಧ್ಯಮವನ್ನು ಮೌನಗೊಳಿಸಿತು. ಮುಷ್ಕರಗಳನ್ನು ನಿಷೇಧಿಸಿತು. ನೂರಾರು ಕಾರ್ಮಿಕ ನಾಯಕರನ್ನು ಜೈಲಿಗೆ ಹಾಕಿತು. ಆದರೆ ಈಗ ಜೂನ್ 25 ಅನ್ನು 'ಸಂವಿಧಾನ ಹತ್ಯೆ ದಿವಸ್' ಎಂದು ಘೋಷಿಸಿರುವ ಪಕ್ಷದ ಸೈದ್ಧಾಂತಿಕ ಗುರುಗಳು ಆಗ ಸರ್ವಾಧಿಕಾರಶಾಹಿಗೆ ಶರಣಾದವರು ಈಗ ತಮ್ಮನ್ನು ಪ್ರಜಾಪ್ರಭುತ್ವದ ರಕ್ಷಕರು ಎಂದು ಹೇಳಿಕೊಳ್ಳುತ್ತಿದ್ದಾರೆ. ಇಂದಿರಾ ಗಾಂಧಿಯವರ ತುರ್ತು ಪರಿಸ್ಥಿತಿ 21 ತಿಂಗಳುಗಳ ಕಾಲ ಮುಂದುವರೆಯಿತು. ಮೋದಿಯವರ 'ತುರ್ತು ಪರಿಸ್ಥಿತಿ ಕಾಲದ ನಿರಂಕುಶಾಧಿಕಾರದ ಪುನರುಜ್ಜೀವನ'ದ ಪರಿಸ್ಥಿತಿ ಹನ್ನೊಂದನೇ ವರ್ಷವನ್ನು ಪ್ರವೇಶಿಸಿದೆ. ಅಂದಿನ 'ಮಿಸಾ' ಪಾತ್ರವನ್ನೇ ಇಂದಿನ 'ಯುಎಪಿಎ' ನಿರ್ವಹಿಸುತ್ತಿದೆ.

ಜೂನ್ 25/26, 1975 ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಅದು ನನ್ನ ಪದವಿ ಪರೀಕ್ಷೆಗಳ ಕೊನೆಯ ದಿನವಾಗಿತ್ತು. ನಾನು ಸಿಪಿಐ(ಎಂ)ನ ಪೂರ್ಣಾವಧಿಯ ಕಾರ್ಯಕರ್ತನಾಗಿ ಸೇರಿದ ದಿನ. ಸರ್ವಾಧಿಕಾರವು ದೇಶವನ್ನು ಅಂಧಕಾರದಲ್ಲಿ ಮುಳುಗಿಸಿದ ದಿನ. ಆ ದಿನವನ್ನು ನಾನು ಎಂದಿಗೂ ಮರೆಯುವುದಿಲ್ಲ. ನಮ್ಮಲ್ಲಿ ಯಾರೂ ಕೂಡ ಮರೆಯಬಾರದು.

ಶ್ರೀಮತಿ ಇಂದಿರಾ ಗಾಂಧಿ ಪ್ರಧಾನ ಮಂತ್ರಿಯಾಗಿದ್ದ ಅಂದಿನ ಕಾಂಗ್ರೆಸ್ ಕೇಂದ್ರ ಸರ್ಕಾರವು, ಜೂನ್ 25ರ ಮಧ್ಯರಾತ್ರಿ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿತು. ವಿರೋಧ ಪಕ್ಷಗಳ ನೂರಾರು ನಾಯಕರನ್ನು ರಾತ್ರೋರಾತ್ರಿ ಬಂಧಿಸಿ ಜೈಲಿಗೆ ಹಾಕಿತು. ಸೆನ್ಸಾರ್ಶಿಪ್ ಹೇರುವ ಮೂಲಕ ಪತ್ರಿಕಾ ಮಾಧ್ಯಮವನ್ನು ಮೌನಗೊಳಿಸಿತು. ಮುಷ್ಕರಗಳನ್ನು ನಿಷೇಧಿಸಿತು. ನೂರಾರು ಕಾರ್ಮಿಕ ನಾಯಕರನ್ನು ಜೈಲಿಗೆ ಹಾಕಿತು. ವಿದ್ಯಾರ್ಥಿ ನಾಯಕರನ್ನು ಬಂಧಿಸಿತು. ಪ್ರತಿಭಟಿಸುವ ಹಕ್ಕನ್ನು ಸಹ ತೆಗೆದುಹಾಕಿದರು. ಚುನಾವಣೆಗಳನ್ನು ರದ್ದುಗೊಳಿಸಿದರು. ವೇತನಗಳನ್ನು ಸ್ಥಗಿತಗೊಳಿಸಿದರು. ರಜಾ ದಿನಗಳನ್ನು ಕಡಿತಗೊಳಿಸಿದರು. ಕೆಲಸದಿಂದ ತೆಗೆದುಹಾಕುವುದನ್ನು ಕಾನೂನುಬದ್ಧಗೊಳಿಸಿದರು. ತುಟ್ಟಿಭತ್ಯೆಯನ್ನು ಅರ್ಧಕ್ಕೆ ಇಳಿಸಿದರು. ರಾತ್ರೋರಾತ್ರಿ ಮೂಲಭೂತ ಹಕ್ಕುಗಳನ್ನು ನಾಶಪಡಿಸಿದರು. ಕೊಳೆಗೇರಿಗಳನ್ನು, ಗುಡಿಸಲುಗಳನ್ನು ನೆಲಸಮ ಮಾಡಿದರು. ದೆಹಲಿ ನಗರವೊಂದರಲ್ಲೇ 1,50,105 ಮನೆಗಳನ್ನು ಕೆಡವಿಹಾಕಿದರು. ದೇಶಾದ್ಯಂತ ಬಲವಂತದ ಕುಟುಂಬ ನಿಯಂತ್ರಣ ಶಸ್ತ್ರಚಿಕಿತ್ಸೆ ನಡೆದವು. ಒಂದು ಲಕ್ಷಕ್ಕೂ ಹೆಚ್ಚು ಜನರನ್ನು, ವಿರೋಧ ಪಕ್ಷದ ನಾಯಕರು ಮತ್ತು ಕಾಂಗ್ರೆಸ್ ನಲ್ಲಿನ ಭಿನ್ನಮತೀಯರನ್ನು ರಾತ್ರೋರಾತ್ರಿ ಬಂಧಿಸಿ ಜೈಲಿಗೆ ಹಾಕಿದರು. ನೂರಾರು ಪತ್ರಕರ್ತರು, ಕಾರ್ಮಿಕ ಸಂಘಟನೆಗಳ ಮುಖಂಡರು, ವಿದ್ಯಾರ್ಥಿ ಮುಖಂಡರು ಮತ್ತು ರಾಜಕೀಯ ಪಕ್ಷದ ಕಾರ್ಯಕರ್ತರನ್ನು ಬಂಧಿಸಿದರು.

ವಿಚಾರಣೆಯಿಲ್ಲದೆ ಜೈಲಿಗೆ

ಜನರನ್ನು ವಿಚಾರಣೆಯಿಲ್ಲದೆ ಜೈಲಿಗೆ ಹಾಕಲು MISA, DISIR, COFEPOSA ನಂತಹ ಕ್ರೂರವಾದ ಕಾನೂನುಗಳನ್ನು ಬಳಸಿಕೊಳ್ಳಲಾಯಿತು. MISA ಅಡಿಯಲ್ಲಿ 34,988 ಜನರನ್ನು ಮತ್ತು DISIR ಅಡಿಯಲ್ಲಿ 75,818 ಜನರನ್ನು ಬಂಧಿಸಲಾಯಿತು ಎಂದು ಸರ್ಕಾರಿ ಅಂಕಿಅಂಶಗಳು ಬಹಿರಂಗಪಡಿಸುತ್ತವೆ. ಹಲವರನ್ನು ಕಸ್ಟಡಿಯಲ್ಲಿ ಹಿಂಸಿಸಿದರು. ಕೆಲವರನ್ನು ಕೊಂದರೂ ಕೂಡ! 1976 ಮಾರ್ಚ್ 1ರಂದು ಕ್ಯಾಲಿಕಟ್‌ನ ಪ್ರಾದೇಶಿಕ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಪಿ.ರಾಜನ್ ಅವರ ಕಸ್ಟಡಿ ಹತ್ಯೆಯು ಅಂದಿನ ಕ್ರೌರ್ಯಕ್ಕೆ ಒಂದು ಚುಕ್ಕೆಯಾಗಿದೆ. ನನ್ನ ವಿದ್ಯಾರ್ಥಿ ಚಳವಳಿಯ ಸಂಗಾತಿ, ರೂಮ್‌ಮೇಟ್ ಆಗಿದ್ದ ನಾಯಕರೊಬ್ಬರನ್ನು ಹಾಗೂ ಅವರೊಂದಿಗೆ ಕೋಣೆಯಲ್ಲಿ ನಿದ್ರಿಸುತ್ತಿದ್ದ ಅತಿಥಿಯನ್ನು ಸಹ ಬಂಧಿಸಿ ಜೈಲಿಗೆ ಕಳುಹಿಸಿದರು. ಆ ಅತಿಥಿಯ ಅನುಕೂಲಕ್ಕಾಗಿ ಮಲಗಲು ನಾನು ಮತ್ತೊಂದು ಕೋಣೆಗೆ ಹೋಗಿದ್ದೆ. ಇದರಿಂದಾಗಿ ನಾನು ಬಂಧನದಿಂದ ತಪ್ಪಿಸಿಕೊಂಡೆ.

ನಿರ್ಬಂಧದೊಂದಿಗೆ, ದಬ್ಬಾಳಿಕೆಯಿಂದ ಅಧಿಕಾರವನ್ನು ಉಳಿಸಿಕೊಳ್ಳಬಹುದು ಎಂದು ಶ್ರೀಮತಿ ಇಂದಿರಾ ಗಾಂಧಿ ನಂಬಿದ್ದರು. ಆದರೆ ಜನರು ಪ್ರಜಾಪ್ರಭುತ್ವವನ್ನು ರಕ್ಷಿಸಲು ಸಿದ್ಧರಾಗಿದ್ದರು. ತುರ್ತು ಪರಿಸ್ಥಿತಿಗೆ ಅಧಿಕಾರ ಮುದ್ರೆ ಒತ್ತಲು ಸಭೆ ಸೇರಿದ ಸಂಸತ್ತಿನಲ್ಲಿ ಸಿಪಿಐ(ಎಂ) ನಾಯಕ ಕಾಮ್ರೇಡ್ ಎ.ಕೆ. ಗೋಪಾಲನ್ ಪ್ರತಿಭಟನೆಯ ಧ್ವನಿ ಎತ್ತಿದರು. ತುರ್ತು ಪರಿಸ್ಥಿತಿಯ ವಿರುದ್ಧದ ಅವರ ಭಾಷಣವನ್ನು ಮುದ್ರಿಸಿ ವಿದ್ಯಾರ್ಥಿಗಳಲ್ಲಿ ರಹಸ್ಯವಾಗಿ ವಿತರಿಸಲಾಗಿತ್ತು ಎಂದು ನನಗೆ ಇನ್ನೂ ನೆನಪಿದೆ.

ಸಾಂಕೇತಿಕ ಕ್ರಿಯೆಗಳ ಮೂಲಕ ವಾರ್ತಾ ಪತ್ರಿಕೆಗಳ ಪ್ರತಿಭಟನೆ

ಕೆಲವು ವಾರ್ತಾ ಪತ್ರಿಕೆಗಳು ಸಹಾ ತಮ್ಮ ಸಾಂಕೇತಿಕ ಕ್ರಿಯೆಗಳ ಮೂಲಕ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದವು. ಜೂನ್ 26ರಂದು, ಟೈಮ್ಸ್ ಆಫ್ ಇಂಡಿಯಾ "ಪ್ರಜಾಪ್ರಭುತ್ವ, ಸತ್ಯದ ಪ್ರೀತಿಯ ಪತಿ, ಸ್ವಾತಂತ್ರ್ಯದ ಪ್ರೀತಿಯ ಪಿತ, ನಂಬಿಕೆ, ಭರವಸೆ ಮತ್ತು ನ್ಯಾಯದ ಸಹೋದರ ಜೂನ್ 26ರಂದು ತೀರಿಕೊಂಡಿತು" ('Democracy, Beloved Husband of Truth, Loving Father of Liberty, Brother of Faith, Hope and Justice Expired on June 26') ಎಂಬ ಶೀರ್ಷಿಕೆಯ ಮರಣದಂಡನೆಯನ್ನು ಪ್ರಕಟಿಸಿತು. ಜೂನ್ 28ರಂದು, ದಿ ಇಂಡಿಯನ್ ಎಕ್ಸ್‌ಪ್ರೆಸ್ ಖಾಲಿ ಸಂಪಾದಕೀಯವನ್ನು ಪ್ರಕಟಿಸಿತು. ಫೈನಾನ್ಷಿಯಲ್ ಎಕ್ಸ್‌ಪ್ರೆಸ್ ರವೀಂದ್ರನಾಥ ಟ್ಯಾಗೋರ್ ಬರೆದ 'ವೇರ್ ದಿ ಮೈಂಡ್ ಈಸ್ ವಿಥೌಟ್ ಫಿಯರ್' ಕವಿತೆಯನ್ನು ಮರುಮುದ್ರಣ ಮಾಡಿತು. ಸಿಪಿಐ(ಎಂ)ಗೆ ಸೇರಿದ ವಿವಿಧ ಪ್ರಕಟಣೆಗಳು ತಮ್ಮ ಅಂಕಣಗಳ ಮೂಲಕ ಸೆನ್ಸಾರ್‌ಶಿಪ್ ಅನ್ನು ಮತ್ತು ಪ್ರಭುತ್ವದ ದಮನಕಾರಿ ಕ್ರಮಗಳನ್ನು ತೀವ್ರವಾಗಿ ಪ್ರತಿಭಟಿಸುವುದನ್ನು ಮುಂದುವರೆಸಿದವು.



ಪ್ರತಿಭಟನೆಗಳಲ್ಲಿ ಅಗ್ರಸ್ಥಾನದಲ್ಲಿ ಕೇರಳ

ಸ್ವಾಭಾವಿಕವಾಗಿಯೇ ಪ್ರತಿಭಟನೆಗಳಲ್ಲಿ ಕೇರಳವು ಅಗ್ರಸ್ಥಾನದಲ್ಲಿತ್ತು. ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದರು. ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರವು ಸಿಪಿಐ(ಎಂ) ಮೇಲೆ ಮತ್ತು ಜನರ ಚಳುವಳಿಗಳ ಮೇಲೆ ತೀವ್ರ ನಿರ್ಬಂಧಗಳನ್ನು ಹೇರಿತು. ಅಚ್ಯುತಾನಂದನ್, ಪಿಣರಾಯಿ ವಿಜಯನ್ ಸೇರಿದಂತೆ ಪಕ್ಷದ ಅನೇಕ ನಾಯಕರನ್ನು ಮತ್ತು ಕಾರ್ಯಕರ್ತರನ್ನು ಬಂಧಿಸಿದರು. ಪಿಣರಾಯಿ ಅವರನ್ನು ಕ್ರೂರವಾದ ಥರ್ಡ್ ಡಿಗ್ರಿ ಹಿಂಸೆಗೆ ಗುರಿಮಾಡಿದರು. ಹಿಂಸೆಯು ದಬ್ಬಾಳಿಕೆಯ ಒಂದು ಸಾಧಾರಣ ಸಾಧನದಂತೆ ಬದಲಾಯಿತು. ಆದರೆ, ಕೇರಳದಿಂದ ಬಂದ ಈ ಪ್ರತಿರೋಧ ಚಳುವಳಿ ದೇಶಕ್ಕೆ ಉತ್ತೇಜನ ನೀಡಿತು. ಜನರ ಚಳುವಳಿಗಳು ಮತ್ತು ಜನರ ಒತ್ತಡಕ್ಕೆ ಇಂದಿರಾ ಗಾಂಧಿಯವರು ಮಣಿಯಬೇಕಾಯಿತು. 1977 ಮಾರ್ಚ್ 21 ರಂದು ಅವರು ತುರ್ತು ಪರಿಸ್ಥಿತಿಯನ್ನು ತೆಗೆದುಹಾಕಿದರು. ತೀವ್ರವಾದ ಜನತೆಯ ಆಕ್ರೋಶವನ್ನು ಎದುರಿಸಿದ ಅವರು ಆ ನಂತರ ನಡೆದ ಚುನಾವಣೆಯಲ್ಲಿ ಸೋಲನ್ನು ಅಭವಿಸಿದರು.

ಸರ್ಕಾರದ ಮುಂದೆ ಶರಣಾದ ಜನಸಂಘದ ನಾಯಕತ್ವ

ಆದರೆ, ಎಲ್ಲಾ ರಾಜಕೀಯ ಶಕ್ತಿಗಳು ತುರ್ತು ಪರಿಸ್ಥಿತಿಯನ್ನು ವಿರೋಧಿಸಲಿಲ್ಲ. ಭಾರತೀಯ ಜನಸಂಘದ (ಬಿಜೆಪಿಯ ಪೂರ್ವ ರೂಪ) ಉನ್ನತ ನಾಯಕತ್ವವು ಅಂದಿನ ಸರ್ಕಾರದ ಮುಂದೆ ಶರಣಾಯಿತು. ದಿ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ತಮ್ಮ 2,000ನೇ ಲೇಖನ 'ಅನ್‌ಲರ್ನ್ಡ್ ಲೆಸನ್ಸ್ ಆಫ್ ದಿ ಎಮರ್ಜೆನ್ಸಿ'ಯಲ್ಲಿ ಡಾ. ಸುಬ್ರಮಣಿಯನ್ ಸ್ವಾಮಿ ಅವರು, ಆರ್‌ಎಸ್‌ಎಸ್ ಮತ್ತು ಭಾರತೀಯ ಜನಸಂಘಕ್ಕೆ ಸೇರಿದ ಯಾರೆಲ್ಲಾ ನಾಯಕರು ಇಂದಿರಾ ಗಾಂಧಿಯವರೊಂದಿಗೆ ರಹಸ್ಯ ಮಾತುಕತೆ ನಡೆಸಿದರು ಎಂಬ ಬಗ್ಗೆ ಸವಿವರವಾಗಿ ಬರೆದಿದ್ದಾರೆ. ಆಡಳಿತಗಾರರೊಂದಿಗೆ, ಆಡಳಿತ ಯಂತ್ರದೊಂದಿಗೆ ಆರ್‌ಎಸ್‌ಎಸ್ ತುಂಬಾ ತ್ವರಿತವಾಗಿ ಸೌಹಾರ್ದಯುತ ಸಂಬಂಧಗಳನ್ನು ಇಟ್ಟುಕೊಂಡಿತು. ಆರ್‌ಎಸ್‌ಎಸ್ ಮುಖ್ಯಸ್ಥ ಬಾಳಾಸಾಹೇಬ್ ದೇವರಸ್ ಅವರು ಇಂದಿರಾ ಗಾಂಧಿಯವರನ್ನು ಬೆಂಬಲಿಸಿ ಬರೆದ ಪತ್ರಗಳು ಸಾರ್ವಜನಿಕವಾಗಿ ಲಭ್ಯ ಇವೆ. ಎಡಪಂಥೀಯರು ಮತ್ತು ಇತರ ವಿರೋಧ ಪಕ್ಷಗಳ ಸಾವಿರಾರು ಕಾರ್ಯಕರ್ತರು ಜೈಲು ಸೇರಿ ಚಿತ್ರಹಿಂಸೆಗೆ ಗುರಿಯಾದರು. ಅದೇ ಸಮಯದಲ್ಲಿ, ಸಂಘದ ಉನ್ನತ ನಾಯಕರು ಮಾತ್ರ ತಪ್ಪಿಸಿಕೊಂಡರು. ತುರ್ತು ಪರಿಸ್ಥಿತಿಯನ್ನು ಪ್ರತಿರೋಧಿಸುವಲ್ಲಿ ತಾವೂ ಭಾಗಿಗಳಾಗಿದ್ದೇವೆ ಎಂದು ಹೇಳಿಕೊಳ್ಳುವ ನೈತಿಕ ಹಕ್ಕು ಬಿಜೆಪಿಗೆ ಇಂದು ಇಲ್ಲ.

ಬಿಜೆಪಿಯಿಂದ 'ಸಂವಿಧಾನ ಹತ್ಯೆ ದಿವಸ್' ದೊಡ್ಡ ತಮಾಷೆ

ಆದರೂ, ಅದೇ ಬಿಜೆಪಿ ಈಗ ಜೂನ್ 25 ಅನ್ನು 'ಸಂವಿಧಾನ ಹತ್ಯೆ ದಿವಸ್' ಎಂದು ಘೋಷಿಸುತ್ತಿದೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಈ ದಿನದ ಗುರುತಾಗಿ ವರ್ಷವಿಡೀ ಪ್ರಚಾರ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಆದೇಶಿಸಿದೆ. ತುರ್ತು ಪರಿಸ್ಥಿತಿಯನ್ನು ವಿರೋಧಿಸಿದವರನ್ನು ಗೌರವಿಸಲು ಮತ್ತು ಸಂವಿಧಾನವನ್ನು ದುರ್ಬಲಗೊಳಿಸುವ ಅಪಾಯಗಳನ್ನು ಎತ್ತಿ ತೋರಿಸಲು ಈ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಅದು ಸೂಚಿಸಿದೆ. ಆದರೆ ಇದೊಂದು ದೊಡ್ಡ ತಮಾಷೆಯಾಗಿದೆ. ತುರ್ತು ಪರಿಸ್ಥಿತಿಯ ಸಮಯದಲ್ಲಿ ಶರಣಾದವರು ಈಗ ತಮ್ಮನ್ನು ಪ್ರಜಾಪ್ರಭುತ್ವದ ರಕ್ಷಕರು ಎಂದು ಹೇಳಿಕೊಳ್ಳುತ್ತಿದ್ದಾರೆ. ಯಾರೋ ಸರಿಯಾಗಿಯೇ ಹೇಳಿದಂತೆ, "ಸಂವಿಧಾನವನ್ನು ಕೊಂದವರೇ ಈಗ ಅದರ ಗುಣಗಾನ ಮಾಡುತ್ತಿದ್ದಾರೆ. ಅದರ ರಕ್ಷಕರಂತೆ ನಟಿಸುತ್ತಿದ್ದಾರೆ." ವಾಸ್ತವವಾಗಿ, ಮೋದಿ ಆಳ್ವಿಕೆಯಲ್ಲಿ ಇಂದು ನಾವು ನೋಡುತ್ತಿರುವುದು 'ತುರ್ತು ಪರಿಸ್ಥಿತಿ ಕಾಲದ ನಿರಂಕುಶಾಧಿಕಾರದ ಪುನರುಜ್ಜೀವನ'. ಆದರೂ, ಈ ಬಾರಿ ಅದನ್ನು ಅಧಿಕೃತವಾಗಿ ಘೋಷಿಸಲಾಗಿಲ್ಲ. ಆದರೆ, 1975ರ ತುರ್ತು ಪರಿಸ್ಥಿತಿ ಸಮಯದ ಭಯಾನಕ ಕ್ಷಣ ಈಗ ಪುನರಾವರ್ತಿತವಾಗುತ್ತಿದೆ. ವರ್ಧಿಸಲಾಗುತ್ತಿದೆ! ವಿಸ್ತೃತವಾಗುತ್ತಿದೆ!

ಅಂದು 'ಮಿಸಾ' ಮತ್ತು ಇಂದು 'ಯುಎಪಿಎ'

ವಾಸ್ತವವಾಗಿ, ಕಳೆದ ಹನ್ನೊಂದು ವರ್ಷಗಳಲ್ಲಿ ಒಂದು ವ್ಯವಸ್ಥಿತವಾಗಿ ನಡೆದ ಮಾನವ ಹಕ್ಕುಗಳ ಉಲ್ಲಂಘನೆಯು ತುರ್ತು ಪರಿಸ್ಥಿತಿಯನ್ನು ಪ್ರತಿಯೊಂದು ವಿಷಯದಲ್ಲೂ ಪ್ರತಿಬಿಂಬಿಸುತ್ತವೆ. ಅಂದಿನ 'ಮಿಸಾ' (Maintenance of Internal Security Act) ನಿರ್ವಹಿಸಿದ ಪಾತ್ರವನ್ನೇ ಇಂದಿನ 'ಯುಎಪಿಎ' (UAPA) ನಿರ್ವಹಿಸುತ್ತಿದೆ. ಮೊದಲಿನಂತೆ ಬರಹಗಾರರು, ಪತ್ರಕರ್ತರು, ವಿದ್ಯಾರ್ಥಿಗಳು, ರಾಜಕೀಯ ವಿರೋಧಿಗಳು ಮತ್ತು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವ ಧ್ವನಿಗಳನ್ನು ಹತ್ತಿಕ್ಕುತ್ತಿದ್ದಾರೆ. ಪ್ರಬೀರ್ ಪುರ್ಕಾಯಸ್ಥ ಅವರು 1975ರಲ್ಲಿ ಮತ್ತು 2023ರಲ್ಲಿ ಬಂಧಿತರಾಗಿ, ಭಾರತದ ಪ್ರಜಾಪ್ರಭುತ್ವದಲ್ಲಿ ಎರಡು ಕರಾಳ ಅಧ್ಯಾಯಕ್ಕೆ (1975–77 ಮತ್ತು 2014–2025) ಜೀವಂತ ಸಂಕೇತವಾಗಿ ನಿಂತಿದ್ದಾರೆ.

2024ರ ಚುನಾವಣೆಯ ಸಮಯದಲ್ಲಿ, ಮೋದಿ ಆಡಳಿತವು ಇಬ್ಬರು ಸಿಟ್ಟಿಂಗ್ ಮುಖ್ಯಮಂತ್ರಿಗಳನ್ನು ಬಂಧನ ಮಾಡಿತು. ವಿರೋಧ ಪಕ್ಷದ ನಾಯಕರನ್ನು ಬೆದರಿಸಲು, ಒತ್ತಡಕ್ಕೆ ಸಿಲುಕಿಸಲು ತನಿಖಾ ಸಂಸ್ಥೆಗಳನ್ನು ಬಳಸಿಕೊಂಡಿತು. ಇತರೆ ಪಕ್ಷಗಳಿಂದ ತಮ್ಮ ಪಕ್ಷಕ್ಕೆ ಪಕ್ಷಾಂತರ ಮಾಡುವಂತೆ ಮಾಡಲು ಅಥವಾ ಶರಣಾಗುವಂತೆ ಒತ್ತಾಯಿಸುವ ಗುರಿಯೊಂದಿಗೆ ಈ ಕಿರುಕುಳ ಮುಂದುವರೆಯಿತು. ಗುಂಪು ಹತ್ಯೆಗಳು, ದ್ವೇಷಪೂರಿತ ಪ್ರಚಾರಗಳು, ಅಲ್ಪಸಂಖ್ಯಾತರ ಮನೆಗಳನ್ನು ಬುಲ್ಡೋಜರ್‌ನಿಂದ ಧ್ವಂಸ ಮಾಡುವುದು, ರಾಜ್ಯ ಪ್ರಾಯೋಜಿತ ಕಣ್ಗಾವಲು ಮತ್ತು ಹಿಂಸೆ ಮೋದಿ ಆಡಳಿತದ ಸಾಮಾನ್ಯ ಅಂಶಗಳು ಎಂಬಂತೆ ಮಾರ್ಪಟ್ಟಿವೆ. ವಿಶ್ವವಿದ್ಯಾಲಯಗಳಿಂದ ಕೊಳೆಗೇರಿಗಳವರೆಗೆ ಎಲ್ಲಾ ಪ್ರದೇಶಗಳಲ್ಲೂ ಪ್ರತಿಭಟನೆಗಳನ್ನು, ಭಿನ್ನಾಭಿಪ್ರಾಯವನ್ನು ದಮನಮಾಡುತ್ತಿದ್ದಾರೆ.

ಇಂದಿರಾ ಗಾಂಧಿಯವರ ತುರ್ತು ಪರಿಸ್ಥಿತಿ 21 ತಿಂಗಳುಗಳ ಕಾಲ ಮುಂದುವರೆಯಿತು. ಮೋದಿ ಅವರ ಅಘೋಷಿತ ತುರ್ತು ಪರಿಸ್ಥಿತಿ ಹನ್ನೊಂದನೇ ವರ್ಷವನ್ನು ಪ್ರವೇಶಿಸಿದೆ. ಮುಖ್ಯವಾಹಿನಿಯ ಮಾಧ್ಯಮಗಳು ಮೋದಿಯವರ ಪ್ರಚಾರ ಸಾಧನವಾಗಿ ಬದಲಾಗಿವೆ. ಚಳುವಳಿಗಳನ್ನು ಹತ್ತಿಕ್ಕುವುದು, ವಿಮರ್ಶಕರನ್ನು ನಿಗ್ರಹಿಸುವುದು, ಪ್ರಜಾಪ್ರಭುತ್ವ ಸಂಸ್ಥೆಗಳನ್ನು

ಪುಟ 10 ಕ್ಕೆ

ಹಟ್ಟಿ ಚಿನ್ನದ ಗಣಿ ಕಾರ್ಮಿಕ ಸಂಘದ ಚುನಾವಣೆ: ಸಿಐಟಿಯು ತಂಡಕ್ಕೆ ಅಭೂತಪೂರ್ವ ಗೆಲುವು:

ಘನತೆಯ ಬದುಕಿಗಾಗಿ ಶ್ರಮಜೀವಿಗಳ ಸಂಘರ್ಷ

ಕೆ.ಮಹಾಂತೇಶ್
ಅಧ್ಯಕ್ಷರು, ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘ

ಹಟ್ಟಿ ಚಿನ್ನದ ಗಣಿ ಕಂಪನಿಯ ಕಾರ್ಮಿಕ ಹಾಗೂ ಸಿಬ್ಬಂದಿ ಸಂಘದ' ಚುನಾವಣೆಯಲ್ಲಿ ಸಿಐಟಿಯು (ಬಂಡಿಗಾಲಿ) ತಂಡ ಭರ್ಜರಿ ಗೆಲುವು ಸಾಧಿಸಿದೆ. ಸಂಘದ ಅಧ್ಯಕ್ಷರಾಗಿ ಕೆ.ಮಹಾಂತೇಶ ಗೆಲುವು ಸಾಧಿಸಿದರೆ, ಪ್ರಧಾನ ಕಾರ್ಯದರ್ಶಿಯಾಗಿ ಎಸ್.ಎಂ.ಶಫಿ ಗೆಲುವು ಸಾಧಿಸಿದ್ದಾರೆ. ಕೋಶಾಧ್ಯಕ್ಷ ಮತ್ತು ಉಪ ಕೋಶಾಧ್ಯಕ್ಷ, ಒಂದು ಉಪಾಧ್ಯಕ್ಷ ಸ್ಥಾನ ಮತ್ತು ಆರೂ ಕಾರ್ಯದರ್ಶಿ ಸ್ಥಾನಗಳನ್ನು ಸಿಐಟಿಯು ಗೆದ್ದುಕೊಂಡು ಇಲ್ಲಿ ಇತಿಹಾಸ ನಿರ್ಮಿಸಿದೆ.

ಹಟ್ಟಿ ಚಿನ್ನದ ಗಣಿ ಕಂಪನಿಯ ಕಾರ್ಮಿಕ ಹಾಗೂ ಸಿಬ್ಬಂದಿ ಸಂಘದ ಚುನಾವಣೆಯು ತೀವ್ರ ಕುತೂಹಲ ಕೆರಳಿಸಿತ್ತು. ಸಿಐಟಿಯು ರಾಜ್ಯ ಕಾರ್ಯದರ್ಶಿಯಾದ ಕೆ.ಮಹಾಂತೇಶ ಅವರು ಸಂಘದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದರು. ಅವರು 944 ಮತಗಳನ್ನು ಗೆಲುವು ಸಾಧಿಸಿದರು. ಎಐಟಿಯುಸಿ (ತಕ್ಕಡಿ) ಅಭ್ಯರ್ಥಿ 925 ಮತಗಳನ್ನು ಪಡೆದರು.

ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಿಐಟಿಯುನ (ಬಂಡಿಗಾಲಿ) ಎಸ್.ಎಂ.ಶಫಿ ಅವರು 1,014 ಮತಗಳನ್ನು ಪಡೆದು 64 ಮತಗಳ ಅಂತರದಿಂದ ಗೆಲುವು ಸಾಧಿಸಿದರು. ಸಮೀಪದ ಸ್ಪರ್ಧಿ 'ಆಕಳು' (ಸ್ವತಂತ್ರ ಸಂಘಟನೆ) ಪಕ್ಷದ ವಾಲೆಬಾಬು 950 ಮತಗಳನ್ನು ಪಡೆದರು. ಎಐಟಿಯುಸಿ ನ ವಿಜಯ ಭಾಸ್ಕರ್ ಡಿ.ಎ ಅವರು 616 ಮತಗಳನ್ನು ಪಡೆದರು.

ಸಿಐಟಿಯು ನಿಂದ ಎರಡು ಉಪಾಧ್ಯಕ್ಷರ ಸ್ಥಾನದಲ್ಲಿ ಒಂದು ಸ್ಥಾನವನ್ನು ಚಂದ್ರಶೇಖರ್ ಗೆದ್ದುಕೊಂಡಿದ್ದರೆ, ಕೋಶಾಧ್ಯಕ್ಷರಾಗಿ ಸಿದ್ದಪ್ಪ ಮುಂಡರಗಿ, ಸಹಾಯಕ ಕೋಶಾಧ್ಯಕ್ಷರಾಗಿ ಚಂದ್ರಶೇಖರ್ ಆಯ್ಕೆಯಾಗಿದ್ದಾರೆ. ಜಮದಗ್ನಿ, ಗೌಸ್ ಮಿಯಾ, ಮಹ್ಮದ್ ಅನೀಫ್, ಯಂಕೋಬ, ನಾಗರಾಜ್, ಎ.ರಮೇಶ್ ಬಾಬು ಇವರುಗಳು ಆಯ್ಕೆಯಾಗಿ ಎಲ್ಲಾ 6 ಕಾರ್ಯದರ್ಶಿ ಸ್ಥಾನಗಳನ್ನು ಸಿಐಟಿಯು ಗೆದ್ದುಕೊಂಡಿದೆ.

ಹಟ್ಟಿ ಚಿನ್ನದ ಗಣಿ

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಹಟ್ಟಿ ಚಿನ್ನದ ಗಣಿ ಸರ್ಕಾರಿ ಒಡೆತನದ ಒಂದು ಸಾರ್ವಜನಿಕ ಕಂಪನಿ. 1947ರಲ್ಲಿ ಹೈದ್ರಾಬಾದ್ ನಿಜಾಮನ ಕಾಲದಲ್ಲಿ ಹೈದ್ರಾಬಾದ್ ಚಿನ್ನದ ಗಣಿಗಳೆಂದೇ ಪ್ರಸಿದ್ಧ ಪಡೆದಿದ್ದ ಈ ಕಂಪನಿಯು ಸ್ವಾತಂತ್ರ್ಯದ ಬಳಿಕ ಕರ್ನಾಟಕ ಸರ್ಕಾರದ 'ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ' ಎಂದು ನಾಮಕರಣಗೊಂಡಿತು. ಕಂಪನಿಯ ಕೇಂದ್ರ ಕಚೇರಿ ಬೆಂಗಳೂರಿನಲ್ಲಿದ್ದು, ಅದರ ಉಪ ಘಟಕಗಳು ಚಿತ್ರದುರ್ಗ, ದೇವದುರ್ಗ ತಾಲೂಕಿನ ಊಟಿ ಹಾಗೂ ಮಾನ್ವಿ ತಾಲೂಕಿನ ಹೀರಾಬುದ್ದಿನ್‌ಗಳಲ್ಲಿವೆ. ಕೋಲಾರದ ಪ್ರಸಿದ್ಧ ಚಿನ್ನದ ಗಣಿ ಮುಚ್ಚಿದ ಬಳಿಕ ದೇಶದಲ್ಲಿ ಉತ್ಕೃಷ್ಟ ಚಿನ್ನ ತಯಾರಿಸುವ ಏಕೈಕ ಕಂಪನಿ ಎನ್ನುವ ಪ್ರಸಿದ್ಧಿಯನ್ನು ಇದು ಗಳಿಸಿಕೊಂಡಿದೆ.


ಕೆ.ಮಹಾಂತೇಶ, ಅಧ್ಯಕ್ಷರು


ಎಸ್.ಎಂ.ಶಫಿ, ಪ್ರಧಾನ ಕಾರ್ಯದರ್ಶಿ

ಅಶೋಕನ ಕಾಲಕ್ಕಿಂತಲೂ ಮೊದಲೇ ಗಣಿಗಾರಿಕೆ!

ಇತಿಹಾಸ ತಜ್ಞರ ಪ್ರಕಾರ ಸಿಂಧೂ ನಾಗರೀಕತೆ ಸಮಯದಿಂದಲೇ ಇಲ್ಲಿಂದ ಹಾಗೂ ಕೋಲಾರ ಚಿನ್ನದ ಗಣಿಯಿಂದ ಚಿನ್ನ ರಫ್ತಾಗುತ್ತಿತ್ತು. ಹಟ್ಟಿ ಚಿನ್ನದ ಗಣಿಯಲ್ಲಿ ಅಶೋಕನ ಕಾಲಕ್ಕಿಂತಲೂ ಮೊದಲೇ ಗಣಿಗಾರಿಕೆ ನಡೆದಿರುವುದು ಪತ್ತೆಯಾಗಿದೆ. 1887ರಲ್ಲಿ ಹೈದರಾಬಾದ್ ನಿಜಾಮನಿಗೋಸ್ಕರ ಗಣಿಯನ್ನು 'ಹೈದರಾಬಾದ್ ಡೆಕ್ಕನ್ ಕಂಪನಿ'ಯು ಚಿನ್ನದ ಗಣಿಗಾರಿಕೆ ಮಾಡಲು ಪ್ರಾರಂಭಿಸಿತು. 1880ರಿಂದ 1920ರವರೆಗೆ ಜಾನ್ ಟೈಲರ್ಸ್ ಮತ್ತು ಮಕ್ಕಳಿಂದ ಆಧುನಿಕ ಗಣಿಗಾರಿಕೆಯನ್ನು ಕೈಗೊಳ್ಳಲಾಯಿತು. 1902ರಿಂದ 1918ರ ಅವಧಿಯಲ್ಲಿ ಮೇಯಿನ್ ರೀಫ್ ಒಂದೇ 3.8 ಲಕ್ಷ ಟನ್ ಅದಿರು ಉತ್ಪಾದಿಸಿ, 7.41 ಟನ್ ಚಿನ್ನವನ್ನು ಟನ್ನಿಗೆ 19.45 ಗ್ರಾಂ ದರದಲ್ಲಿ ಉತ್ಪಾದಿಸಿತು. ಗಣಿಯನ್ನು 1052 ಮೀಟರ್ ಆಳಕ್ಕೆ ಕೊರೆಯುಲಾಯಿತು.



'ಜಾನ್ ಟೇಲರ್ ಮತ್ತು ಮಕ್ಕಳು' ಅವರಿಗೆ

1920ರಲ್ಲಿ ಗಣಿಯನ್ನು ಸಾಮಗ್ರಿಗಳ ಕೊರತೆ, ಹಣದ ಮುಗ್ಗಟ್ಟು ಮತ್ತು ಒಂದನೇ ಜಾಗತಿಕ ಯುದ್ಧದಿಂದಾಗಿ ಮುಚ್ಚಲಾಯಿತು. 1938ರಲ್ಲಿ ಭೂಗರ್ಭ ಮತ್ತು ಭೂಭೌತ ನಿಯಮಗಳ ಪ್ರಕಾರ ವಿವರವಾದ ಅನ್ವೇಷಣೆ ಜೊತೆಗೆ ವಿಲ್ಲೇಜ್ ರೀಫ್ ಗಣಿಯಲ್ಲಿ ಡೈಮಂಡ್ ಡ್ರಿಲ್ಲಿಂಗ್ ಮತ್ತು ನೀರನ್ನು ಖಾಲಿ ಮಾಡಿದ್ದರಿಂದ ಜೋನ್–1 ಮತ್ತು ಓಕ್ಲೇ ರೀಫುಗಳನ್ನು ಪುನಃ ಕಂಡುಹಿಡಿಯಲಾಯಿತು. 1947ರ ಜುಲೈ 8ರಂದು 'ಹೈದರಾಬಾದ್ ಚಿನ್ನದ ಗಣಿಗಳ ಕಂಪನಿ ನಿಯಮಿತ'ವನ್ನು ಸಂಘಟಿಸಿ ಗಣಿಗಾರಿಕೆ ಕೆಲಸಗಳನ್ನು 'ಜಾನ್ ಟೇಲರ್ ಮತ್ತು ಮಕ್ಕಳು' ಅವರಿಗೆ ಹೈದರಾಬಾದ್ ನಿಜಾಮರು ವಹಿಸಿಕೊಟ್ಟರು. 1956ರಲ್ಲಿ ರಾಜ್ಯಗಳ ಪುನರ್–ವಿಂಗಡಣೆಯಿಂದಾಗಿ ಮೈಸೂರು (ಈಗಿನ ಕರ್ನಾಟಕ) ರಾಜ್ಯ ಉದಯವಾದಾಗ ಅದರ ಹೆಸರನ್ನು 'ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ' ಎಂದು ಮರುನಾಮಕರಣ ಮಾಡಲಾಯಿತು.

ಕಾರ್ಮಿಕ ಚಳವಳಿ ಇತಿಹಾಸ

ಮೊದಲಿಗೆ ಕಂಪನಿಯಲ್ಲಿ ಕಾರ್ಮಿಕರನ್ನು ತೀವ್ರವಾಗಿ ಶೋಷಿಸಲಾಗುತ್ತಿತ್ತು. ಅವರನ್ನು ಎಲ್ಲ ಕಾನೂನುಬದ್ದ ಸೌಲಭ್ಯಗಳಿಂದ ವಂಚಿಸಲಾಗುತ್ತಿತ್ತು. ಆದರೆ ಕಾರ್ಮಿಕರು ಸಂಘಟಿರಾಗತೊಡಗಿದಾಗ ಆಡಳಿತ ಮಂಡಳಿಯೇ ತನ್ನ ಕೈಗೊಂಬೆ ನಾಯಕತ್ವವನ್ನು ಕೈ ಎತ್ತಿ ಆಯ್ಕೆ ಮಾಡುವ ಪದ್ದತಿಯನ್ನು ಜಾರಿಗೊಳಿಸಿದರೂ ಕಾರ್ಮಿಕರ ಪರಿಸ್ಥಿತಿ ಸುಧಾರಿಸಲಿಲ್ಲ. ಹೀಗಾಗಿ 60–70ರ ದಶಕಗಳಲ್ಲಿ ಕಾಮ್ರೇಡ್ ನಾರಾಯಣ ಹಾಗೂ ಕಾಮ್ರೇಡ್ ಪೈ ನೇತೃತ್ವದಲ್ಲಿ ಕಾರ್ಮಿಕರು ಸಂಘಟಿತರಾದರು. ಆದರೆ ಆಡಳಿತ ಮಂಡಳಿಯು ಗೂಂಡಾಗಳನ್ನು ಬಳಸಿ ಈ ಇಬ್ಬರೂ ಕಾರ್ಮಿಕ ನಾಯಕರನ್ನು ಹತ್ಯೆಮಾಡಿ, ಕಾರ್ಮಿಕ ಚಳವಳಿಯನ್ನು ಹತ್ತಿಕ್ಕಲು ಪ್ರಯತ್ನ ನಡೆಸಿತು.

ಎ.ಬಿ.ದಾಸ ಹಾಗೂ ವಿಜೆಕೆ ನೇತೃತ್ವ

ಬಳಿಕ, ಚಂದ್ರಶೇಖರ್ ಬಾಳೆ, ಪುರುಷೋತ್ತಮ ಕಲಾಲ ಬಂಡಿಯಂತಹ ಕಮ್ಯೂನಿಸ್ಟ್ ಕಾರ್ಯಕರ್ತರು ನಿರಂತರವಾಗಿ ಕಾರ್ಮಿಕರ ನಡುವೆ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತಾ, ಕಾರ್ಮಿಕರ ನಡುವೆ ವರ್ಗ ಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸಿದರು. ಅದಾದ ಬಳಿಕ ಅಮರಗೊಂಡಪ್ಪ ನಿಲೋಗಿಯಂತಹ ನಾಯಕರು ಹಟ್ಟಿಯ ಗಣಿ ಕಾರ್ಮಿಕರ ನಡುವೆಯೇ ಕೆಲಸ ಮಾಡುತ್ತಾ, ಅವರನ್ನು ನಿರಂತರವಾಗಿ ಶೋಷಿಸುತ್ತಿದ್ದ ಹಲವು ರೀತಿಯ ಪಟ್ಟಭದ್ರ ಹಾಗೂ ಸಮಾಜಘಾತುಕ ಶಕ್ತಿಗಳನ್ನು ಎದುರಿಸುತ್ತಾ, ಹಟ್ಟಿ ಕಾರ್ಮಿಕರನ್ನು ಜಾಗೃತಗೊಳಿಸುವ ಕೆಲಸ ಮಾಡಿದರು. ಇದರ ಪರಿಣಾಮವಾಗಿ ಕಲುಬುರಗಿ ಜಿಲ್ಲೆಯ ಸಿಮೆಂಟ್ ಕಾರ್ಖಾನೆ ಹಿರಿಯ ಮುಖಂಡ ಎ.ಬಿ.ದಾಸ ಹಾಗೂ ವಿಜೆಕೆ ನಾಯರ್ ನೇತೃತ್ವದಲ್ಲಿ ಕಾರ್ಮಿಕರು 1998–2000 ಅವಧಿಯಲ್ಲಿ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕ ಸಂಘದ ಚುನಾವಣೆಯಲ್ಲಿ ಗೆದ್ದರು. ಬಂಗಾರದ ಬೆಲೆಯ ಕುಸಿತದ ನಡುವೆಯೂ ಕಾರ್ಮಿಕರಿಗೆ ಬೋನಸ್ ಸೇರಿ ಇತರೆ ಸೌಲಭ್ಯಗಳನ್ನು ಒದಗಿಸಲು ಸಿಐಟಿಯು ನಾಯಕತ್ವ ಪ್ರಯತ್ನಿಸಿದ್ದನ್ನು ಈಗಲೂ ಅಲ್ಲಿನ ಹಿರಿಯ ಕಾರ್ಮಿಕರು ನೆನಪಿಸಿಕೊಳ್ಳುತ್ತಾರೆ. ಅದಾದ ಬಳಿ ಬಳ್ಳಾರಿಯ ಹಿರಿಯ ವಕೀಲರಾದ ಅರವಿಂದ ಮಲೆಬೆನ್ನೂರ್ ಅವರು ನಿರಂತರವಾಗಿ ಹಟ್ಟಿ ಚಿನ್ನದ ಗಣಿ ಕಾರ್ಮಿಕ ಸಂಘದ ಅಧ್ಯಕ್ಷರಾಗಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಕಾನೂನು ಸಲಹೆಗಾರರಾಗಿ ದುಡಿಯುವ ಮೂಲಕ ಕಾರ್ಮಿಕರಿಗೆ ಒಂದು ಘನತೆಯ ಬದುಕನ್ನು ಒದಗಿಸಲು ಶ್ರಮಿಸಿದ್ದನ್ನು ಈಗಲೂ ಅಲ್ಲಿನ ಕಾರ್ಮಿಕರು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ.

ಹಿಂದಿನ ಎರಡು ಅವಧಿಯಲ್ಲಿ ಇಲ್ಲಿನ ಕಾರ್ಮಿಕರು ಮಾನಸಯ್ಯ ನೇತೃತ್ವದ ಎಐಸಿಸಿಟಿಯು ಹಾಗೂ ಆಲಿಬಾಬು ನೇತೃತ್ವದ ಸ್ವತಂತ್ರ ಸಂಘಟನೆಯನ್ನು, ಅದಾದ ಬಳಿಕ ಕಳೆದ ಮೂರು ವರ್ಷಗಳಿಂದ ವಿಜಯ ಬಾಸ್ಕರ್ ನೇತೃತ್ವದ ಎಐಟಿಯುಸಿ ತಂಡವನ್ನು ಆಯ್ಕೆ ಮಾಡಿಕೊಂಡು ಉತ್ತಮ ವೇತನ ಒಪ್ಪಂದವನ್ನು ಮಾಡಿಕೊಂಡಿದ್ದರು.

ಭರವಸೆ ಮೂಡಿಸಿದ ಸಿಐಟಿಯು ಪ್ರವೇಶ

ಕಳೆದ ಮೂರು ವರ್ಷಗಳಿಂದ ಅಧಿಕಾರ ನಡೆಸಿದ ಎಐಟಿಯುಸಿ ನಾಯಕತ್ವದೊಳಗೆ ಕಾರ್ಮಿಕರಿಂದ ಸಂಗ್ರಹಿಸಿದ ಒಂದು ದಿನದ ವೇತನ 1.6 ಕೋಟಿ ರೂ ನಿಧಿ, ಅದರ ನಿರ್ವಹಣೆಯಲ್ಲಿ ಪಾರದರ್ಶಕತೆ ಕೊರತೆ ಸೇರಿ ಇತ್ಯಾದಿ ಅಂಶಗಳ ಮೇಲೆ ಭಿನ್ನಾಭಿಪ್ರಾಯಗಳು ತಲೆದೂರಿದವು. ಇದಲ್ಲದೆ ವ್ಯಕ್ತಿಗತವಾದ ಭಿನ್ನಾಭಿಪ್ರಾಯಗಳು ತೀವ್ರ ಸ್ವರೂಪದಲ್ಲಿ ಬೆಳೆದುಬಂದಾಗ, ಅದರ ರಾಜ್ಯ ನಾಯಕತ್ವ ಬಗೆಹರಿಸಲು ಗಮನ ನೀಡಲಿಲ್ಲ ಎನ್ನುವ ಆರೋಪದ ಮೇಲೆ ಆಯ್ಕೆಗೊಂಡಿದ್ದ ಸುಮಾರು 14 ಜನ ಮುಖಂಡರು ಆ ಸಂಘಟನೆಯನ್ನು ತ್ಯಜಿಸಿ, ಸಿಐಟಿಯು ಸಂಘಟನೆಯನ್ನು ಸೇರಿ ಚುನಾವಣೆ ಎದುರಿಸುವ ತೀರ್ಮಾನಕ್ಕೆ ಬಂದು ಸ್ಥಳಿಯ ಸಿಐಟಿಯು ಮುಖಂಡರ ಮೂಲಕ ರಾಜ್ಯ ಸಮಿತಿಯನ್ನು ಸಂಪರ್ಕಿಸಿದರು. ಸಿಐಟಿಯು ಸೇರ್ಪಡೆಗೊಳ್ಳಲು ಆಗಮಿಸಿದ ಪುಟ 12 ಕ್ಕೆ

ಸಿಐಟಿಯು ಮುನ್ನಲೆಗೆ ತಂದ ಪ್ರಶ್ನೆಗಳು

ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕರ ಸಂಘದ ಚುನಾವಣೆಯ ಪ್ರಚಾರದಲ್ಲಿ ಸಿಐಟಿಯು ನೇತೃತ್ವದ ಬಂಡಿಗಾಲಿ ತಂಡ ಪ್ರಸ್ತಾಪಿಸಿ, ವ್ಯಾಪಕವಾದ ಪ್ರಚಾರವನ್ನು ಸ್ಯಾಪ್ಟ್ ಪ್ಲೋರ್‌ಗಳಲ್ಲಿ ನಡೆಸಿತು.

ಹಟ್ಟಿ ಚಿನ್ನದ ಗಣಿ ಸೇರಿದಂತೆ ಇತರೆ ಸಾರ್ವಜನಿಕ ಉದ್ಯಮಗಳು ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರವನ್ನು ವಹಿಸಿವೆ. ಅವು ನಮ್ಮ ಸಾರ್ವಭೌಮತ್ವದ ಹೆಮ್ಮೆ. ಆದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಚಿನ್ನದ ಮೊಟ್ಟೆ ಇಡುವ ಇಂತಹ ಉದ್ಯಮಗಳನ್ನು ಖಾಸಗೀಕರಿಸುವ ಹಾಗೂ ಬೇಕಾಬಿಟ್ಟಿ ಮಾರಾಟ ಮಾಡುವ ಎಲ್ಲ ಪ್ರಯತ್ನಗಳನ್ನು ಸಿಐಟಿಯು ಇತರೆ ಕಾರ್ಮಿಕ ಸಂಘಟನೆಗಳ ಜತೆಗೂಡಿ ವಿರೋಧಿಸುತ್ತಾ, ಅವುಗಳ ರಕ್ಷಣೆಗಾಗಿ ನಿರಂತರವಾದ ಹೋರಾಟ ನಡೆಸುತ್ತಿರುವ ಸಂಘಟನೆಯಾಗಿದೆ.

ಹಟ್ಟಿ ಚಿನ್ನದ ಗಣಿ ಕಾರ್ಮಿಕರನ್ನು ಸಿಐಟಿಯು ನೇತೃತ್ವದಲ್ಲಿ ಸಂಘಟಿಸಿ ಅವರಿಗೆ ಬೋನಸ್, 2ನೇ ಮಕ್ಕಳಿಗೂ ಉದ್ಯೋಗ ಕೊಡಿಸಲು ಎ.ಬಿ.ದಾಸ್, ವಿ.ಜೆ.ಕೆ. ನಾಯರ್, ಪುರುಷೋತ್ತಮ ಕಲಾಲಬಂಡಿ, ಚಂದ್ರಶೇಖರ್ ಬಾಳೆ, ಅಮರಗುಂಡಪ್ಪ ನಿಲೋನಿ ಮೊದಲಾದವರು ಹಾಗೂ ವಿಶೇಷವಾಗಿ ಕಾರ್ಮಿಕರಿಗೆ ತಮ್ಮ ಬದುಕನ್ನು ತ್ಯಾಗ ಮಾಡಿದ ಕಾಂ. ನಾರಾಯಣ ಪೈ ಹಾಗೂ ಅರವಿಂದ ಮಲೆಬೆನ್ನೂರ್ ಅವರನ್ನು ನೆನಪಿಸಿ ಅವರ ಆದರ್ಶವನ್ನು ಮುನ್ನಡೆಸಲು ಪ್ರತಿಜ್ಞೆ ಮಾಡಲಾಯಿತು.

ಈ ಹಿನ್ನಲೆಯಲ್ಲಿ ಸಿಐಟಿಯು ನೇತೃತ್ವದ ಬಂಡಿಗಾಲಿ ತಂಡವು ಈ ಚುನಾವಣೆಯನ್ನು ಕಾರ್ಮಿಕ ವರ್ಗವನ್ನು ಒಂದಾಗಿಸಿ ಆ ಮೂಲಕ ಹಟ್ಟಿ ಆಡಳಿತ ಮಂಡಳಿ ಹಾಗೂ ಸರ್ಕಾರದ ಮೇಲೆ ಒತ್ತಡ ಹಾಕಿ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘದ ಬೇಡಿಕೆಗಳನ್ನು ಈಡೇರಿಸುವ ಉದ್ದೇಶದಿಂದ ಸ್ಪರ್ಧೆ ಮಾಡಿತ್ತು.





ಕೇರಳ: ರಾಜಭವನದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾರತ ಮಾತೆಯ ಚಿತ್ರ: ಸಂವಿಧಾನಕ್ಕೆ ನೇರ ಸವಾಲು

ಸಿ.ಸಿದ್ದಯ್ಯ

'ಸಂವಿಧಾನವು ಭಾರತ ದೇಶದ ಬೆನ್ನೆಲುಬು. ಬೇರೆ ಯಾವುದೇ ರಾಷ್ಟ್ರೀಯ ಪರಿಕಲ್ಪನೆ ಅದಕ್ಕಿಂತ ದೊಡ್ಡದಲ್ಲ. ಈ ದೇಶದ ಎಲ್ಲಾ ಪ್ರಜಾಪ್ರಭುತ್ವವಾದಿಗಳು ಮತ್ತು ದೇಶಭಕ್ತರು ಕೇರಳ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರಿಗೆ ಹೇಳಬೇಕಾದ ಮಾತುಗಳಿವು.'

ಕೇರಳದ ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ನ ಕೇಸರಿ ಧ್ವಜವನ್ನು ಹಿಡಿದ ಭಾರತ ಮಾತೆಯ ಚಿತ್ರವನ್ನು ವೇದಿಕೆಯಲ್ಲಿ ಪ್ರದರ್ಶಿಸಿರುವುದನ್ನು ಪ್ರತಿಭಟಿಸಿ ಹೊರನಡೆದ ಸಂದರ್ಭದಲ್ಲಿ ಕೇರಳ ಶಿಕ್ಷಣ ಸಚಿವ ವಿ.ಶಿವನ್ ಕುಟ್ಟಿ ಅವರು ಹೇಳಿದ ಮಾತಿದು. ರಾಜಭವನವು ಆರ್‌ಎಸ್‌ಎಸ್ ಶಾಖೆಯಲ್ಲ. ರಾಜಭವನವನ್ನು ಆರ್‌ಎಸ್‌ಎಸ್ ಕಾರ್ಯಸೂಚಿಯನ್ನು ಮುಂದಿಡುವ ಸ್ಥಳವನ್ನಾಗಿ ಮಾಡುವುದು ಸ್ವೀಕಾರಾರ್ಹವಲ್ಲ. ಈ ಪ್ರವೃತ್ತಿ ಸಂವಿಧಾನಕ್ಕೆ ನೇರ ಸವಾಲಾಗಿದೆ.

ಆರಿಫ್ ಮೊಹಮ್ಮದ್ ಖಾನ್ ಅವರ ನಂತರ ಕೇರಳದ ರಾಜ್ಯಪಾಲರಾಗಿ ನೇಮಕಗೊಂಡ ಅರ್ಲೇಕರ್ ಅವರು, ಸಂವಿಧಾನಕ್ಕೆ ಬಹಿರಂಗವಾಗಿ ಸವಾಲು ಹಾಕಲು ಮತ್ತು ಆರ್‌ಎಸ್‌ಎಸ್ ಸಿದ್ಧಾಂತವನ್ನು ಬಹಿರಂಗವಾಗಿ ಪ್ರಚಾರಮಾಡಲು ರಾಜಭವನವನ್ನೇ ವೇದಿಕೆಯನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಹೊಸ ವಿವಾದವೆಂದರೆ, 2025ರ ಜೂನ್ 19ರಂದು ರಾಜಭವನ ಮತ್ತು ಕೇರಳ ರಾಜ್ಯ ಸರ್ಕಾರ ಜಂಟಿಯಾಗಿ ಆಯೋಜಿಸಿದ್ದ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಪುರಸ್ಕಾರ ವಿತರಣಾ ಕಾರ್ಯಕ್ರಮದಲ್ಲಿ, ಕೇಸರಿ ಧ್ವಜ ಹಿಡಿದ ಮಹಿಳೆಯ ಚಿತ್ರದಲ್ಲಿ 'ಭಾರತಾಂಬೆ ಮೇಲೆ ಹೂವುಗಳನ್ನು ಸುರಿಸುವ' ಸಮಾರಂಭವನ್ನು ಸೇರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಬೇಕಿದ್ದ ಶಿಕ್ಷಣ ಸಚಿವ ವಿ.ಶಿವನ್ ಕುಟ್ಟಿ, 'ಅದು ನಡೆಯುವುದಿಲ್ಲ' ಎಂದು ಘೋಷಿಸಿ ಸ್ಥಳದಿಂದ ಹೊರ ನಡೆದರು.

"ಚಿತ್ರದಲ್ಲಿನ ಧಾರ್ಮಿಕ ಮತ್ತು ಭಿನ್ನಾಭಿಪ್ರಾಯದ ಚಿತ್ರಣಕ್ಕೆ ಮತನಿರಪೇಕ್ಷತೆಯ ರಾಜಕೀಯದಲ್ಲಿ ಯಾವುದೇ ಸಾಂವಿಧಾನಿಕ ಪಾವಿತ್ರ್ಯತೆ ಅಥವಾ ಅದಕ್ಕೆ ಸ್ಥಾನವಿಲ್ಲ. ಇದು ತ್ರಿವರ್ಣ ಧ್ವಜದಂತೆ ರಾಷ್ಟ್ರೀಯ ಸಂಕೇತವಲ್ಲ. ಮತನಿರಪೇಕ್ಷಿತ ಮತ್ತು ವೈವಿಧ್ಯತೆಯ ಭಾರತವನ್ನು ಏಕೈಕ ಹಿಂದೂ ರಾಷ್ಟ್ರವೆಂದು ಬಿಂಬಿಸಲು ರಾಜಭವನವು ತನ್ನ ಹಿಂದಿನ ನಾಯಕರ ಚಿತ್ರಗಳು ಸೇರಿದಂತೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಚಿಹ್ನೆಗಳನ್ನು ರಾಜಕೀಯ ಪ್ರಚೋದನೆಯಾಗಿ ಬಳಸುತ್ತಿದೆ" ಎಂದು ಶಿವನ್ ಕುಟ್ಟಿ ಆರೋಪಿಸಿದರು.

ನಂಬಿಕೆ ದ್ರೋಹ

ಯಾವುದೇ ಧಾರ್ಮಿಕ ಅಥವಾ ಸೈದ್ಧಾಂತಿಕ ಚಿತ್ರಗಳನ್ನು ಪ್ರದರ್ಶಿಸಲಾಗುವುದಿಲ್ಲ ಎಂದು ಸಚಿವ ವಿ.ಶಿವನ್ ಕುಟ್ಟಿ ಅವರಿಗೆ ರಾಜಭವನ ಮೊದಲೇ ಸ್ಪಷ್ಟಪಡಿಸಿದ್ದರೂ, ಈ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ನ ಕೇಸರಿ ಧ್ವಜವನ್ನು ಹಿಡಿದ ಭಾರತ ಮಾತೆಯ ಚಿತ್ರವು ಪ್ರಮುಖವಾಗಿ ಕಾಣಿಸಿಕೊಂಡಿತು. ಇದಕ್ಕೆ ಪ್ರತಿಕ್ರಿಯೆಯಾಗಿ, ಶಿಕ್ಷಣ ಸಚಿವರು ಪ್ರತಿಭಟಿಸಿ ಹೊರನಡೆದರು. ಈ ಕೃತ್ಯವನ್ನು 'ನಂಬಿಕೆ ದ್ರೋಹವಾಗಿದೆ. ಅಲ್ಲದೇ ತಟಸ್ಥ, ಸರಕಾರ ಪ್ರಾಯೋಜಿತ ಸಂದರ್ಭವಾಗಿರಬೇಕಾದದ್ದನ್ನು ರಾಜಕೀಯಗೊಳಿಸುವ ಉದ್ದೇಶಪೂರ್ವಕ ಪ್ರಯತ್ನ' ಎಂದು ಅವರು ಖಂಡಿಸಿದರು. ಅವರ ಪ್ರತಿಕ್ರಿಯೆ ಆತುರದಿಂದ ಕೂಡಿರಲಿಲ್ಲ ಅಥವಾ ಪ್ರತ್ಯೇಕವಾಗಿರಲಿಲ್ಲ. ಇದು ಸೈದ್ಧಾಂತಿಕ ಅತಿಕ್ರಮಣದ ದೊಡ್ಡ ಮಾದರಿಯ ವಿರುದ್ಧದ ತಾತ್ವಿಕ ನಿಲುವಾಗಿತ್ತು.

ಜೂನ್ 5ರಂದೂ ಇಂತಹದು ನಡೆದಿತ್ತು

ರಾಜಭವನವು ಅಧಿಕೃತ ಸಮಾರಂಭದಲ್ಲಿ ಕೇಸರಿ ಧ್ವಜವನ್ನು ಹಿಡಿದ ಮಹಿಳೆಯ ಚಿತ್ರವನ್ನು ಪ್ರದರ್ಶಿಸುವ ಮೂಲಕ ಕೋಲಾಹಲವನ್ನು ಸೃಷ್ಟಿಸಿದ್ದು ಇದೇ ಮೊದಲಲ್ಲ. ಜೂನ್ 5 ರಂದು, ವಿಶ್ವ ಪರಿಸರ ದಿನಾಚರಣೆಯ ಸಂದರ್ಭದಲ್ಲಿ, ಅದೇ ಚಿತ್ರವನ್ನು ಪ್ರದರ್ಶಿಸುವ ಮೂಲಕ ಧಾರ್ಮಿಕ ಮತ್ತು ರಾಜಕೀಯ ಸಂಕೇತಗಳನ್ನು ತುಂಬಲು ಪ್ರಯತ್ನಿಸಿತ್ತು. ಇದನ್ನು ವಿರೋಧಿಸಿ ಕೃಷಿ ಸಚಿವ ಪಿ. ಪ್ರಸಾದ್ ಅವರು ರಾಜಭವನದಲ್ಲಿ ನಡೆದ ಕಾರ್ಯಕ್ರಮವನ್ನು ಬಹಿಷ್ಕರಿಸಿದ್ದರು. ರಾಜ್ಯಪಾಲರ ಕಚೇರಿಯು ಆರ್‌ಎಸ್‌ಎಸ್ ಕಲ್ಪನೆಯ 'ಅಖಂಡ ಭಾರತ' ನಕ್ಷೆ ಮತ್ತು ಕೇಸರಿ ಧ್ವಜವನ್ನು ಹೊಂದಿರುವ ಭಾರತ ಮಾತೆಯ ಚಿತ್ರದ ಮುಂದೆ ದೀಪ ಬೆಳಗಿಸುವುದು ಮತ್ತು ಪುಷ್ಪ ನಮನ ಸಲ್ಲಿಸುವುದು ಸೇರಿದಂತೆ ಆರ್‌ಎಸ್‌ಎಸ್ ಶೈಲಿಯ ಆಚರಣೆಗಳನ್ನು ಅನುಸರಿಸಬೇಕೆಂದು ಒತ್ತಾಯಿಸಿದೆ ಎಂದು ವರದಿಯಾಗಿದೆ. ಆಡಳಿತದ ಜಾತ್ಯತೀತ ಸ್ವರೂಪವನ್ನು ಎತ್ತಿಹಿಡಿಯುವ ಕೃಷಿ ಇಲಾಖೆಯು, ಅಂತಹ ರಾಜಕೀಕರಣಗೊಂಡ ಚಿತ್ರಣವು ಸರ್ಕಾರಿ ಕಾರ್ಯಕ್ರಮದಲ್ಲಿ ಪ್ರಾಬಲ್ಯ ಸಾಧಿಸುವುದನ್ನು ತಡೆಯಲು ಕಾರ್ಯಕ್ರಮದ ಸ್ಥಳವನ್ನು ತಕ್ಷಣವೇ ಬದಲಾಯಿಸಿತು.

ರಾಜಭವನ ಆರ್‌ಎಸ್‌ಎಸ್ ಕಾರ್ಯಸೂಚಿಗೆ ವೇದಿಕೆಯಲ್ಲ

ರಾಜಭವನದಲ್ಲಿ ಭಾರತ ಮಾತೆಯ ಭಾವಚಿತ್ರ ಪ್ರದರ್ಶನವನ್ನು ಟೀಕಿಸಿದ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, "ಆರ್‌ಎಸ್‌ಎಸ್‌ನ ಸೈದ್ಧಾಂತಿಕ ಕಾರ್ಯಸೂಚಿಯನ್ನು ಪ್ರಚಾರ ಮಾಡಲು ರಾಜ್ಯಪಾಲರ ಕಚೇರಿಯನ್ನು ಬಳಸಬಾರದು. ರಾಜಭವನವನ್ನು ಆರ್‌ಎಸ್‌ಎಸ್ ಶಾಖೆಯ ಮಟ್ಟಕ್ಕೆ ಇಳಿಸಬಾರದು. ರಾಜಭವನವು ತಟಸ್ಥವಾಗಿರಬೇಕು ಮತ್ತು ರಾಜಕೀಯ ಪ್ರಚಾರದ ವೇದಿಕೆಯಾಗಿ ಅದನ್ನು ಪರಿವರ್ತಿಸಬಾರದು. ಈ ಪ್ರವೃತ್ತಿ ಸಂವಿಧಾನಕ್ಕೆ ನೇರ ಸವಾಲಾಗಿದೆ" ಎಂದಿದ್ದಾರೆ.

"ಚಿತ್ರದಲ್ಲಿರುವ ಧ್ವಜವು ಭಾರತದ ರಾಷ್ಟ್ರಧ್ವಜವಲ್ಲ, ಬದಲಾಗಿ ಅದು ಆರ್‌ಎಸ್‌ಎಸ್‌ಗೆ ಸಂಬಂಧಿಸಿದ ಧ್ವಜವಾಗಿದೆ. ಅವರು ಅದನ್ನು ಸ್ವೀಕರಿಸಬಹುದು, ಆದರೆ ಉಳಿದವರೆಲ್ಲರೂ ಅದನ್ನು ಸ್ವೀಕರಿಸಬೇಕು ಎಂದು ಒತ್ತಾಯಿಸುವುದು ಸರಿಯಲ್ಲ. ಭಾರತ ಮಾತೆಯ ಆ ಚಿತ್ರವು ಹಿನ್ನೆಲೆಯಲ್ಲಿ ಭಾರತದ ನಿಜವಾದ ನಕ್ಷೆಯನ್ನು ಸಹ ತೋರಿಸಿಲ್ಲ. ಸಂವಿಧಾನದಿಂದ ಗುರುತಿಸದ ಯಾವುದನ್ನೂ ನಾವು ಸ್ವೀಕರಿಸಲು ಬದ್ಧರಲ್ಲ" ಎಂದು ಪಿಣರಾಯಿ ಹೇಳಿದ್ದಾರೆ.

ರಾಜಭವನಕ್ಕೆ ಎಸ್‌ಎಫ್‌ಐ ಮೆರವಣಿಗೆ

ಸರ್ಕಾರಿ ಕಾರ್ಯಕ್ರಮಗಳಲ್ಲಿ ಈ ಚಿತ್ರ ಬಳಸಿದ್ದನ್ನು ಪ್ರತಿಭಟಿಸಿ, ಜೂನ್ 20ರಂದು ದಿನವಿಡೀ ರಾಜಭವನದ ದ್ವಾರಗಳ ಬಳಿಗೆ ಹೋಗುತ್ತಿದ್ದ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಮೆರವಣಿಗೆಯನ್ನು ತಡೆಯಲು ಪೊಲೀಸರು ಜಲಫಿರಂಗಿ ಮತ್ತು ಕಬ್ಬಿಣದ ಬ್ಯಾರಿಕೇಡ್‌ಗಳನ್ನು ಬಳಸಿದರು. ಇದರಿಂದಾಗಿ ಕಾರ್ಯಕರ್ತರು ರಸ್ತೆಯಲ್ಲೇ ಧರಣಿ ನಡೆಸಬೇಕಾಯಿತು.

> **ಕೇರಳದ ರಾಜಭವನದಲ್ಲಿ ಜೂನ್ 19ರಂದು ನಡೆದ ಕಾರ್ಯಕ್ರಮದ ವೇದಿಕೆಯಲ್ಲಿ ಆರ್‌ಎಸ್‌ಎಸ್‌ನ ಕೇಸರಿ ಧ್ವಜವನ್ನು ಹಿಡಿದ ಭಾರತ ಮಾತೆಯ ಚಿತ್ರವನ್ನು ಪ್ರದರ್ಶಿಸಿದ್ದುದನ್ನು ಪ್ರತಿಭಟಿಸಿ, ಕೇರಳದ ಶಿಕ್ಷಣ ಸಚಿವರು ಕಾರ್ಯಕ್ರಮದಿಂದ ಹೊರನಡೆದರು. ಇದನ್ನೇ, ಸಚಿವರು ಭಾರತ ಮಾತೆಯನ್ನು ಅವಮಾನಿಸಿದ್ದಾರೆ ಎಂದು ಬಿಜೆಪಿ ಮತ್ತು ಆರ್‌ಎಸ್‌ಎಸ್ ಬೆಂಬಲಿಗರು ಆರೋಪಿಸಿದ್ದಾರೆ. ರಾಜಭವನವನ್ನು ಆರ್‌ಎಸ್‌ಎಸ್ ಕಾರ್ಯಸೂಚಿಯನ್ನು ಮುಂದಿಡುವ ಸ್ಥಳವನ್ನಾಗಿ ಮಾಡುವುದು ಸಂವಿಧಾನಕ್ಕೆ ನೇರ ಸವಾಲಾಗಿದೆ. ಸಂವಿಧಾನದಿಂದಲ್ಲ, ಮನುಸ್ಮೃತಿಯಿಂದ ಮಾರ್ಗದರ್ಶನ ಪಡೆಯುತ್ತೇವೆ ಎಂದು ಘೋಷಿಸುವವರಿಂದ ಆಳಲ್ಪಡುವ ಈ ದೇಶವು ಹೆಚ್ಚು ಹೆಚ್ಚು ಅನಾಗರಿಕವಾಗುತ್ತಿದೆ. ಈ ಅಪಾಯವನ್ನು ಎದುರಿಸಲು ಬಲವಾದ ಜಾತ್ಯತೀತ ರಾಜಕೀಯವನ್ನು ಎತ್ತಿಹಿಡಿಯಬೇಕು.**

ಇದು ಆರ್‌ಎಸ್‌ಎಸ್ ಕಾರ್ಯತಂತ್ರದ ವಿಸ್ತರಣೆ

ಈ ಘಟನೆಗಳು ವಿಶಾಲವಾದ ರಾಷ್ಟ್ರೀಯ ಪ್ರವೃತ್ತಿಯ ಭಾಗವಾಗಿದ್ದು, ಅಲ್ಲಿ ಆರ್‌ಎಸ್‌ಎಸ್‌ಗೆ ಸಂಬಂಧಿಸಿದ ಚಿಹ್ನೆಗಳು, ನಿರೂಪಣೆಗಳು ಮತ್ತು ಪ್ರಕ್ರಿಯೆಗಳು ಸಾಂಸ್ಥಿಕ ಸ್ಥಳಗಳಿಗೆ ಹೆಚ್ಚಾಗಿ ದಾರಿ ಕಂಡುಕೊಳ್ಳುತ್ತಿವೆ. ಶಾಲಾ ಪಠ್ಯಪುಸ್ತಕಗಳನ್ನು ಪುನಃ ಬರೆಯುವುದರಿಂದ ಹಿಡಿದು ಐತಿಹಾಸಿಕ ವೈವಿಧ್ಯತೆಯ ಅಧ್ಯಾಯಗಳನ್ನು ಆಯ್ದು ತೆಗೆದುಹಾಕುವುದು, ನಗರಗಳನ್ನು ಮರುನಾಮಕರಣ ಮಾಡುವುದು ಮತ್ತು ಧಾರ್ಮಿಕ ಸ್ಥಳಗಳ ಮೇಲಿನ ವಿವಾದಗಳನ್ನು ಪುನರುಜ್ಜೀವನಗೊಳಿಸುವವರೆಗೆ, ಪ್ರಸ್ತುತ ಕೇಂದ್ರದಲ್ಲಿನ ಆಡಳಿತವು ದೇಶದ ಸಾಂಸ್ಕೃತಿಕ ಮತ್ತು ಸೈದ್ಧಾಂತಿಕ ಗುರುತನ್ನು ಮರುರೂಪಿಸುವ ಸ್ಪಷ್ಟ ಉದ್ದೇಶವನ್ನು ಪ್ರದರ್ಶಿಸಿದೆ. ಕೇರಳದಲ್ಲಿ ಈಗ ಬಯಲಾಗುತ್ತಿರುವುದು ಆ ಕಾರ್ಯತಂತ್ರದ ವಿಸ್ತರಣೆಯಾಗಿದೆ. ಈ ಬಾರಿ ರಾಜ್ಯಪಾಲರ ಸಾಂವಿಧಾನ ಕಚೇರಿಯ ಮೂಲಕ ಇದು ನಡೆಯುತ್ತಿದೆ.

ಇದು ವಿರೋಧ ಪಕ್ಷಗಳ ಆಳ್ವಿಕೆಯ ರಾಜ್ಯಗಳಲ್ಲಿ ಸಾಂಕೇತಿಕವಾಗಿ ಪ್ರಾಬಲ್ಯವನ್ನು ಪ್ರತಿಪಾದಿಸಲು ರಾಜಭವನದಂತಹ ಸಂಸ್ಥೆಗಳನ್ನು ಬಳಸಿಕೊಂಡು, ಕೇಂದ್ರದ ಆಳವಾದ ಸೈದ್ಧಾಂತಿಕ ಒತ್ತಡವನ್ನು ಪ್ರತಿಬಿಂಬಿಸುತ್ತದೆ. ಚುನಾಯಿತ ರಾಜ್ಯ ಸರ್ಕಾರಗಳನ್ನು ಬೈಪಾಸ್ ಮಾಡಲು, ಅಧಿಕೃತ ಕಾರ್ಯಕ್ರಮಗಳಲ್ಲಿ ಸೈದ್ಧಾಂತಿಕ ಚಿಹ್ನೆಗಳನ್ನು ಸೇರಿಸಲು ಮತ್ತು ರಾಜ್ಯ ಸ್ವಾಯತ್ತತೆಯನ್ನು ಪ್ರಶ್ನಿಸಲು ರಾಜ್ಯಪಾಲರ ಬಳಕೆಯು ಹೆಚ್ಚುತ್ತಿದೆ. ಇದು ಭಾರತದ ಫೆಡರಲ್ ರಚನೆ ಮತ್ತು ಜಾತ್ಯತೀತ ಅಡಿಪಾಯಕ್ಕೆ ನೇರ ಬೆದರಿಕೆಯಾಗಿದೆ. ರಾಷ್ಟ್ರದ ಸಾಂವಿಧಾನಿಕ ವೈವಿಧ್ಯತೆಯನ್ನು ಪ್ರತಿಬಿಂಬಿಸುವ ಬದಲಾಗಿ ಒಂದೇ ಸೈದ್ಧಾಂತಿಕ ಧೋರಣೆಯನ್ನು ಪ್ರತಿಧ್ವನಿಸಲು ಸಾರ್ವಜನಿಕ ಸಂಸ್ಥೆಗಳನ್ನು ಬಳಸಲಾಗುತ್ತಿದೆ.

ಭಾರತ ಮಾತೆಯ ವ್ಯಕ್ತಿತ್ವಕ್ಕಲ್ಲ

ಬಿಜೆಪಿ ಮತ್ತು ಆರ್‌ಎಸ್‌ಎಸ್ ಬೆಂಬಲಿಗರು ಸಚಿವ ಶಿವನ್ ಕುಟ್ಟಿ ಭಾರತ ಮಾತೆಯನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿದ್ದಾರೆ. ಆದರೆ, 'ಭಾರತ ಮಾತೆಯ ವ್ಯಕ್ತಿತ್ವಕ್ಕೆ ಅಲ್ಲ, ಜಾತ್ಯತೀತ ಜಾಗದಲ್ಲಿ ಆರ್‌ಎಸ್‌ಎಸ್ ಸಂಕೇತವನ್ನು ಬಳಸುವುದಕ್ಕೆ ತಮ್ಮ ಆಕ್ಷೇಪವಿದೆ' ಎಂಬ ಸಚಿವರ ಸ್ಪಷ್ಟೀಕರಣವು ನಿಜವಾದ ಸಮಸ್ಯೆಯನ್ನು ಎತ್ತಿ ತೋರಿಸುತ್ತದೆ. ಇದು ದೇಶಭಕ್ತಿಯ ಬಗ್ಗೆ ಅಲ್ಲ; ಇದು ಸಂಕುಚಿತವಾದ ಸೈದ್ಧಾಂತಿಕ ದೃಷ್ಟಿಕೋನವನ್ನು ಪಸರಿಸಲು ಸಾರ್ವಜನಿಕ ಕಾರ್ಯಗಳನ್ನು ರಾಜಕೀಯಗೊಳಿಸುವ ಬಗ್ಗೆ.

ಬಹುತ್ವ ಭಾರತದ ಸಂಸತ್ತಿನ ಉದ್ಘಾಟನೆಗೆ ಶೈವ ಸನ್ಯಾಸಿಗಳನ್ನು ಆಹ್ವಾನಿಸಿದಾಗ, ಬುಡಕಟ್ಟು ಜನಾಂಗದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸಹ ಕಡೆಗಣಿಸಲಾಯಿತು ಎಂಬುದನ್ನು ನಾವು ಮರೆಯಬಾರದು. ಅಯೋಧ್ಯೆಯಲ್ಲಿ ಧ್ವಂಸಗೊಂಡ ಮಸೀದಿಯ ಸ್ಥಳದಲ್ಲಿ ನಿರ್ಮಿಸಲಾದ ರಾಮ ಮಂದಿರವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ರಾಜಭವನದಲ್ಲಿ ಕೇಸರಿ ಧ್ವಜ ಹಿಡಿದ ಮಹಿಳೆಯ ಚಿತ್ರದ ಮೇಲೆ ಹೂವಿನ ಮಳೆ ಸುರಿಸುವುದು ಇದರ ಮುಂದುವರಿದ ಭಾಗವಾಗಿದೆ. ಆರ್‌ಎಸ್‌ಎಸ್ ಸ್ಥಾಪನೆಯ 100ನೇ ವಾರ್ಷಿಕೋತ್ಸವದಂದು ಹಿಂದೂ ರಾಷ್ಟ್ರೀಯತೆಯನ್ನು ತೀವ್ರಗೊಳಿಸುವುದು ಇದರ ಹಿಂದಿನ ಉದ್ದೇಶವಾಗಿದೆ.

ಕೇರಳ ಸರ್ಕಾರ ಸಾಂವಿಧಾನಿಕ ತತ್ವಗಳಿಗೆ ಬದ್ಧ

ಇದಕ್ಕೆ ವ್ಯತಿರಿಕ್ತವಾಗಿ, ಕೇರಳ ಸರ್ಕಾರವು ಜಾತ್ಯತೀತತೆ ಮತ್ತು ಫೆಡರಲ್ ಸ್ವಾಯತ್ತತೆಯ ಸಾಂವಿಧಾನಿಕ ತತ್ವಗಳನ್ನು ಎತ್ತಿಹಿಡಿಯುವಲ್ಲಿ ದೃಢವಾಗಿ ನಿಂತಿದೆ. ರಾಜಭವನದ ಮೂಲಕ ಕಾರ್ಯನಿರ್ವಹಿಸುವ ಕೇಂದ್ರ ಸರ್ಕಾರ ಸ್ಥಳೀಯ ಆದೇಶಗಳನ್ನು ಅತಿಕ್ರಮಿಸಲು ಮತ್ತು ಕೇಂದ್ರೀಕೃತ ಸೈದ್ಧಾಂತಿಕ ಚೌಕಟ್ಟನ್ನು ಹೇರಲು ಪ್ರಯತ್ನಿಸುತ್ತಿದೆ.

'ನಮ್ಮ ಭಾರತ ಎಲ್ಲಾ ಸಮುದಾಯಗಳ ತಾಯಿಯಾಗಲಿ, ಆದ್ದರಿಂದ ಯಾವುದೇ ಸಮುದಾಯವು ಪರಕೀಯವಾಗಿರಬಾರದು' ಮಹಾನ್ ಕವಿ ರವೀಂದ್ರನಾಥ ಟ್ಯಾಗೋರ್ ಅವರು 1909ರಲ್ಲಿ ಮಾಡಿದ ಭಾಷಣದಲ್ಲಿನ ಈ ಮಾತು, 2025ರ ನಂತರವೂ ಪ್ರಸ್ತುತವಾಗಿದೆ ಎಂದು ನಾವು ಭಾವಿಸಿದರೆ, ಈ ದೇಶವು ಇನ್ನೂ ರಾಜಕೀಯ ಪ್ರಬುದ್ಧತೆಯನ್ನು ತಲುಪಿಲ್ಲ ಎಂದರ್ಥ. ಸಂವಿಧಾನದಿಂದಲ್ಲ, ಮನುಸ್ಮೃತಿಯಿಂದ ಮಾರ್ಗದರ್ಶನ ಪಡೆಯುತ್ತೇವೆ ಎಂದು ಘೋಷಿಸುವವರಿಂದ ಆಳಲ್ಪಡುವ ಈ ದೇಶವು ಹೆಚ್ಚು ಹೆಚ್ಚು ಅನಾಗರಿಕವಾಗುತ್ತಿದೆ. ಈ ಅಪಾಯವನ್ನು ಎದುರಿಸಲು ಬಲವಾದ ಜಾತ್ಯತೀತ ರಾಜಕೀಯವನ್ನು ಎತ್ತಿಹಿಡಿಯಬೇಕು.

ಪಶ್ಚಿಮ ಏಷ್ಯಾ ವಿದ್ಯಮಾನಗಳು

ನೀಲೋತ್ಪಲ್ ಬಸು

ಕಳೆದ ಹದಿನೈದು ದಿನಗಳ ಘಟನಾವಳಿಗಳು ನಾಟಕೀಯವಾಗಿದ್ದವು. ಅವುಗಳಲ್ಲಿ ಕೆಲವು ವಿನಾಶಕಾರಿಯಾಗಿಯೂ ಇದ್ದವು.

ಇರಾನ್‌ನ ಟಾರ್ಗೆಟ್‌ಗಳು, ಅದರಲ್ಲೂ ವಿಶೇಷವಾಗಿ ನತಾಂಜ್ ಮತ್ತು ಇಸ್ಫಹಾನ್‌ನಲ್ಲಿರುವ ಅದರ ಪರಮಾಣು ಪುಷ್ಟೀಕರಣ ಮತ್ತು ಉತ್ಪಾದನೆ ಸ್ಥಾವರಗಳ ಮೇಲೆ ಇಸ್ರೇಲ್‌ನ ಅಚ್ಚರಿಯ ದಾಳಿಗಳೊಂದಿಗೆ ಈ ಘಟನಾವಳಿಗಳು ಅನಾವರಣಗೊಂಡವು. ಮೂರನೇ ಹಾಗೂ ಅತ್ಯಂತ ನಿರ್ಣಾಯಕವಾದ ಸ್ಥಳವಾದ ಫೋರ್ಡೋವನ್ನು ಇಸ್ರೇಲ್ ಮುಟ್ಟಲಿಲ್ಲ. ಫೋರ್ಡೋ, ಬೆಟ್ಟಗಳ ನಡುವೆ ಭೂಮಿಯ ಸುಮಾರು 80 ಮೀಟರ್ ಆಳದಲ್ಲಿದೆ. ಸಾಂಪ್ರದಾಯಿಕ ಅಸ್ತ್ರಗಳಿಗೆ ಅದನ್ನು ಭೇದಿಸಲು ಸಾಧ್ಯವಿಲ್ಲ. ಈ ಹಂತದಲ್ಲಿ, ಅಮೆರಿಕ ಮಿಲಿಟರಿಯ ಹೆವಿ-ಡ್ಯೂಟಿ ಬಂಕರ್-ಬಸ್ಟರ್ ಬಾಂಬ್‌ಗಳಿಗೆ ಮಾತ್ರವೇ ಇಷ್ಟು ಆಳವನ್ನು ಭೇದಿಸಲು ಸಾಧ್ಯ ಎಂದು ತಜ್ಞರು ಸಲಹೆ ನೀಡಲು ಆರಂಭಿಸಿದರು. ಈ ಬಗೆಗಿನ ನಿಖರತೆ ಇನ್ನೂ ಖಚಿತವಾಗಿಲ್ಲವಾದರೂ ಅಮೆರಿಕವು ನೇರವಾಗಿ ಮಧ್ಯಪ್ರವೇಶ ಮಾಡಲು ಕಾಲ ಕೂಡಿಬಂದಿದೆ ಎಂಬುದು ಅದರ ಸೂಚ್ಯ ಪರಿಣಾಮವಾಗಿತ್ತು.

ಟ್ರಂಪ್‌ರವರ ರಂಗಪ್ರವೇಶ

ಸಂಘರ್ಷದಲ್ಲಿ ಅಮೆರಿಕವನ್ನು ಎಳೆಯಬೇಕೆಂಬ ಅಭಿಯಾನ ನೆತನ್ಯಾಹು ಮತ್ತು ಇಸ್ರೇಲ್ ಬಯಸಿದಂತೇ ಇತ್ತು. ಆರಂಭದಲ್ಲಿ ನೆತನ್ಯಾಹುನ ಹೆಚ್ಚುತ್ತಿರುವ ಧೈರ್ಯ ಮತ್ತು ಮಿಲಿಟರಿ ಶಕ್ತಿ ಪ್ರದರ್ಶನದ ಹೊರತಾಗಿಯೂ ಇರಾನ್‌ನ ಸಾಮರ್ಥ್ಯಗಳನ್ನು ನಿಷ್ಕ್ರಿಯಗೊಳಿಸಲು ಸಾಧ್ಯವಾಗಲಿಲ್ಲ. ಇದಕ್ಕೆ ತದ್ವಿರುದ್ಧವಾಗಿ, ಇರಾನ್ ಬಲಿಷ್ಠವಾದ ಪ್ರತಿರೋಧ ತೋರಿತು ಹಾಗೂ ಪ್ರತಿ-ಆಕ್ರಮಣಗಳನ್ನು ನಡೆಸಿತು. ಐರನ್ ಡೋಮ್ ಸಹಿತ ಇಸ್ರೇಲ್‌ನ ವಾಯು ರಕ್ಷಣಾ ವ್ಯವಸ್ಥೆಗೆ ಕೂಡ ಇರಾನ್‌ನ ಹೈಪರ್‌ಸಾನಿಕ್ ಕ್ಷಿಪಣಿಗಳನ್ನು (ಮಿಸೈಲ್) ತಡೆಯಲು ಸಾಧ್ಯವಾಗಲಿಲ್ಲ ಎನ್ನುವುದು ಸ್ಪಷ್ಟವಾಗಿತ್ತು. ಹೈಪರ್‌ಸಾನಿಕ್‌ಗಳನ್ನು ಮರೆಮಾಚಲು ಗುಪ್ತ ಡ್ರೋನ್‌ಗಳು ಮತ್ತು ಸಾಂಪ್ರದಾಯಿಕ ಮಿಸೈಲ್‌ಗಳನ್ನು ಬಳಸಿದ ಇರಾನ್‌ನ ಚಾಣಾಕ್ಷ ತಂತ್ರವನ್ನು ರಕ್ಷಣಾ ವಿಶ್ಲೇಷಕರು ಗಮನಿಸಿದ್ದಾರೆ. ಈ ತಂತ್ರವು ಇಸ್ರೇಲ್‌ನ ರಕ್ಷಣಾ ವ್ಯವಸ್ಥೆಯನ್ನು ಬೈಪಾಸ್ ಮಾಡಿದ್ದು ಮಾತ್ರವಲ್ಲದೆ ಟೆಲ್ ಅವೀವ್ ಮತ್ತು ಹೈಫಾದಲ್ಲಿನ ಟಾರ್ಗೆಟ್‌ಗಳ ಮೇಲೆ ದಾಳಿ ನಡೆಸುವಲ್ಲಿ ಯಶಸ್ವಿಯೂ ಆಯಿತು.

ಇಸ್ರೇಲ್ ಕೂಡ ಹಿನ್ನಡೆಗಳನ್ನು ಅನುಭವಿಸುತ್ತಿರುವುದು ಸ್ಪಷ್ಟವಾಗಿದೆ. ಇಸ್ರೇಲ್‌ನ ನಷ್ಟಗಳು ಪಾರದರ್ಶಕವಾಗಿ ಎದ್ದು ಕಾಣುತ್ತಿದ್ದರೂ ಅದರ ನಿಖರ ಪ್ರಮಾಣವನ್ನು ಅಂದಾಜು ಮಾಡುವುದು ಕಷ್ಟ. ಏನೇ ಇದ್ದರೂ ವಾಯು ರಕ್ಷಣೆಯಲ್ಲಿ ಇಸ್ರೇಲ್ ಅಜೇಯವಾದುದು ಎಂದು ದೀರ್ಘಕಾಲದಿಂದ ಚಾಲ್ತಿಯಲ್ಲಿರುವ ಮಿಥ್ಯೆ ನುಚ್ಚುನೂರಾಗಿರುವುದಂತೂ ಸುಸ್ಪಷ್ಟ. ಈ ಮಿಥ್ಯೆ ನೆಲಕಚ್ಚಿರುವುದು ಇಸ್ರೇಲ್‌ಗೆ ಸರಿಪಡಿಸಲಾಗದ ನಷ್ಟವಾಗಿದೆ. ಆದ್ದರಿಂದ, ಈ ನೆಲೆಯಲ್ಲಿ, ನೆತನ್ಯಾಹುನ ಆಕ್ರಮಣಕಾರಿ ಧೋರಣೆಯನ್ನು ರಕ್ಷಿಸಿ ಮಾನ ಉಳಿಸಲು ಇದ್ದ ಏಕೈಕ ಮಾರ್ಗ ಅಮೆರಿಕವಾಗಿತ್ತು.

ಆರಂಭಿಕ ಹಂತದಲ್ಲಿ, ಅಣ್ವಸ್ತ್ರ ಪ್ರಸರಣ ತಡೆ ಒಪ್ಪಂದದ (ಎನ್‌ಪಿಟಿ) ಅಡಿಯ ಸುರಕ್ಷತಾ ಬದ್ಧತೆಗಳನ್ನು ಇರಾನ್ ಉಲ್ಲಂಘಿಸುತ್ತಿದೆಯೆಂದು ಆರೋಪಿಸಿ ಇಸ್ರೇಲ್ ತನ್ನ ಆಕ್ರಮಣವನ್ನು ಸಮರ್ಥಿಸಿಕೊಂಡಿದೆ. ಇಂಥ ಆರೋಪಗಳು ಹೊಸದೇನೂ ಅಲ್ಲ. ಎರಡು ದಶಕಕ್ಕೂ ಹೆಚ್ಚು ಸಮಯದಿಂದ ಇಸ್ರೇಲ್ ಇಂಥ ಆರೋಪಗಳನ್ನು ಮಾಡುತ್ತಲೇ ಬಂದಿದೆ. ಆದರೆ, ಅಂತಾರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ (ಐಎಇಎ) ನಿಯಮಿತವಾಗಿ ತಪಾಸಣೆ ನಡೆಸಿದರೂ ಈ ಆರೋಪಗಳನ್ನು ರುಜುವಾತು ಪಡಿಸಲು ಸಾಧ್ಯವಾಗಿಲ್ಲ.

ಇರಾಕ್‌ನಲ್ಲಿ ಅಂಥ ಯಾವುದೇ ಶಸ್ತ್ರಾಸ್ತ್ರಗಳು ಇರಲೇ ಇಲ್ಲ

ಇತಿಹಾಸದಲ್ಲಿ ಇದೇ ರೀತಿಯ ಸಮಾನಾಂತರ ಉದಾಹರಣೆ ಸಿಗುತ್ತದೆ. ಇರಾಕ್‌ನಲ್ಲಿ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳಿವೆ ಎಂಬ ಪರಿಶೀಲಿಸದ ಇಂಥದ್ದೇ ಆರೋಪಗಳು ವಿನಾಶಕಾರಿ ಯುದ್ಧಕ್ಕೆ ಕಾರಣವಾಗಿದ್ದು ಅದರ ಪರಿಣಾಮವಾಗಿ ಸದ್ದಾಂ ಹುಸೇನ್ ಪತನಗೊಂಡಿದ್ದರು. ಇರಾಕ್‌ನಲ್ಲಿ ಅಂಥ ಯಾವುದೇ ಶಸ್ತ್ರಾಸ್ತ್ರಗಳು ಇರಲೇ ಇಲ್ಲ ಎನ್ನುವುದನ್ನು ಜಗತ್ತು ಆ ನಂತರ ಮನವರಿಕೆ ಮಾಡಿಕೊಂಡಿತ್ತು. ಸುಳ್ಳು ಕಲ್ಪನೆಗಳ



ಫಲಿತವಾಗಿ ಊಹಿಸಲೂ ಅಸಾಧ್ಯವಾದ ದುರಂತ ಸಂಭವಿಸಿತು.

ಹಿನ್ನಡೆಯಾದರೂ ಇಸ್ರೇಲ್ ತನ್ನ ಮಿಲಿಟರಿ ಅಭಿಯಾನವನ್ನು ಮುಂದುವರಿಸಿದೆ. ಇರಾನ್ 'ಸೂಕ್ತವಾಗಿ ಸಹಕರಿಸುತ್ತಿಲ್ಲ' ಎಂದು ಐಎಇಎ ಇತ್ತೀಚೆಗೆ ನೀಡಿದ ಹೇಳಿಕೆಗೆ ಜೋತುಬಿದ್ದ ಇಡೀ ಪಾಶ್ಚಾತ್ಯ ದೇಶಗಳು ಅಮೆರಿಕ ನೇತೃತ್ವದಲ್ಲಿ ಒಂದಾಗಿ, ಇರಾನ್ ನ್ಯೂಕ್ಲಿಯರ್ ಬಾಂಬ್ ಹೊಂದಲೇಬಾರದೆಂಬ ಅಪಸ್ವರವನ್ನು ಮತ್ತೆ ಕರ್ಕಶವಾಗಿ ಹೇಳುವುದಕ್ಕೆ ಎಡೆಮಾಡಿತ್ತು. ಇರಾನ್ ವಿರುದ್ಧದ ಈ ಪ್ರಚಾರವು ಸ್ವತಃ ಇಸ್ರೇಲ್‌ನ ಪರಮಾಣು ಕಾರ್ಯಕ್ರಮ ಹಾಗೂ ಶಸ್ತ್ರಾಸ್ತ್ರ ಹೊಂದುವ ಅದರ ಕ್ರಮಗಳ ಕುರಿತು ಜಗತ್ತಿನ ಗಮನವನ್ನು ಬೇರೆಡೆ ಸೆಳೆಯಲು ಇರುವ ತಂತ್ರವಲ್ಲದೇ ಬೇರೇನೂ ಅಲ್ಲ. ಪಶ್ಚಿಮ ಏಷ್ಯಾದಲ್ಲಿ ಇಸ್ರೇಲ್ ನ್ಯೂಕ್ಲಿಯರ್ ಏಕಾಧಿಪತ್ಯ ಹೊಂದಬೇಕೆನ್ನುವುದು ಅಮೆರಿಕ ಮತ್ತು ಇಸ್ರೇಲ್ ಬಯಕೆಯಾಗಿದೆ.

ಈ ಹಿಂದೆಯೇ ನಾವು ಹೇಳಿದಂತೆ, ಇಸ್ರೇಲ್‌ನ ಪರಮಾಣು ಕಾರ್ಯಕ್ರಮವು ಇಡಿಯಾಗಿ ಎನ್‌ಪಿಟಿ ಚೌಕಟ್ಟಿನ ಹೊರಗಡೆಯೇ ನಡೆಯುತ್ತಿದೆ. ಹಾಗಾಗಿ ಯಾವುದೇ ಅಂತಾರಾಷ್ಟ್ರೀಯ ಪರಿಶೀಲನೆ ಅಥವಾ ತಪಾಸಣೆಯನ್ನು ಅದು ತಪ್ಪಿಸಿಕೊಳ್ಳುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಇರಾನ್‌ನಲ್ಲಿ ಅಣ್ವಸ್ತ್ರಗಳಿಲ್ಲ ಹಾಗೂ ಅದು ಯಾವುದೇ ಸಕ್ರಿಯ ಶಸ್ತ್ರೀಕರಣ ಕಾರ್ಯಕ್ರಮವನ್ನು ಹೊಂದಿಲ್ಲ. ಇದು ಸ್ವತಃ ಇರಾನ್ ಮಾತ್ರವೇ ಹೇಳಿಕೊಳ್ಳುವ ಮಾತಲ್ಲ. ಐಎಇಎ ಮಹಾ ನಿರ್ದೇಶಕ ರಫೇಲ್ ಗ್ರಾಸಿ ಮತ್ತು ಅಮೆರಿಕದ ರಾಷ್ಟ್ರೀಯ ಬೇಹುಗಾರಿಕೆ ನಿರ್ದೇಶಕಿ ತುಳಸಿ ಗಬ್ಬಾರ್ಡ್ ಅವರೂ ಇದನ್ನು ದೃಢಪಡಿಸಿದ್ದಾರೆ.

ಪಶ್ಚಿಮ ಏಷ್ಯಾ ಮೇಲೆ ಏಕಾಧಿಪತ್ಯ ಸಾಧಿಸಲು

ಹಾಗೆಂದಾಗ ಇರಾನ್ ವಿರುದ್ಧದ ಪ್ರಚಾರವು ನಿಜವಾಗಿಯೂ ಎನ್‌ಪಿಟಿ ಉಲ್ಲಂಘನೆಗಳ ಬಗ್ಗೆ ಅಲ್ಲ. ವಾಸ್ತವವಾಗಿ ಅದೊಂದು ಭೌಗೋಳಿಕ ರಾಜಕೀಯ ಕಾರ್ಯತಂತ್ರವಾಗಿದೆ ಎನ್ನುವುದು ಸ್ಪಷ್ಟ. ಇಂಧನ ಸಮೃದ್ಧ ಪಶ್ಚಿಮ ಏಷ್ಯಾ ಮೇಲೆ ವ್ಯೂಹಾತ್ಮಕ ಏಕಾಧಿಪತ್ಯ ಸಾಧಿಸುವ ಲೆಕ್ಕಾಚಾರದ ಕ್ರಮ ಇದಾಗಿದೆ. ಅಮೆರಿಕ ಬೆಂಬಲಿತ ಷಾ ಆಡಳಿತ ಪತನಗೊಂಡ ನಂತರ, ಈ ವಲಯದಲ್ಲಿ ಅಮೆರಿಕ-ಇಸ್ರೇಲ್ ಕೂಟಕ್ಕೆ ಸತತವಾಗಿ ಅಡ್ಡಿಯಾಗುತ್ತಿರುವುದು ಇರಾನ್ ಆಗಿದೆ. ಈ ನಡುವೆ, ಯೆಹೂದಿವಾದದ (ಜಿಯೋನಿಸಂ) ನಿಜವಾದ ಮುಖ ಇಡೀ ಜಗತ್ತಿಗೆ ಹೆಚ್ಚೆಚ್ಚಾಗಿ ಸ್ಪಷ್ಟವಾಗುತ್ತಿದೆ. ಪ್ಯಾಲೆಸ್ತೀನಿ ಪ್ರದೇಶಗಳಲ್ಲಿ ಜನಾಂಗೀಯ ಶುದ್ಧೀಕರಣ (ಎಥ್ನಿಕ್ ಕ್ಲೀನ್ಸಿಂಗ್) ಜಿಯೋನಿಸ್ಟ್ ಇಸ್ರೇಲ್‌ನ ಪ್ರಮುಖ ಉದ್ದೇಶವಾಗಿದೆ. ಈ ನರಹತ್ಯಾ ಯೋಜನೆಗೆ ಈಗಾಗಲೇ 56,000ಕ್ಕೂ ಹೆಚ್ಚು ಜೀವಗಳು ಬಲಿಯಾಗಿವೆ. ಅವರಲ್ಲಿ ಬಹುತೇಕರು ಮಹಿಳೆಯರು ಮತ್ತು ಮಕ್ಕಳಾಗಿದ್ದಾರೆ. ಗಾಜಾ ಈಗ ಅಭೂತಪೂರ್ವ ಕ್ಷಾಮದ ದವಡೆಯಲ್ಲಿದೆ. ಇಸ್ರೇಲ್ ಮಿಲಿಟರಿ ನಿಯಂತ್ರಿತ ಆಹಾರದ ನೆರವನ್ನು ಇಸ್ರೇಲ್ ಶಸ್ತ್ರೀಕರಣಗೊಳಿಸುತ್ತಿರುವುದು ಇದಕ್ಕೆ ಕಾರಣವಾಗಿದೆ.

ಕೆಲವು ಪಾಶ್ಚಾತ್ಯ ದೇಶಗಳು ಕೂಡ ಈ ಧೋರಣೆಗೆ ಸೌಮ್ಯವಾಗಿ ಅಸಮ್ಮತಿ ಸೂಚಿಸಿವೆ. ನರಮೇಧದಿಂದ ವಿಶ್ವ ಸಂಸ್ಥೆಯ ಸನದು ಉಲ್ಲಂಘನೆಯಾಗುತ್ತದೆ ಮಾತ್ರವಲ್ಲದೆ ಅಂತಾರಾಷ್ಟ್ರೀಯ ಕಾನೂನಿನ ಪ್ರತಿಯೊಂದು ಮಾನದಂಡದ ಉಲ್ಲಂಘನೆಯೂ ಆಗುತ್ತದೆ ಎಂದು ಅವು ಹೇಳಿದ್ದರೂ ಆಷಾಢಭೂತಿತನ ಎದ್ದು ಕಾಣಿಸುತ್ತದೆ. ಜಿ7 ಹೇಳಿಕೆಯು ಇಸ್ರೇಲ್‌ನ ಸ್ವ-ರಕ್ಷಣೆಯ ಹಕ್ಕನ್ನು ಎತ್ತಿ ಹಿಡಿದಿರುವುದು ಅಸಂಗತವಾಗಿದೆ. ಗಾಜಾ ಮತ್ತು ಅದನ್ನು ಮೀರಿಯೂ ಇಸ್ರೇಲ್ ನಡೆಸುತ್ತಿರುವ ಕ್ರಮಗಳು ಅಸಮರ್ಥನೀಯವಾಗಿವೆ. ಜಿಯೋನಿಸಂನ ಕಟ್ಟಾ ಬೆಂಬಲಿಗರಿಗೆ ಕೂಡ ಅದನ್ನು ಸಮರ್ಥಿಸುವುದು ಕಷ್ಟವಾಗುತ್ತಿದೆ.

ಈ ಹಿನ್ನೆಲೆಯಲ್ಲಿ, ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕ ರಂಗ ಪ್ರವೇಶ ಮಾಡಿ ಪರಿಸ್ಥಿತಿಯನ್ನು ಬಿಗಡಾಯಿಸಿತು. ನಾವಾಗಲೇ ಗಮನಿಸಿರುವಂತೆ ಭಾರಿ ಬಾಂಬ್ ದಾಳಿಗಳನ್ನು ನಡೆಸಿದರೂ ಇರಾನ್ ವಿರುದ್ಧ ತನ್ನ ಮಿಲಿಟರಿ ಉದ್ದೇಶಗಳನ್ನು ಸಾಧಿಸಲು ಇಸ್ರೇಲ್ ವಿಫಲವಾಗುತ್ತಿದೆ. ಈ ಸನ್ನಿವೇಶದಲ್ಲಿ ನಾಟಕೀಯ ಬೆಳವಣಿಗೆ ನಡೆದಿದ್ದು, ಇರಾನ್ ಮೇಲೆ ಬಂಕರ್ ಬಸ್ಟರ್‌ಗಳನ್ನು ಹಾಕಿದ್ದಾಗಿ ಟ್ರಂಪ್ ಬೆಳ್ಳಂಬೆಳಿಗ್ಗೆ ಪ್ರಕಟಿಸಿದರು.

ಆದರೆ, ಇರಾನ್‌ನ ಪರಮಾಣು ಮೂಲಸೌಕರ್ಯವನ್ನು ಸಂಪೂರ್ಣವಾಗಿ ನಾಶಮಾಡಲಾಗಿದೆಯೇ ಎನ್ನುವುದನ್ನು ದೃಢಪಡಿಸಲು ಅಮೆರಿಕ ಆಡಳಿತಕ್ಕೆ ಈಗಲೂ ಸಾಧ್ಯವಾಗಿಲ್ಲ. ಫೋರ್ಡೋನಲ್ಲಿನ ಇರಾನ್‌ನ ರಿಫೈನಿಂಗ್ ಸೌಕರ್ಯಗಳು ಸರಿಪಡಿಸಲಾಗದಷ್ಟು ಹಾನಿಗೊಂಡಿವೆ ಎನ್ನಲು ಯಾವುದೇ ಪುರಾವೆಯಿಲ್ಲ ಎಂಬುದಾಗಿ ವಿಶ್ವ ಸಂಸ್ಥೆ ಭದ್ರತಾ ಮಂಡಳಿ ಮುಂದೆ ಐಎಇಎ ಸಾಕ್ಷ್ಯ ಹೇಳಿದೆ. ಇಂಥ ಆಕ್ರಮಣಗಳ ಸಂದರ್ಭದಲ್ಲಿ ಸಂಭವಿಸಬೇಕಾದ ವಿಕಿರಣ ಸೋರಿಕೆಯ ಯಾವುದೇ ಸುಳಿವು ಸಿಗದಿರುವುದು ಇನ್ನೂ ಮಹತ್ವದ ಸಂಗತಿಯಾಗಿದೆ.

ಶಾಂತಿಯ ಉಪಕ್ರಮಕ್ಕೆ ಮುಂದಾದ ಟ್ರಂಪ್

ಬಹುಶಃ ಇಸ್ರೇಲ್ ಇದನ್ನು ತಾಳಿಕೊಳ್ಳದು ಹಾಗೂ ಅಮೆರಿಕ ಕೂಡ ಜಗತ್ತಿನಾದ್ಯಂತ ಹೆಚ್ಚುತ್ತಿರುವ ಪ್ರತಿರೋಧದಿಂದಾಗಿ; ಮಾತ್ರವಲ್ಲದೆ ಸುದ್ದಿ ಸಂಸ್ಥೆ ರಾಯ್ಟರ್ಸ್ ಈಚೆಗೆ ನಡೆಸಿದ ಸಮೀಕ್ಷೆಯಲ್ಲಿ ತಿಳಿದು ಬಂದಿರುವಂತೆ ಅಮೆರಿಕದೊಳಗೇ ಹೆಚ್ಚುತ್ತಿರುವ ಪ್ರತಿರೋಧದ ಕಾರಣ ಶಾಂತಿಯ ಭಾರಿ ಉಪಕ್ರಮಕ್ಕೆ ಟ್ರಂಪ್ ಮುಂದಾಗುವುದು ಅನಿವಾರ್ಯವಾಯಿತು. ಹಾಗಾಗಿ ಕದನ ವಿರಾಮವನ್ನು ಘೋಷಿಸಲಾಯಿತು.

ಆರಂಭದಲ್ಲಿ ಆಗಾಗ ದಾಳಿಗಳು ಹಾಗೂ ಪ್ರತಿದಾಳಿಗಳಿಂದಾಗಿ ಸಮಸ್ಯೆಯಾದಂತೆ ಕಂಡರೂ ಕದನ ವಿರಾಮ ಮುಂದುವರಿಯುತ್ತಿರುವಂತೆ ತೋರುತ್ತಿದೆ. ಇಸ್ರೇಲ್‌ನ ಮಿಲಿಟರಿ ಸಾಮರ್ಥ್ಯದ ಬಗ್ಗೆ ಅನುಮಾನಗಳು ಹೆಚ್ಚುತ್ತಿರುವುದರಿಂದ ಸದಾ ಇಸ್ರೇಲಿ ಆಕ್ರಮಣಕ್ಕೆ ತುತ್ತಾಗುವ ಗಾಜಾದ ಹಮಾಸ್, ಲೆಬನಾನ್‌ನ ಹಿಜ್ಬುಲ್ಲಾ ಮತ್ತು ಯೆಮೆನ್‌ನ ಹೌತಿಗಳು ಹಾಗೂ ಸ್ವತಃ ಇರಾನ್, ಪ್ರತೀಕಾರದ ಕಾರ್ಯಾಚರಣೆಗಳಿಗೆ ಮುಂದಾದವು. ಇಸ್ರೇಲ್ ಕದನ ವಿರಾಮ ಉಲ್ಲಂಘನೆ ಮಾಡದಂತೆ ಖಾತರಿಪಡಿಸುವುದಕ್ಕೆ ಅವು ಸಂಕಲ್ಪಬದ್ಧವಾಗಿದ್ದವು.

ಏನಿದ್ದರೂ ಕದನ ವಿರಾಮಕ್ಕೆ ಯಾವುದೇ ಮೂಲಭೂತ ಆಧಾರ ಅಥವಾ ಷರತ್ತುಗಳು ಇಲ್ಲದಿರುವುದು ಅಥವಾ ಟ್ರಂಪ್ ಪ್ರಕಟಿಸಿದ ಇರಾನ್ ಮತ್ತು ಇಸ್ರೇಲ್ ನಡುವಿನ ಅಬ್ಬರದ ಪ್ರಚಾರದ ಕದನ ವಿರಾಮದ ಹೊರತಾಗಿಯೂ ಒಳಗಿಂದೊಳಗೇ ಉದ್ವಿಗ್ನತೆಯ ಕುದಿ ಹೊಗೆಯಾಡುತ್ತಲೇ ಇದೆ. ಹಾಗಾಗಿ ಈ ವಲಯವು ಅನಿಶ್ಚತೆಯ ತೂಗುಯ್ಯಾಲೆಯಲ್ಲಿ ತೂರಾಡುತ್ತಿದೆ.

ಜಗತ್ತನ್ನು ತಲ್ಲಣಿಸಿದ ಈ ವಿದ್ಯಮಾನಗಳು ನರೇಂದ್ರ ಮೋದಿಯನ್ನು ಒಬ್ಬ ದಯನೀಯ ವ್ಯಕ್ತಿಯನ್ನಾಗಿ ಬಿಂಬಿಸಿತು. ಸರ್ವವ್ಯಾಪಿಯಾದ ಈ ಸಂಘರ್ಷದಲ್ಲಿ ಭಾರತದ ನಿಲುವೇನು ಎಂದು ತಿಳಿಯುವುದೇ ಕಷ್ಟವಾಯಿತು. ಗಾಜಾದಲ್ಲಿ ಇಸ್ರೇಲ್ ನಡೆಸುವ ನರಮೇಧವನ್ನು ಭಾರತ ಸರ್ಕಾರ ಒಂದು ಸಲವೂ ಖಂಡಿಸಿಲ್ಲ. ಅಥವಾ ವಿಶ್ವ ಸಂಸ್ಥೆಯ ಸನದು ಮತ್ತು ಅಂತಾರಾಷ್ಟ್ರೀಯ ಕಾನೂನುಗಳನ್ನು ಅಮೆರಿಕ ಹಾಗೂ ಇಸ್ರೇಲ್ ನಗ್ನವಾಗಿ ಉಲ್ಲಂಘಿಸುತ್ತಿದ್ದರೂ ಅದರ ವಿರುದ್ಧ ಭಾರತ ಸರ್ಕಾರ ಚಕಾರ ಎತ್ತಿಲ್ಲ.

ಭಾರತದ ಐತಿಹಾಸಿಕ ಪರಂಪರೆಯನ್ನು ಗಮನಿಸಿದರೆ ಈ ಮೌನವು ವಿಶೇಷವಾಗಿ ದಯನೀಯವೆನಿಸುತ್ತದೆ. ಅಲಿಪ್ತ ಚಳವಳಿಯಲ್ಲಿ ಒಂದೊಮ್ಮೆ ಭಾರತ ಮುಂಚೂಣಿ ದನಿಯಾಗಿತ್ತು. ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ವಿರುದ್ಧ ಹೆಮ್ಮೆಯಿಂದ ಸೆಟೆದು ನಿಂತಿದ್ದ ಒಂದು ದೇಶವಾಗಿತ್ತು ಹಾಗೂ ವಿಶ್ವ ಸಂಸ್ಥೆಯ ಸನದನ್ನು ಎತ್ತಿಹಿಡಿಯಬೇಕೆಂದು ದೃಢವಾಗಿ ಪ್ರತಿಪಾದಿಸುತ್ತಿದ್ದ ದೇಶವೂ ಆಗಿತ್ತು. ಇಂಥ ರಾಷ್ಟ್ರವು ಭಾರತ ಮೋದಿ ಆಡಳಿತದಲ್ಲಿ ಸಂಪೂರ್ಣ ಮೌನಕ್ಕೆ ಶರಣಾಗಿ ಶಾಮೀಲಾಗಿದೆ. ಇರಾನ್ ಮೇಲಿನ ಖುಲ್ಲಂ ಖುಲ್ಲಾ ಆಕ್ರಮಣಗಳ ನಂತರವೂ ಮೋದಿ ಮಾಡಿದ ಕೆಲಸವೇನೆಂದರೆ ಇರಾನ್ ಅಧ್ಯಕ್ಷರಿಗೆ ಫೋನ್ ಕರೆ ಮಾಡಿ ಪರಿಸ್ಥಿತಿ ತಿಳಿಗೊಳಿಸಲು ಕ್ರಮಕೈಗೊಳ್ಳುವಂತೆ ಮನವಿ ಮಾಡಿದ್ದು. ಇದೊಂದು ಬರೀ ಬುರುಡೆ ಹಾಗೂ ಅಪಹಾಸ್ಯಕರ ಕ್ರಮವಾಗಿದೆ.

ಇಂಥ ಸನ್ನಿವೇಶದಲ್ಲಿ ನಮ್ಮ ಮುಂದಿರುವ ಕಾರ್ಯಭಾರ ಸ್ಪಷ್ಟವಾಗಿದೆ. ಶಾಂತಿ, ಪ್ರಜಾಪ್ರಭುತ್ವ ಮತ್ತು ಸೌಹಾರ್ದತೆಯ ಮೌಲ್ಯಗಳನ್ನು ಸದಾ ಎತ್ತಿ ಹಿಡಿಯುವ ಭಾರತೀಯ ಜನರನ್ನು ನಾವು ಅಣಿನೆರೆಯಿಸಬೇಕು. ಯುದ್ಧಕೋರರು ಮತ್ತು ಆಕ್ರಮಣಕೋರರ ಕ್ರಮಗಳು ಮುಳುಗಿಹೋಗುವ ರೀತಿಯಲ್ಲಿ ಶಾಂತಿ ಪಾರಿವಾಳಗಳ ಹಾರಾಟದ ಸದ್ದು ಅನುರಣಿಸಲಿ.

ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆ ಮೇಲಿನ ದಾಳಿಗಳನ್ನು ಪ್ರತಿರೋಧಿಸುವಲ್ಲಿ ಭಾರತೀಯ ಸಂವಿಧಾನ ನಮಗೆ ದಾರಿದೀಪವಾಗಿರುವಂತೆ ಜಗತ್ತಿನಾದ್ಯಂತ ಶಾಂತಿ ಮತ್ತು ಸೌಹಾರ್ದತೆಯನ್ನು ಮರುಸ್ಥಾಪಿಸಲು ವಿಶ್ವ ಸಂಸ್ಥೆಯ ಸನದು ದೊಡ್ಡ ಅಸ್ತ್ರವಾಗಲಿ.

ಅನು: ವಿಶ್ವ





ದೇವನಹಳ್ಳಿ: ಕಾರ್ಪೊರೇಟ್ ಶಕ್ತಿಗಳ ಕಣ್ಸನ್ನೆಯಂತೆ ಭೂ ಸ್ವಾಧೀನ ಸಿಡಿದು ನಿಂತ ರೈತ ಚಳುವಳಿ-ಕಂಪನ

ಇದು ಕೇವಲ ದೇವನಹಳ್ಳಿ ಭೂಮಿಯ ಪ್ರಶ್ನೆ ಅಲ್ಲ. ಕೃಷಿ ಭೂಮಿ ರೈತರ ಕೈಯಲ್ಲಿ ಉಳಿಯಬೇಕೋ ಅಥವಾ ರಿಯಲ್ ಎಸ್ಟೇಟ್ ದಂಧೆಕೋರರು, ಕಾರ್ಪೋರೇಟ್ ಬಂಡವಾಳಿಗರ ಕೈಗೆ ದಕ್ಕಬೇಕೋ ಎಂಬ ನೀತಿಯ ಪ್ರಶ್ನೆ. ಭೂಮಿಯ ಮಾಲಿಕರಾದ ರೈತರ ಒಪ್ಪಿಗೆಯಿಲ್ಲದೆ ಅವರನ್ನು ಒಕ್ಕಲೆಬ್ಬಿಸಿ ಓಡಿಸುವ ದುಷ್ಟ ಭೂಸ್ವಾಧೀನ ನೀತಿಯ ವಿರುದ್ಧದ ದೇವನಹಳ್ಳಿ ಹೋರಾಟ ಈ ದೃಷ್ಟಿಯಿಂದ ಬಹಳ ಮಹತ್ವದ್ದು. ಪೊಲೀಸ್ ದಬ್ಬಾಳಿಕೆಗೆ ಜಗ್ಗದೆ ಸರ್ಕಾರದ ಭಂಡತನದ ವಿರುದ್ಧ ಕೆಚ್ಚೆದೆಯಿಂದ ನಡೆಸಲಾಗುತ್ತಿರುವ ಹೋರಾಟದ ಕುರಿತು ಒಂದು ವರದಿ.

ಆರ್. ರಾಮಕೃಷ್ಣ

ಸುಮಾರು ನಾಲ್ಕೈದು ದಶಕಗಳ ಹಿಂದೆ 'ನಂಜನಗೂಡಿನ ರಸಬಾಳೆ', 'ದೇವನಹಳ್ಳಿಯ ಚಕ್ಕೋತ' ಮುಂತಾದ ಪದಗಳೆಲ್ಲಾ ಬಾಯಲ್ಲಿ ನೀರೂರಿಸುವ ರಸಭರಿತ ಹಣ್ಣುಗಳನ್ನು ನೆನಪಿಸುತ್ತಿದ್ದವು. ಅವನ್ನು ಬೆಳೆಯುವ ಫಲವತ್ತಾದ ಮಣ್ಣಿನ ತೋಟಗಳನ್ನು ಹಳ್ಳಿಗಳನ್ನು ಮನಸ್ಸಿಗೆ ತರುತ್ತಿದ್ದವು. ಅವು ಸುಂದರ ಶಿಶುಗೀತೆಗಳ ಸಾಲುಗಳಾಗಿದ್ದವು. ಗಿಡ-ಮರ-ಬಳ್ಳಿಗಳನ್ನು ನೆನಪಿಸುತ್ತಿದ್ದ 'ನಂಜನಗೂಡು' ಎಂದರೆ ಈಗ ಬೆಳೆದು, ಮತ್ತೂ ಬೆಳೆದು ಹಬ್ಬುತ್ತಿರುವ 'ಕೈಗಾರಿಕಾ ಪ್ರದೇಶ'ದ ಸಂಕೇತವಾಗಿದೆ. 'ದೇವನಹಳ್ಳಿ'ಯು ಹಾರುವ ಲೋಹದ ಹಕ್ಕಿಗಳು, ಅಂತರರಾಷ್ಟ್ರಿಯ ವಿಮಾನ ನಿಲ್ದಾಣವನ್ನು ನೆನಪಿಗೆ ತರುತ್ತದೆ.

ಸಮಾಜದ ಪ್ರಗತಿಗೆ ಕೈಗಾರಿಕೆಗಳು, ವಿಮಾನ ನಿಲ್ದಾಣಗಳು ಅಗತ್ಯವಾಗಿ ಬೇಕು. ಆದರೆ, ರೈತರಿಂದ ಫಲವತ್ತಾದ ಕೃಷಿ ಜಮೀನನ್ನು ಬಲವಂತದಿಂದ ಕಿತ್ತುಕೊಂಡೇ ಕೈಗಾರಿಕೆ-ವಿಮಾನ ನಿಲ್ದಾಣಗಳನ್ನು ನಿರ್ಮಿಸಬೇಕೇ ಎಂಬುದು ಈಗ ಮತ್ತೊಮ್ಮೆ ಪ್ರಬಲವಾಗಿ ಎದ್ದು ಬಂದಿರುವ ಪ್ರಶ್ನೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೇವನಹಳ್ಳಿ ತಾಲ್ಲೂಕಿನ, ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1,777 ಎಕರೆ ಫಲವತ್ತಾದ ಕೃಷಿ ಭೂಮಿಯನ್ನು, ಕೈಗಾರಿಕಾ ಉದ್ದೇಶದ ಹೆಸರಿನಲ್ಲಿ ಬಲಾತ್ಕಾರದಿಂದ ರಾಜ್ಯ ಸರಕಾರ ಸ್ವಾಧೀನಕ್ಕೆ ತೆಗೆದುಕೊಳ್ಳಲು ಹೊರಟಿದೆ. ಸುಮಾರು 3 ವರ್ಷಗಳಿಗೂ ಅಧಿಕ ಕಾಲದಿಂದ ಚಳುವಳಿ ನಡೆಸುತ್ತಿರುವ ರೈತರ ಒತ್ತಾಯವನ್ನು ಧಿಕ್ಕರಿಸಿ ಸರಕಾರ ಇತ್ತೀಚೆಗೆ ಅಂತಿಮ ಅಧಿಸೂಚನೆಯನ್ನೂ ಹೊರಡಿಸಿತು. ಹೀಗಾಗಿ ಜೂನ್ 25, 2025 ಹೋರಾಟದ 1180ನೇ ದಿನ 'ದೇವನಹಳ್ಳಿ ಚಲೋ' ಹೋರಾಟವನ್ನು ಚನ್ನರಾಯಪಟ್ಟಣ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿ ಹಾಗೂ ಸಂಯುಕ್ತ ಹೋರಾಟ ಸಮಿತಿಯ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು.

'ಪ್ರಾಣ ಕೊಟ್ಟೇವು ಭೂಮಿ ಕೊಡುವುದಿಲ್ಲ'

ಬಹಿರಂಗ ಸಭೆ ನಡೆಯುವಲ್ಲಿ, ಸುತ್ತ ಮುತ್ತ ಎಲ್ಲೆಲ್ಲೂ ಪೋಲಿಸರ ಸರ್ಪಗಾವಲು. ಮಾಮೂಲಿ ಪೋಲಿಸರಲ್ಲದೇ, ಮೀಸಲು ಪೋಲಿಸರು!! ವಾಟರ್ ಜೆಟ್, ಪ್ರಹಾರ ದಳಗಳ ದೊಡ್ಡ ಬಳಗ. ಲಾಠಿ, ಬೂಟುಗಳ ಖದರು. ಆದರೆ ಈ ಹೋರಾಟಗಾರರು ಬೆದರುವವರಲ್ಲ. 'ಪ್ರಾಣ ಕೊಟ್ಟೇವು ಭೂಮಿ ಕೊಡುವುದಿಲ್ಲ' ಎಂಬ ಘೋಷಣೆ ಅವರೆದುರೇ ಮೊಳಗಿದವು. 13 ಹಳ್ಳಿಗಳಿಂದ ಅಲ್ಲಿನ ಮಣ್ಣನ್ನು ಹೊತ್ತು ತಂದ ರೈತ ಮಹಿಳೆಯರು, ಆ ಮಣ್ಣನ್ನು ವೇದಿಕೆಯಲ್ಲಿನ ಕುಂಡಕ್ಕೆ ಸುರಿದು, ಸಸಿ ನೆಟ್ಟು ಪ್ರತಿಭಟನೆಯ ಬಾವುಟವನ್ನು ಎತ್ತಿ ಹಿಡಿದರು. ಸಂತೆ ಮೈದಾನದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ನಿಜದ ಹೊಲದ ಒಡೆಯರಾದ ರೈತರು ಸರಕಾರಕ್ಕೆ ಅಂತಿಮ ಎಚ್ಚರಿಕೆಯ ನೋಟಿಸ್ ಕೊಟ್ಟರು. ಸರಕಾರದ ಅಕ್ರಮ ನೋಟಿಸ್ ಪ್ರತಿಗಳನ್ನು ಬಹಿರಂಗವಾಗಿ ಹರಿದು ಬಿಸುಟರು. ಸಂತ್ರಸ್ತ ರೈತ ಬಂಧುಗಳ ಹೋರಾಟಕ್ಕೆ ಬೆನ್ನೆಲುಬಾಗಿ, ಬೆಂಗಾವಲಾಗಿ ಸುತ್ತ ಮುತ್ತಲ ಜಿಲ್ಲೆಗಳಿಂದ, ಬಳ್ಳಾರಿ, ವಿಜಯನಗರ, ಶಿವಮೊಗ್ಗ ಮುಂತಾದ ರಾಜ್ಯದ ನಾನಾ ಭೂ ಹೋರಾಟಗಳ ಅಂಗಳದಿಂದ ಹೋರಾಟಗಾರರು, ಬೆಂಬಲಿಗರು ಬಂದರು. ಸಂಯುಕ್ತ ಹೋರಾಟ ಸಮಿತಿಯ ಭಾಗವಾಗಿ ಮಹಿಳೆಯರು, ಕಾರ್ಮಿಕರು-ರೈತರು, ಕೃಷಿ ಕೂಲಿಕಾರರು, ವಿದ್ಯಾರ್ಥಿ-ಯುವಜನರು, ಸಾಹಿತಿಗಳು-ಕಲಾವಿದರು ಎಲ್ಲರೂ ಅಲ್ಲಿ ಕಲೆತರು. ದೇವನಹಳ್ಳಿಯ ವಕೀಲರು ಕೋರ್ಟ್ ಕಲಾಪ ಬಹಿಷ್ಕರಿಸಿ ರೈತರ ಜೊತೆಗೆ ನಿಂತರು.

ಒಡೆದು ಆಳುವ ನೀತಿ

ಸರಕಾರದ್ದು ಒಡೆದು ಆಳುವ ನೀತಿ. ಹೋರಾಟ ಹತ್ತಿರ ಬಂದಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲರು 13 ಹಳ್ಳಿಗಳ ಪೈಕಿ 3 ಹಳ್ಳಿಗಳ ಸುಮಾರು 500 ಎಕರೆ ಭೂಮಿಯನ್ನು ಭೂ ಸ್ವಾಧೀನದಿಂದ ಕೈಬಿಡುವುದಾಗಿ ಹೇಳಿ, ಹೋರಾಟವನ್ನು ಕೈಬಿಡಲು ರೈತರಿಗೆ ಸೂಚಿಸಿದರು. ರೈತರೋ, '3 ಎಕರೆ ಭೂಮಿಯನ್ನೂ ಸ್ವಾಧೀನ ಮಾಡಿಕೊಳ್ಳಲು ಬಿಡೆವು' ಎಂದು ಒಗ್ಗಟ್ಟು ಮುರಿಯುವ ಸರಕಾರದ ತಂತ್ರಕ್ಕೆ ತಿರುಗೇಟು ಕೊಟ್ಟರು. ಹೋರಾಟಗಾರರು ಸಂಜೆ 5 ರವರೆಗೆ ಗಡುವು ಕೊಟ್ಟರು. ಏನೇನೋ ಸುದ್ದಿಗಳು ಹರಿದಾಡಿದವು. ಮುಖ್ಯಮಂತ್ರಿ ದೆಹಲಿಯಿಂದ ಬರುತ್ತಾ, ಹೋರಾಟದ ಸ್ಥಳಕ್ಕೆ ಬರುತ್ತಾರೆ, ಇಲ್ಲ ಹೋರಾಟಗಾರರನ್ನೆ ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಕರೆಸಿಕೊಳ್ಳುತ್ತಾರೆ... ಹೀಗೆ ಇನ್ನಷ್ಟು. ಯಾವುದೂ ನಿಜವಾಗಲಿಲ್ಲ.

ಏಕಾಏಕಿ ವೇದಿಕೆಗೆ ನುಗ್ಗಿದ ಪೋಲಿಸರು

ಆದರೆ ಸಾರ್ವಜನಿಕರಿಗೆ 'ತೊಂದರೆ ಯಾಗುತ್ತಿರುವುದರಿಂದ' ಪ್ರತಿಭಟನೆಯನ್ನು ಮುಗಿಸಬೇಕೆಂಬ ಆದೇಶ ಪೋಲಿಸರಿಂದ ಬಂತು. ಚಳುವಳಿಕಾರರದ್ದು, 'ನಾವು ಯಾರಿಗೂ ತೊಂದರೆ ಮಾಡುತ್ತಿಲ್ಲ. ಶಾಂತಿಯುತ ಹೋರಾಟ ಬಿಡುವುದಿಲ್ಲ' ಎಂಬ ಪಟ್ಟು, ರಾತ್ರಿ-ಹಗಲು ಇಲ್ಲೇ ಮಲಗುತ್ತೇವೆ. ಜೈಲಿಗೆ ಹಾಕುವುದಾದರೆ ಹಾಕಿ, ಜೈಲಿಗೆ ಹೋಗುತ್ತೇವೆ ಎಂಬ ದಿಟ್ಟತನ. ಸಂಜೆ 6 ರ ಸುಮಾರಿಗೆ ಏಕಾಏಕಿ ವೇದಿಕೆಗೆ ನುಗ್ಗಿದ ಪೋಲಿಸರು ಶಾಂತಿಯುತವಾಗಿ ಪ್ರತಿಭಟನಾ ಸಭೆ ನಡೆಸುತ್ತಿದ್ದ ಮುಖಂಡರು-ರೈತರು- ಹೋರಾಟದ ಕಾರ್ಯಕರ್ತರನ್ನು ಹೊತ್ತೊಯ್ದು ಪೋಲೀಸರ ಬಸ್ಸು, ವ್ಯಾನುಗಳಿಗೆ ತುಂಬಿದರು. ಹೆಗಡೆ ನಗರದ ಪೋಲಿಸ್ ಠಾಣೆಯಲ್ಲಿಟ್ಟು ಕೊನೆಗೆ ನಡುರಾತ್ರಿ ಬಿಡುಗಡೆ ಮಾಡಿದರು.

ಕಾನೂನು ಉಲ್ಲಂಘಿಸುತ್ತಿರುವವರು ಯಾರು?

ವಾಸ್ತವಿಕವಾಗಿ ಕಾನೂನು ಉಲ್ಲಂಘಿಸುತ್ತಿರುವುದು ಸರಕಾರ. ಭೂ ಸ್ವಾದೀನ ಕಾಯ್ದೆ 2013ರ ಪ್ರಕಾರ ಸರಕಾರ ಭೂಮಿಯನ್ನು ವಶಕ್ಕೆ ಪಡೆಯಬೇಕಾದರೆ ಕನಿಷ್ಟ ಶೇ. 80ರಷ್ಟು ರೈತರ ಲಿಖಿತ ಒಪ್ಪಿಗೆ ಬೇಕು. ಚನ್ನರಾಯಪಟ್ಟಣದ ರೈತರಲ್ಲಿ ಪುಟ 14 ಕ್ಕೆ

ಬಂಧಿಸಿದರೆ ಬೆದರುವರೇ? ಇವರುಗಳು!!

ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಹೋರಾಟಗಾರರನ್ನು ಬಂಧಿಸಲು ಯಾವ ಕಾರಣವೂ ಸರಕಾರ ಇರಲಿಲ್ಲ. ಹೋರಾಟಕ್ಕೆ ಸಿಕ್ಕ ವ್ಯಾಪಕ ಬೆಂಬಲ ಸರಕಾರವನ್ನು ಕಂಗೆಡಿಸಿರಬಹುದು. ನೋಡಿ ಬಂಧಿತರಾದವರು ಯಾರು ಯಾರು? ಸಿ.ಐ.ಟಿ.ಯು. ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಮೀನಾಕ್ಷಿ ಸುಂದರಂ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷ ಯು.ಬಸವರಾಜ, ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ, ಉಪಾಧ್ಯಕ್ಷರಾದ ಎಚ್.ಆರ್. ನವೀನ್ ಕುಮಾರ್, ಚಂದ್ರ ತೇಜಸ್ವಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ, ಗೌರಮ್ಮ, ಕೆ.ಎಸ್.ಲಕ್ಷ್ಮಿ, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಹೆಚ್.ಆರ್.ಬಸವರಾಜಪ್ಪ, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಕರ್ನಾಟಕ ಜನಶಕ್ತಿ ಸಂಘಟನೆಯ ರಾಜ್ಯಾಧ್ಯಕ್ಷ ನೂರ್ ಶ್ರೀಧರ್, ಪ್ರಧಾನ ಕಾರ್ಯದರ್ಶಿ ಮಲ್ಲಿಗೆ ಸಿರಿಮನೆ ಸೇರಿದಂತೆ ಸುಮಾರು ನೂರೈವತ್ತುಕ್ಕೂ ಹೆಚ್ಚು ಜನರನ್ನು ಬಂಧನಕ್ಕೆ ಗುರಿ ಮಾಡಲಾಯಿತು. ಬಂಧಿತರಲ್ಲಿ ಚನ್ನರಾಯಪಟ್ಟಣ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿಯ ಮುಖಂಡರಾದ ನಂಜಪ್ಪ, ಸಂತಸ್ತ ರೈತರುಗಳಾದ ಗೋಪಾಲಪ್ಪ, ಲಕ್ಷ್ಮಮ್ಮ ಮುಕುಂದ್, ರಮೇಶ್, ವೆಂಕಟಮ್ಮ, ಕಾರಹಳ್ಳಿ ಶ್ರೀನಿವಾಸ್ ಇವರು ಕೆಲವರು.

ಇಷ್ಟೆಲ್ಲಾ ಹೋರಾಟದ ನಂತರವೂ ರಾಜ್ಯ ಸರ್ಕಾರ ತನ್ನ ಕಾರ್ಪೊರೇಟ್ ಭೂ ಕಬಳಿಕೆಯನ್ನು ಸಮರ್ಥಿಸಿಕೊಳ್ಳುತ್ತಿದೆ. ಅನ್ಯಾಯದ ಹಾಗೂ ಬಲವಂತದ ಭೂ ಸ್ವಾಧೀನವನ್ನು ರದ್ದುಪಡಿಸಲು ನಿರಾಕರಿಸುತ್ತಿದೆ. ಈಗ ಇದು ರಾಜ್ಯದ ಪ್ರಮುಖ ರಾಜಕೀಯ ವಿಷಯವಾಗಿ ಪರಿವರ್ತನೆ ಆಗಿದ್ದು, ಕಾರ್ಪೊರೇಟ್ ಭೂ ಕಬಳಿಕೆ ವಿರುದ್ಧ ಪ್ರಬಲ ಜನಾಭಿಪ್ರಾಯ ಬಲಗೊಳ್ಳುತ್ತಿದೆ. ಮುಖ್ಯಮಂತ್ರಿಗಳು ಕರೆದಿರುವ ಜುಲೈ 4 ರ ಸಭೆಯ ದಿನ ಹೆಚ್ಚಿನ ರೈತರು-ಕೂಲಿಕಾರರು, ಕಾರ್ಮಿಕರು, ದಲಿತರು, ಮಹಿಳೆಯರು, ವಿದ್ಯಾರ್ಥಿ-ಯುವಜನರು, ಇತರ ದುಡಿಯುವ ಜನರು ಹೆಚ್ಚಿನ ಸಂಖ್ಯೆಯಲ್ಲಿ ಫ್ರೀಡಂ ಪಾರ್ಕ್ ಧರಣಿಯಲ್ಲಿ ಪಾಲ್ಗೊಳ್ಳುವಂತೆ 'ಸಂಯುಕ್ತ ಹೋರಾಟ-ಕರ್ನಾಟಕ' ಕರೆ ನೀಡಿದೆ.



ರಾಜ್ಯ ರೈತ ಸಂಘದ ಚುಕ್ಕಿ ನಂಜುಂಡಸ್ವಾಮಿ, ಗುರುಪ್ರಸಾದ್ ಕೆರಗೋಡು, ಸುನಂದ ಜಯರಾಮ್, ಅನಸೂಯ, ಮುನಿಯಪ್ಪ, ಎಎಪಿ ಪಕ್ಷದ ರಾಜ್ಯಾಧ್ಯಕ್ಷರಾದ ಮುಖ್ಯಮಂತ್ರಿ ಚಂದ್ರು, ಮಹಿಮಾ ಪಾಟೀಲ್, ಇಂದಿರಾ ಕೃಷ್ಣಪ್ಪ, ಪ್ರೊ. ಎಸ್.ಜಿ.ಸಿದ್ಧರಾಮಯ್ಯ, ಶಿವಸುಂದರ್, ಆದಿ ಚುಂಚನಗಿರಿ ಮಠ ಚಿಕ್ಕಬಳ್ಳಾಪುರ ಶಾಖೆಯ ಮಂಗಳನಾಥ ಸ್ವಾಮೀಜಿ, ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಕೆ.ಪ್ರಕಾಶ್, ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಎನ್. ಉಮೇಶ್, ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ಪುಟ್ಟಮಾದು, ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ, ಜಾಣಗೆರೆ ವೆಂಕಟರಾಮಯ್ಯ ಕನ್ನಡ, ದಲಿತ, ಪರಿಸರ ಚಳುವಳಿಯ ಹಲವು ಹಿರಿಯ ನಾಯಕರು ಇದ್ದು ಹೋರಾಟಕ್ಕೆ ಸಕ್ರಿಯ ಬೆಂಬಲ ನೀಡಿದರು. ಗೌರಿ ಮಿಡಿಯಾದವರು ಈ ಹೋರಾಟದ ಸಂಬಂಧ ತಂದಿರುವ ಪುಸ್ತಕವನ್ನೂ ಇದೇ ಹೋರಾಟದ ವೇದಿಕೆಯಲ್ಲಿ ಬಿಡುಗಡೆ ಮಾಡಲಾಯಿತು.

ಜುಲೈ 9 ರಂದು ನಡೆಯುವ ಸಾರ್ವತ್ರಿಕ ಮುಷ್ಕರಕ್ಕೆ ಸಿಪಿಐ(ಎಂ) ಬೆಂಬಲ

ಬಿಜೆಪಿ ಸರ್ಕಾರದ ಹನ್ನೊಂದು ವರ್ಷಗಳಲ್ಲಿ ಕಾರ್ಮಿಕ ವರ್ಗವು ಸಂಪೂರ್ಣ ಆತಂಕದೆಡೆಗೆ

ಎಂ.ಎ. ಬೇಬಿ

ಜೂನ್ 19, 2025 ರಂದು ಡಿಡಿ ನ್ಯೂಸ್‌ನ ಶೀರ್ಷಿಕೆ ಹೀಗಿತ್ತು: ಪ್ರಧಾನಿ ಮೋದಿಯವರ 11 ವರ್ಷಗಳ ಆಡಳಿತದ ಕಾರ್ಯಪಡೆ–ಕೇಂದ್ರಿಕೃತ ಸುಧಾರಣೆಗಳನ್ನು ಎತ್ತಿ ತೋರಿಸಿದ್ದಾರೆ. ಉದ್ಯೋಗಗಳು ಮತ್ತು ಸಾಮಾಜಿಕ ರಕ್ಷಣೆಯಲ್ಲಿ ಐತಿಹಾಸಿಕ ಅಭಿವೃದ್ಧಿ ಮತ್ತು ಲಾಭಗಳ ಸಾಧನೆಗಳನ್ನು ಉಲ್ಲೇಖಿಸಲಾಗಿದೆ.

ಕೇಂದ್ರ ಸರ್ಕಾರವು "ಕಾರ್ಮಿಕರ ಕಲ್ಯಾಣ ಮತ್ತು ಸಬಲೀಕರಣ"ಕ್ಕೆ ಬದ್ಧವಾಗಿದೆ ಮತ್ತು "ಕಳೆದ 11 ವರ್ಷಗಳಲ್ಲಿ ಭಾರತದ ಕಾರ್ಯಪಡೆಯ ನೀತಿ ಯೋಜನೆಯ ಪ್ರಗತಿಯು, ಜನರ ಹೃದಯ ಭಾಗದಲ್ಲಿ ಉಳಿದಿದೆ" ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದನ್ನು ವರದಿ ಮಾಡಲಾಗಿದೆ.

ಮೋದಿ ಸರ್ಕಾರದ 11 ವರ್ಷಗಳ ಸಾಧನೆಗಳ ಕುರಿತಂತೆ, ಎಷ್ಟೇ ಹೇಳಿಕೊಂಡರು ಸಹ, ವಾಸ್ತವ ಪರಿಸ್ಥಿತಿಯಿಂದ ದೂರವಿರಲು ಸಾಧ್ಯವಿಲ್ಲ. ಸರ್ಕಾರವು ಅವುಗಳನ್ನು ಪರಿಗಣಿಸಲು ಮಾಡಿಕೊಂಡಿರುವ ಆಯ್ಕೆಗಳು, ಅದರ ವಾಸ್ತವಗಳು ತಾವಾಗಿಯೇ ಮಾತನಾಡುತ್ತವೆ. ಕೇಂದ್ರದ ಮೋದಿ ಸರ್ಕಾರದ ಅಡಿಯಲ್ಲಿ ಯಾರಾದರೂ ನಿಜವಾಗಿಯೂ 'ನೀತಿಯ ಹೃದಯಭಾಗದಲ್ಲಿ' ಉಳಿದಿದ್ದರೆ, ಅದು ದೊಡ್ಡ ಕಾರ್ಪೊರೇಟ್ ಸಂಸ್ಥೆಗಳು ಮಾತ್ರವೇ ಉಳಿದಿರುತ್ತದೆ ಎನ್ನಬಹುದು.


ಸರ್ಕಾರವು ದುಡಿಯುವ ಜನರ ಬಗ್ಗೆ ನಿಜವಾಗಿಯೂ ಕಾಳಜಿ ವಹಿಸಿದ್ದರೆ, ಭಾರತವು ಆರೋಗ್ಯ ಮತ್ತು ಶಿಕ್ಷಣ ಸೂಚಕಗಳಲ್ಲಿ ಜಾಗತಿಕ ಪಟ್ಟಿಯಲ್ಲಿ ಮುಂಚೂಣಿಯಲ್ಲಿರುತ್ತಿತ್ತು. ಆದರೆ ಇದು ವಾಸ್ತವದಿಂದ ದೂರವಿದೆ ಎನ್ನುವುದನ್ನು ಅಂಕಿಅಂಶಗಳು ಹೇಳುತ್ತವೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಪ್ರಕಾರ, ಐದು ವರ್ಷದೊಳಗಿನ ಶೇ.36 ರಷ್ಟು ಮಕ್ಕಳು, (ಅವರ ವಯಸ್ಸಿನ ಕೆಳಗಿನವರಿಗಿಂತ) ಸಾಧಾರಣ ಬೆಳವಣಿಗೆಗಿಂತ ಕುಂಠಿತಗೊಂಡಿದ್ದಾರೆ. ಇದು ದೀರ್ಘಕಾಲದ ಅಪೌಷ್ಟಿಕತೆಯ ಸ್ಪಷ್ಟ ಸೂಚನೆಯಾಗಿದೆ. ಹೆಚ್ಚುವರಿಯಾಗಿ, ಈ ವಯಸ್ಸಿನ ಶೇ.32 ರಷ್ಟು ಮಕ್ಕಳು ಕಡಿಮೆ ತೂಕ ಹೊಂದಿದ್ದಾರೆ. 15 ರಿಂದ 49 ವರ್ಷ ವಯಸ್ಸಿನ ಮಹಿಳೆಯರಲ್ಲಿ ರಕ್ತಹೀನತೆ 2015–16ರಲ್ಲಿ ಶೇ.53 ರಿಂದ 2019–20ರಲ್ಲಿ ಶೇ.57.2ಕ್ಕೆ ಏರಿದೆ. ಅದೇ ವಯಸ್ಸಿನ ಗರ್ಭಿಣಿ ಮಹಿಳೆಯರಲ್ಲಿ, ರಕ್ತಹೀನತೆಯ ಹರಡುವಿಕೆಯು ಶೇ.50.4 ರಿಂದ ಶೇ.52.2 ಕ್ಕೆ ಏರಿದೆ. ಈ ವಾಸ್ತವ ದತ್ತಾಂಶಗಳು ಪ್ರಧಾನಿಯವರ ಆರೋಗ್ಯ ಸಂರಕ್ಷಣೆಯ ಪ್ರಚಾರಕ್ಕೆ ವ್ಯತಿರಿಕ್ತವಾಗಿದೆ.

ಈ ಅಂಕಿಅಂಶಗಳು ವ್ಯಾಪಕ ಬಡತನವನ್ನು ಸೂಚಿಸುತ್ತವೆ. ಇದು ಅಪೌಷ್ಟಿಕತೆ ಮತ್ತು ರಕ್ತಹೀನತೆಗೆ ಮೂಲ ಕಾರಣವಾಗಿದೆ. ಸರ್ಕಾರದ ಅಧಿಕಾರಾವಧಿಯಲ್ಲಿ ಬಡತನ ತೀವ್ರವಾಗಿ ಕಡಿಮೆಯಾಗಿದೆ ಎಂಬ ಹೇಳಿಕೆಗೆ ವಿರುದ್ಧವಾಗಿ, ಪುಲಾಪ್ರೆ ಬಾಲಕೃಷ್ಣನ್ ಮತ್ತು ಅಮನ್ ರಾಜ್ ಅವರ ಅಧ್ಯಯನವು ಸಂಪೂರ್ಣವಾಗಿ ವಿಭಿನ್ನವಾದ ಚಿತ್ರಣವನ್ನು ಚಿತ್ರಿಸುತ್ತದೆ. 2023–24 ರಲ್ಲಿ, ಗ್ರಾಮೀಣ ಜನಸಂಖ್ಯೆಯ ಶೇ.40 ರಷ್ಟು ಜನರು ದಿನಕ್ಕೆ ಎರಡು ಸಸ್ಯಾಹಾರಿ ಊಟವನ್ನು ಖರೀದಿಸಲು ಸಾಧ್ಯವಾಗಿರಲಿಲ್ಲ, ಆದರೆ ಶೇ.95 ರಷ್ಟು ಜನರು ಎರಡು ಮಾಂಸಾಹಾರಿ ಊಟವನ್ನು ಖರೀದಿಸಲು ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಜನಸಂಖ್ಯೆಯ ಶೇ.80 ರಷ್ಟು ಜನರು ದಿನಕ್ಕೆ ಒಂದು ಸಸ್ಯಾಹಾರಿ ಮತ್ತು ಒಂದು ಮಾಂಸಾಹಾರಿ ಊಟವನ್ನು ಮಾಡಲು ಅಸಮರ್ಥರಾಗಿದ್ದರು ಎಂದು ಅಧ್ಯಯನವು ಬಹಿರಂಗಪಡಿಸುತ್ತದೆ. ಅಂದರೆ, ಒಂದು ಊಟದ ಬೆಲೆ ಕೇವಲ ರೂ.88 ಮಾತ್ರವಿದ್ದರು ಸಾಧ್ಯವಾಗಿಲ್ಲ.

ಇದೇ ಅವಧಿಯಲ್ಲಿ ನಗರ ಭಾರತದಲ್ಲಿ, ಶೇ.10 ರಷ್ಟು ಜನರು ದಿನಕ್ಕೆ ಎರಡು ಸಸ್ಯಾಹಾರಿ ಊಟವನ್ನು ಪಡೆಯಲು ಸಾಧ್ಯವಾಗಲಿಲ್ಲ, ಶೇ.80 ರಷ್ಟು ಜನರು ಎರಡು ಮಾಂಸಾಹಾರಿ ಊಟವನ್ನು ಪಡೆಯಲು ಸಾಧ್ಯವಾಗಲಿಲ್ಲ ಮತ್ತು ಶೇ.50 ರಷ್ಟು ಜನರು ಮಿಶ್ರ ಊಟವನ್ನು ಸಂಯೋಜನೆಯನ್ನು ಪಡೆಯಲು ಸಾಧ್ಯವಾಗಲಿಲ್ಲ. ಈ ಅಂಕಿಅಂಶಗಳು ದೇಶದಲ್ಲಿ ಬಡತನದ ಆಳ ಮತ್ತು ನಿರಂತರತೆಯನ್ನು ಸ್ಪಷ್ಟವಾಗಿ ಬಹಿರಂಗಪಡಿಸುತ್ತವೆ.

ಇದಕ್ಕೆ ವ್ಯತಿರಿಕ್ತವಾಗಿ, ಭಾರತದ ಕಾರ್ಪೊರೇಟ್ ಗಣ್ಯರ ಸಂಪತ್ತು ನಿರಂತರವಾಗಿ ಏರುತ್ತಲೇ ಇದೆ. 2014 ರಲ್ಲಿ 100 ರಷ್ಟಿದ್ದ ಶತಕೋಟ್ಯಾಧಿಪತಿಗಳ ಸಂಖ್ಯೆ 2024 ರಲ್ಲಿ 200 ಕ್ಕೆ ದ್ವಿಗುಣಗೊಂಡಿದೆ.



ಅಗ್ರ 100 ಶತಕೋಟ್ಯಾಧಿಪತಿಗಳ ಒಟ್ಟು ಸಂಪತ್ತು ಮೊದಲ ಬಾರಿಗೆ ಒಂದು ಟ್ರಿಲಿಯನ್ ಡಾಲರ್‌ಗಳನ್ನು ಮೀರಿದೆ. ಕಾರ್ಪೊರೇಟ್ ಕುಳಗಳ ದೈತ್ಯ ಸಂಪತ್ತಿನ ಕ್ರೋಡಿಕರಣವೇ ಮೋದಿ ಸರ್ಕಾರದ ಅಧಿಕಾರಾವಧಿಯ ನಿರ್ಣಾಯಕ ಲಕ್ಷಣವಾಗಿದೆ ಎಂಬುದು ಇದರಿಂದ ಮನದಟ್ಟಾಗುತ್ತದೆ.

ವಿಶ್ವ ಅಸಮಾನತೆ ವರದಿಯ ಪ್ರಕಾರ, 2022–23ರ ಹೊತ್ತಿಗೆ, ಜನಸಂಖ್ಯೆಯ ಮೇಲಿನ 1 ಪ್ರತಿಶತ ಜನರು ಒಟ್ಟು ಆದಾಯದ ಶೇ.22.6 ಮಾತ್ರ ಹೊಂದಿದ್ದರು ಮತ್ತು ದೇಶದ ಸಂಪತ್ತಿನ ಶೇ.40.1 ರಷ್ಟು ಹೊಂದಿದ್ದರು. ಆದರೆ ಕೆಳಗಿನ ಶೇ.50 ರಷ್ಟು ಜನರು ಕೇವಲ ಶೇ.3 ರಷ್ಟು ಹೊಂದಿದ್ದರು.

ಈ ಹೆಚ್ಚುತ್ತಿರುವ ಅಸಮಾನತೆಯು ಸರ್ಕಾರಿ ನೀತಿಗಳ ನೇರ ಪರಿಣಾಮವಾಗಿದೆ. ತೆರಿಗೆ ಹೊರೆ ವ್ಯವಸ್ಥಿತವಾಗಿ ನಿಗಮಗಳಿಂದ ಸಾಮಾನ್ಯ ನಾಗರಿಕರಿಗೆ ಬದಲಾಗಿದೆ. ಒಟ್ಟು ತೆರಿಗೆ ಆದಾಯದಲ್ಲಿ ಕಾರ್ಪೊರೇಟ್ ತೆರಿಗೆಯ ಪಾಲು 2014–15 ರಲ್ಲಿ ಶೇ.34.5 ರಿಂದ 2024–25 ರಲ್ಲಿ ಶೇ.27.2ಕ್ಕೆ ಇಳಿದಿದೆ ಎಂದು ಬಜೆಟ್ ಅಂದಾಜುಗಳು ತೋರಿಸುತ್ತವೆ. 2019 ರಲ್ಲಿ, ಸರ್ಕಾರವು ಕಾರ್ಪೊರೇಟ್ ತೆರಿಗೆ ದರಗಳನ್ನು ಶೇ.30 ರಿಂದ ಶೇ.22ಕ್ಕೆ ಇಳಿಸಿತು. ಆದರೆ ಪರಿಣಾಮಕಾರಿಯಾದ ದೊಡ್ಡ ಕಾರ್ಪೊರೇಟ್ ಇಂಡಸ್ಟ್ರಿಗಳ ತೆರಿಗೆ ದರಗಳು ಮತ್ತಷ್ಟು ಕಡಿಮೆಯಾಗಿದೆ. ಉದಾಹರಣೆಗೆ, ರಿಲಯನ್ಸ್ ಇಂಡಸ್ಟ್ರೀಸ್ 2021–22 ರಲ್ಲಿ ಶೇ.16.5 ರಷ್ಟು ಪರಿಣಾಮಕಾರಿ ತೆರಿಗೆ ದರವನ್ನು ಪಾವತಿಸಿದರೆ, ಅಲ್ಟ್ರಾಟೆಕ್ ಸಿಮೆಂಟ್ ಕೇವಲ ಶೇ.14.8 ರಷ್ಟು ಪಾವತಿಸಿತು.

ನಿಗಮಗಳು ಸೂಪರ್–ಲಾಭಗಳನ್ನು ಗಳಿಸುತ್ತಿರುವ ಮತ್ತು ತಮ್ಮ ಸಂಪತ್ತನ್ನು ವಿಸ್ತರಿಸುತ್ತಿರುವ ಇನ್ನೊಂದು ಮಾರ್ಗವಿದೆ. 2010 ರ ದಶಕದಿಂದ, ಸಾರ್ವಜನಿಕ ವಲಯದ ಬ್ಯಾಂಕುಗಳ (ಪಿಎಸ್‌ಬಿ) ಅನುತ್ಪಾದಕ ಆಸ್ತಿಗಳಲ್ಲಿ (ಎನ್‌ಪಿಎ) ಆದ್ಯತೆಯ ವಲಯದ ಸಾಲಗಳ ಪಾಲನ್ನು ಆದ್ಯತೆಯೇತರ ವಲಯದಿಂದ ಬಂದ ಎನ್‌ಪಿಎಗಳ ಏರಿಕೆ ಗಮನಾರ್ಹವಾಗಿ ಮೀರಿಸಿದೆ. 2000 ರ ದಶಕದಲ್ಲಿ ಪಿಎಸ್‌ಬಿ ಎನ್‌ಪಿಎ' ಗಳಲ್ಲಿ ಆದ್ಯತೆಯೇತರ ವಲಯವು ಸುಮಾರು ಶೇಕಡಾ 50 ರಷ್ಟನ್ನು ಹೊಂದಿತ್ತು, ಆದರೆ 2019 ರ ವೇಳೆಗೆ ಅದರ ಪಾಲು ತೀವ್ರವಾಗಿ ಶೇ.80 ಕ್ಕೆ ಏರಿತು. ಈ ಅವಧಿಯಲ್ಲಿ ತಮ್ಮ ಎನ್‌ಪಿಎ ಅನುಪಾತಗಳಲ್ಲಿ ಅತ್ಯಂತ ನಾಟಕೀಯ ಹೆಚ್ಚಳವನ್ನು ದಾಖಲಿಸಿದವರು ದೊಡ್ಡ ಕಾರ್ಪೊರೇಟ್ ಸಾಲಗಾರರು.

2014 ಮತ್ತು 2023 ರ ನಡುವೆ, ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಅಡಿಯಲ್ಲಿ, ಬ್ಯಾಂಕುಗಳು ಒಟ್ಟು 14.56 ಲಕ್ಷ ಕೋಟಿ ರೂ.ಗಳನ್ನು ವಜಾಗೊಳಿಸಿವೆ–ಇದು ದಿಗ್ಭ್ರಮೆಗೊಳಿಸುವ ಅಂಕಿ ಅಂಶ. ಪ್ರಧಾನಿ ಮೋದಿ ಅಧಿಕಾರ ವಹಿಸಿಕೊಂಡಾಗಿನಿಂದ ಈ ವಜಾಗೊಳಿಸುವಿಕೆಗಳ ಮೌಲ್ಯವು ಮೂರು ಪಟ್ಟು ಹೆಚ್ಚಾಗಿದೆ. ಕಾರ್ಪೊರೇಟ್ ಹಿತಾಸಕ್ತಿಗಳ ಪರವಾಗಿ ಸರ್ಕಾರಿ ನೀತಿಯನ್ನು ತೀವ್ರವಾಗಿ ತಿರುಗಿಸಲಾಗಿದೆ ಎಂದು ಇದು ಸ್ಪಷ್ಟವಾಗಿ ತೋರಿಸುತ್ತದೆ. ಯಾವುದೇ ಕಾರ್ಪೊರೇಟ್‌ಗಳು ಸಾರ್ವಜನಿಕ ಖಜಾನೆಯಿಂದ ವಂಚಿಸಿದ ಸಂಪನ್ಮೂಲಗಳನ್ನು ಕಾರ್ಮಿಕರ ಕಲ್ಯಾಣಕ್ಕಾಗಿ ಪರಿಣಾಮಕಾರಿಯಾಗಿ ಬಳಸುವುದಿಲ್ಲ. ಬದಲಾಗಿ, ಅವರು ಈ ಹಣವನ್ನು ಲಾಭ ಸಂಗ್ರಹಣೆ ಮತ್ತು ಸಂಪತ್ತಿನ ವಿಸ್ತರಣೆಗೆ ಬಳಸುತ್ತಾರೆ ಎಂಬ ಅಂಶವನ್ನು ಇಲ್ಲಿ ತಿಳಿಯಬೇಕು.

ಈಗ ಸಂಪತ್ತಿನ ನಿಜವಾದ ಸೃಷ್ಟಿಕರ್ತರಾದ ಕಾರ್ಮಿಕ ವರ್ಗದ ಸ್ಥಿತಿಗೆ ತಿರುಗೋಣ. 2014–15 ಮತ್ತು 2020–21ರ ನಡುವೆ, ಸಂಘಟಿತ ವಲಯದಲ್ಲಿ ವೇತನ ಬೆಳವಣಿಗೆಯು ಕೇವಲ ಶೇ.6 ಕ್ಕೆ ಇಳಿದಿದೆ, ಇದು ಹಿಂದಿನ ಆರು ವರ್ಷಗಳ ಅವಧಿಯಲ್ಲಿ ಶೇ.10.1 ರಷ್ಟಿತ್ತು. ನಿರಂತರವಾಗಿ ಹೆಚ್ಚಿನ ಹಣದುಬ್ಬರದೊಂದಿಗೆ, ನೈಜ ವೇತನವು ಪರಿಣಾಮಕಾರಿಯಾಗಿ ಕುಸಿದಿದೆ. ಇದಲ್ಲದೆ, ಕೈಗಾರಿಕಾ ವಲಯದ ಕಾರ್ಮಿಕರ ನಿವ್ವಳ ಮೌಲ್ಯವರ್ಧಿತ (ಎನ್‌ವಿಎ) ದಲ್ಲಿ ವೇತನದ ಪಾಲು ಶೇಕಡಾವಾರು 3 ಪಾಯಿಂಟ್‌ಗಳಿಂದ ಕಡಿಮೆಯಾಗಿದೆ, 2020 ರಲ್ಲಿ ಶೇ.18.9 ರಿಂದ 2023 ರಲ್ಲಿ ಶೇ.15.9 ಕ್ಕೆ ಇಳಿದಿದೆ. ಅದೇ ಅವಧಿಯಲ್ಲಿ, ಎನ್‌ವಿಎಯಲ್ಲಿ ಲಾಭದ ಪಾಲು ಶೇ.38.7 ರಿಂದ ಶೇ.51.9 ಕ್ಕೆ ಏರಿತು. ಕಾರ್ಮಿಕರು ಎದುರಿಸುತ್ತಿರುವ ಮತ್ತೊಂದು ಪ್ರಮುಖ ಶೋಷಣೆಯೆಂದರೆ ಕನಿಷ್ಠ ವೇತನ ಕಾನೂನುಗಳನ್ನು ಜಾರಿಗೊಳಿಸುವಲ್ಲಿ ಸರ್ಕಾರಗಳು ವಿಫಲವಾಗಿರುವುದು. ದೇಶದ ಹೆಚ್ಚಿನ ಭಾಗಗಳಲ್ಲಿ, ಕನಿಷ್ಠ ವೇತನವನ್ನು ಪಾವತಿಸಲಾಗುತ್ತಿಲ್ಲ, ಅಧಿಕಾವಧಿಗೆ ಸರಿಯಾದ ಪರಿಹಾರವನ್ನು ನೀಡುವುದಂತೂ ಸುಳ್ಳಲ್ಲ. ಕೆಲಸದ ಸಮಯವನ್ನು ಅನಿಯಂತ್ರಿತವಾಗಿ ವಿಸ್ತರಿಸಲಾಗುತ್ತಿದೆ, ಕೆಲವು ರಾಜ್ಯಗಳು 12 ಗಂಟೆ ಅಥವಾ ಅದಕ್ಕಿಂತ ಹೆಚ್ಚಿನ ಪಾಳಿಗಳನ್ನು ಅನುಮತಿಸುತ್ತಿವೆ. ಈ ಶೋಷಣಾ ಪರಿಸ್ಥಿತಿಗಳು ಕಾರ್ಮಿಕರ ವ್ಯವಸ್ಥಿತ ಮತ್ತು ನಿರಂತರ ಶೋಷಣೆಯನ್ನು ಪ್ರತಿಬಿಂಬಿಸುತ್ತವೆ.

ಕಾರ್ಮಿಕರು ಕನಿಷ್ಠ ವೇತನ ಮತ್ತು ತಮ್ಮ ಶ್ರಮದ ಮೂಲಕ ಸೃಷ್ಟಿಯಾಗುವ ಮೌಲ್ಯದಲ್ಲಿ ತಮ್ಮ ನ್ಯಾಯಯುತ ಪಾಲನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದಾಗಲೆಲ್ಲಾ, ಅವರಿಗೆ ಸಾಕಷ್ಟು ಸಂಪನ್ಮೂಲಗಳಿಲ್ಲ ಎಂದು ಹೇಳಲಾಗುತ್ತದೆ. ಇದು ಸ್ಪಷ್ಟವಾಗಿ ಸುಳ್ಳು. ಉದಾಹರಣೆಗೆ, ಕಾರ್ಪೊರೇಟ್ ತೆರಿಗೆ ರಿಯಾಯಿತಿಗಳ ಮೂಲಕ ಸರ್ಕಾರವು ವಾರ್ಷಿಕವಾಗಿ ಬಿಟ್ಟುಕೊಡುವ ಅಗಾಧ ಆದಾಯವನ್ನು ಪರಿಗಣಿಸಿ, ಪ್ರತಿ ವರ್ಷ, ಕಾರ್ಪೊರೇಟ್ ತೆರಿಗೆ ಕಡಿತಗಳಿಂದಾಗಿ ಸರ್ಕಾರವು ರೂ.1.45 ಲಕ್ಷ ಕೋಟಿಗಳನ್ನು ಕಳೆದುಕೊಳ್ಳುತ್ತದೆ. ಈ ಅಂಕಿ ಅಂಶವು ಆರೋಗ್ಯ ಮತ್ತು ಶಿಕ್ಷಣಕ್ಕಾಗಿ ಒಟ್ಟು ಬಜೆಟ್ ಹಂಚಿಕೆಗಳನ್ನು ಮೀರುತ್ತದೆ.

ಕಾರ್ಮಿಕರ ಕಲ್ಯಾಣಕ್ಕಾಗಿ ಸಂಪನ್ಮೂಲಗಳನ್ನು ಪಡೆಯಲು ಸರ್ಕಾರವು ನಿಜವಾಗಿಯೂ ಬದ್ಧವಾಗಿದ್ದರೆ, ಸ್ಪಷ್ಟ ಪರ್ಯಾಯಗಳಿವೆ. ಅಂತಹ ಒಂದು ಕ್ರಮವೆಂದರೆ ಸುಸ್ತಿದಾರ ಕಾರ್ಪೊರೇಟ್‌ಗಳಿಂದ ಪಾವತಿಸದ ಸಾಲಗಳನ್ನು ವಸೂಲಿ ಮಾಡುವುದು ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳು ಅವರಿಗೆ ವಹಿಸಿಕೊಟ್ಟಿರುವ ಜನರ ಹಣಕ್ಕೆ ಮರುಪಾವತಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳುವುದು. ಪಿಎಸ್‌ಬಿಗಳು 4,10,758 ಕೋಟಿ ರೂ.ಗಳ ಸಾಲ ಸುಸ್ತಿದಾರರಿಗಾಗಿ 16,420 ಪ್ರಕರಣಗಳನ್ನು ದಾಖಲಿಸಿವೆ. 2014 ರಿಂದ, ಸರ್ಕಾರವು ರೂ.16.61 ಲಕ್ಷ ಕೋಟಿ ಬ್ಯಾಂಕ್ ಸಾಲಗಳನ್ನು ಮನ್ನಾ ಮಾಡಿದೆ, ಇದು ಪ್ರಾಥಮಿಕವಾಗಿ ದೊಡ್ಡ ವ್ಯವಹಾರಗಳಿಗೆ ಪ್ರಯೋಜನವನ್ನು ನೀಡುತ್ತದೆ. ಈ ಮೊತ್ತವು 2025–26ರ ಸಂಪೂರ್ಣ ಕೇಂದ್ರ ಬಜೆಟ್‌ನ ಸುಮಾರು ಮೂರನೇ ಒಂದು ಭಾಗವಾಗಿದೆ.

ಕಳೆದ ಕೆಲವು ವರ್ಷಗಳಿಂದ ಕಾರ್ಮಿಕ ಸಂಘಗಳು ಎತ್ತಿರುವ ಅನೇಕ ಆರ್ಥಿಕ ಬೇಡಿಕೆಗಳನ್ನು ಸರ್ಕಾರವು ಕಾರ್ಪೊರೇಟ್ ಸುಸ್ತಿದಾರರಿಂದ ಸಾರ್ವಜನಿಕ ಹಣವನ್ನು ವಸೂಲಿ ಮಾಡಿ ಸಾರ್ವಜನಿಕ ಕಲ್ಯಾಣಕ್ಕಾಗಿ ಮರುನಿರ್ದೇಶಿಸಿದರೆ, ಈ ನಿಟ್ಟಿನಲ್ಲಿ ಕಾರ್ಮಿಕರ ಬೇಡಿಕೆಗಖನ್ನು ಪೂರೈಸಬಹುದು. ನಿರ್ಲಕ್ಷಿಸಲ್ಪಡುತ್ತಿರುವುದು ಕಾರ್ಮಿಕರನ್ನು ಮಾತ್ರವಲ್ಲ, ಸಾರ್ವಜನಿಕ ಸುರಕ್ಷತೆಯ ಬಗ್ಗೆಯೂ ಸರ್ಕಾರವು ಅಸಡ್ಡೆ ಪ್ರದರ್ಶಿಸುತ್ತಿದೆ. ಸರ್ಕಾರವು ಕೆಲಸದ ಸ್ಥಳದ ಸುರಕ್ಷತಾ ಮಾನದಂಡಗಳನ್ನು ಜಾರಿಗೊಳಿಸುವುದಲ್ಲದೆ, ಸಾರ್ವಜನಿಕ ಸೇವೆಗಳನ್ನು ಬಳಸುವ ನಾಗರಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬೇಕೆಂದು ಕಾರ್ಮಿಕ ಸಂಘಗಳು ನಿರಂತರವಾಗಿ ಒತ್ತಾಯಿಸುತ್ತಿವೆ.

ಈ ನಿರಾಸಕ್ತಿಗೆ ಒಂದು ಗಮನಾರ್ಹ ಉದಾಹರಣೆಯೆಂದರೆ ಸರ್ಕಾರವು ರೈಲ್ವೆ ಸುರಕ್ಷತೆಯನ್ನು ನಿರ್ಲಕ್ಷಿಸುತ್ತಿದೆ. ಅನೇಕ

ಪುಟ 10 ಕ್ಕೆ

ಜುಲೈ 9 ರಂದು ನಡೆಯುವ ಸಾರ್ವತ್ರಿಕ ಮುಷ್ಕರಕ್ಕೆ ಸಿಪಿಐ(ಎಂ) ಬೆಂಬಲ..... ಪುಟ 9 ರಿಂದ

ವರ್ಷಗಳಿಂದ, ಇದು ರೈಲ್ವೆ ಮೂಲಸೌಕರ್ಯಗಳ ನಿರ್ವಹಣೆಯನ್ನು ಕಡೆಗಣಿಸಿದೆ, ಇದು ರೈಲು ಪ್ರಯಾಣಿಕರ ಜೀವವನ್ನು ಅಪಾಯಕ್ಕೆ ಸಿಲುಕಿಸಿದೆ. ಕನಿಷ್ಠ 292 ಜೀವಗಳನ್ನು ಬಲಿ ತೆಗೆದುಕೊಂಡ ದುರಂತ ಬಾಲಸೋರ್ ರೈಲು ಅಪಘಾತ (2023), ಈ ವಿಷಯವನ್ನು ತೀವ್ರ ಗಮನಕ್ಕೆ ತಂದಿತು. ಸಿಎಜಿ ವರದಿಯ ಪ್ರಕಾರ, ಹಳಿ ನವೀಕರಣಕ್ಕೆ ಅಗತ್ಯವಿರುವ ಒಟ್ಟು ನಿಧಿಯ ಕೊರತೆಯು 1,03,395 ಕೋಟಿ ರೂ.ಗಳಷ್ಟಿತ್ತು. ಆದರೆ, ಅದೇ ವರ್ಷ, ಸಾರ್ವಜನಿಕ ವಲಯದ ಬ್ಯಾಂಕುಗಳು 1,33,945 ಕೋಟಿ ರೂ.ಗಳನ್ನು ವಜಾಗೊಳಿಸಿವೆ. ಇದನ್ನು ಹೋಲಿಸಿ ನೋಡಿದಾಗ, ಸರ್ಕಾರದ ಆದ್ಯತೆಗಳು ಯಾರ ಪರವಾಗಿದೆ ಎಂಬುದರ ಸ್ಪಷ್ಟ ಸೂಚನೆಯಾಗಿದೆ.

ಜವಾಬ್ದಾರಿಯನ್ನು ತೆಗೆದುಕೊಂಡು ಸುರಕ್ಷತೆ ಮತ್ತು ಉದ್ಯೋಗಗಳಲ್ಲಿ ಹೂಡಿಕೆ ಮಾಡುವ ಬದಲು, ಸರ್ಕಾರವು ಈಗ ನಿವೃತ್ತ ರೈಲ್ವೆ ನೌಕರರನ್ನು ಸ್ವಯಂಸೇವಕರಾಗಿ ನೇಮಿಸಿಕೊಳ್ಳುತ್ತಿದೆ. ಇದರ ಬದಲಾಗಿ ಉದ್ಯೋಗವನ್ನು ತೀವ್ರವಾಗಿ ಹುಡುಕುತ್ತಿರುವ ಯುವ, ಅರ್ಹ ವ್ಯಕ್ತಿಗಳನ್ನು ನೇಮಿಸಿಕೊಳ್ಳಬಹುದಲ್ಲವೇ?

ಕಳೆದ ಹನ್ನೊಂದು ವರ್ಷಗಳಲ್ಲಿ 22 ಕೋಟಿ ಉದ್ಯೋಗಗಳು ಉಂಟಾಗಬೇಕಾಗಿತ್ತು. ಪ್ರತಿ ವರ್ಷ 2 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಭರವಸೆಯನ್ನು ಈಡೇರಿಸುವ ಬದಲು, ಸರ್ಕಾರವು ವಾಸ್ತವವಾಗಿ ಉದ್ಯೋಗದಲ್ಲಿ ಕುಸಿತವನ್ನು ಮೇಲ್ವಿಚಾರಣೆ ಮಾಡಿದೆ. ವಿಶೇಷವಾಗಿ ಸಾರ್ವಜನಿಕ ವಲಯದಲ್ಲಿ. ತನ್ನದೇ ಆದ ವರದಿಗಳ ಪ್ರಕಾರ, ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ (CPSEಗಳು) ಉದ್ಯೋಗವು 2013 ರಲ್ಲಿ 17.3 ಲಕ್ಷದಿಂದ 2022 ರಲ್ಲಿ 14.6 ಲಕ್ಷಕ್ಕೆ ಇಳಿದಿದೆ, ಆದರೆ ಗುತ್ತಿಗೆ ಉದ್ಯೋಗದ ಪಾಲು 2013 ರಲ್ಲಿ ಶೇ.19 ರಿಂದ 2022 ರಲ್ಲಿ ಶೇ. 42.5 ಕ್ಕೆ ಏರಿದೆ.

ಸಾರ್ವಜನಿಕ ವಲಯದ ಬ್ಯಾಂಕು(Public Sector Bank) ಗಳಲ್ಲಿ, ಅದೇ ಪ್ರವೃತ್ತಿ ಗೋಚರಿಸುತ್ತದೆ. PSBಗಳಲ್ಲಿನ ಸಿಬ್ಬಂದಿ ಸಂಖ್ಯಾ ಸಾಮರ್ಥ್ಯವು 2014 ರಲ್ಲಿ 8,44,445 ರಿಂದ 2023 ರಲ್ಲಿ 7,56,644 ಕ್ಕೆ ಇಳಿದಿದೆ. ಒಟ್ಟಾರೆಯಾಗಿ, ಸರ್ಕಾರಿ ಸೇವೆಗಳು ಮತ್ತು ಸಾರ್ವಜನಿಕ ವಲಯದಲ್ಲಿನ ಉದ್ಯೋಗವು ವಿಶ್ವದಲ್ಲೇ ಅತ್ಯಂತ ಕಡಿಮೆಯಾಗಿದೆ. ಐಎಲ್‌ಒ ದತ್ತಾಂಶದ ಪ್ರಕಾರ, ಇದು ಭಾರತದಲ್ಲಿ ಕೇವಲ ಶೇ.3.8 ರಷ್ಟಿದೆ. ಬ್ರೆಜಿಲ್‌ನಲ್ಲಿ ಇದು ಶೇ.12.3, ಅಮೆರಿಕದಲ್ಲಿ ಶೇ.13.3, ಅರ್ಜೆಂಟೀನಾದಲ್ಲಿ ಶೇ.16.9, ಯು.ಕೆ. ಯಲ್ಲಿ ಶೇ.21.5, ಚೀನಾದಲ್ಲಿ ಶೇ.28, ರಷ್ಯಾದಲ್ಲಿ ಶೇ.40.6 ಮತ್ತು ಕ್ಯೂಬಾದಲ್ಲಿ ಶೇ.77 ರಷ್ಟು ಇದೆ. ಆದರೆ, ನಮ್ಮ ದೇಶದಲ್ಲಿ ಅತ್ಯಂತ ಹೀನಾಯವಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು.

ಮೀಸಲಾತಿಯ ಮೂಲಕ ಸಾಮಾಜಿಕ ನ್ಯಾಯವನ್ನು ಸಾರ್ವಜನಿಕ ವಲಯದಲ್ಲಿ ಮಾತ್ರ ಖಾತ್ರಿಪಡಿಸಲಾಗುತ್ತದೆ. ಅಲ್ಲಿಯೂ ಸರ್ಕಾರದ ಖಾಸಗೀಕರಣದ ನೀತಿಗಳಿಂದಾಗಿ, ಉದ್ಯೋಗಗಳು ನಾಶ ಹೊಂದುತ್ತಿರುವ ಕಾರಣದಿಂದಾಗಿ, ಸಾರ್ವಜನಿಕ ವಲಯದ ಉದ್ಯೋಗದಲ್ಲಿನ ಕಡಿತವು ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಅವಕಾಶಗಳಲ್ಲಿ ಕಡಿತವನ್ನು ಸೂಚಿಸುತ್ತದೆ. ಏಕೆಂದರೆ ಖಾಸಗಿ ವಲಯದಲ್ಲಿ ಮೀಸಲಾತಿಯನ್ನು ಜಾರಿಗೆ ತರಲಾಗುವುದಿಲ್ಲ. ಹಾಗಾಗಿ, ಖಾಸಗಿ ವಲಯಗಳಲ್ಲಿ ಮೀಸಲಾತಿ ತರಬೇಕಾಗಿದೆ. ಹೆಚ್ಚಿನ ಪ್ರಮಾಣದ ಯುವಜನರೊಂದಿಗೆ ನಾವು ಅನುಭವಿಸುವ ಜನಸಂಖ್ಯಾ ಪ್ರಯೋಜನವು ವ್ಯಾಪಕವಾದ ನಿರುದ್ಯೋಗ ಮತ್ತು ವ್ಯಾಪಕ ಉದ್ಯೋಗ ಕಡಿತದಿಂದಾಗಿ ವ್ಯರ್ಥವಾಗುತ್ತಿದೆ.

ಈ ಅನ್ಯಾಯಗಳನ್ನು ಪ್ರಶ್ನಿಸಲು, ಕಾರ್ಮಿಕ ವರ್ಗವು ಏಕತೆ ಮತ್ತು ಸಾಮೂಹಿಕ ಚೌಕಾಶಿಯಿಂದ ತನ್ನ ಶಕ್ತಿಯನ್ನು ಪಡೆಯುತ್ತದೆ. ಸರ್ಕಾರವು ಇವುಗಳನ್ನು ದುರ್ಬಲಗೊಳಿಸಲು ಪ್ರಯತ್ನಿಸುವ ಈ ಪಿತೂರಿ ನೀತಿಗಳಾಗಿವೆ. ಈ ನಿಟ್ಟಿನಲ್ಲಿ ಕಾರ್ಮಿಕ ಸಂಹಿತೆಗಳ ಪ್ರಸ್ತಾಪಗಳು ಕಾರ್ಮಿಕ ವರ್ಗವನ್ನು ದುರ್ಬಲಗೊಳಿಸುವ ಉದ್ದೇಶಪೂರ್ವಕ ಕ್ರಮವಾಗಿದೆ. ಈ ಕಾರ್ಮಿಕ ಸಂಹಿತೆಗಳ ಜಾರಿಯಿಂದಾಗಿ, ಬಂಡವಾಳಶಾಹಿಗಳಿಗೆ ಅಥವಾ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಸವಾಲಾಗದಂತೆ ನೋಡಿಕೊಳ್ಳುತ್ತದೆ. ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ, ಸರ್ಕಾರವು 2020 ರಲ್ಲಿ ಸಂಸತ್ತಿನ ಎರಡೂ ಸದನಗಳ ಮೂಲಕ ಹೊಸ ಕಾರ್ಮಿಕ ಸಂಹಿತೆಗಳನ್ನು ಬಲವಂತವಾಗಿ ಮಂಡಿಸಿತು. ಈ ಸಂಹಿತೆಗಳು ಕಾರ್ಮಿಕ ಸಂಘಗಳನ್ನು ತುಳಿಯುವ ಗುರಿಯನ್ನು ಹೊಂದಿವೆ, ಅವುಗಳು ಹೊಸ ಕಾನೂನುಗಳು ಕಾರ್ಮಿಕರಿಗೆ ಲಭ್ಯವಿರುವ ಉಳಿದ ಹಕ್ಕುಗಳು ಮತ್ತು ರಕ್ಷಣೆಗಳನ್ನು ದುರ್ಬಲಗೊಳಿಸುತ್ತವೆ ಎಂದು ಸರಿಯಾಗಿಯೇ ಎತ್ತಿ ತೋರಿಸಿವೆ.

ಕಾರ್ಮಿಕರ ಬಲವಾದ ಪ್ರತಿರೋಧದಿಂದಾಗಿ ಸರ್ಕಾರವು ಈ ಉದ್ಯಮ ಪರ, ಕಾರ್ಮಿಕ ವಿರೋಧಿ ಸಂಹಿತೆಗಳನ್ನು ಜಾರಿಗೆ ತರುವಲ್ಲಿ ಇಲ್ಲಿಯವರೆಗೆ ವಿಫಲವಾಗಿದೆ. ಆದಾಗ್ಯೂ, ಈಗ ಅದು ರಾಜ್ಯ ಸರ್ಕಾರಗಳ ಮೇಲೆ ಇದೇ ರೀತಿಯ ಕಾನೂನುಗಳನ್ನು ಜಾರಿಗೆ ತರುವಂತೆ ಒತ್ತಡ ಹೇರಲಾಗುತ್ತಿದೆ. ಹೀಗೆಯೇ, ಅನೇಕ ರಾಜ್ಯ ಸರ್ಕಾರಗಳು ಸಂಹಿತೆಗಳಿಗೆ ಅನುಗುಣವಾಗಿ ಕಾನೂನುಗಳನ್ನು ಜಾರಿಗೆ ತರುವ ಮೂಲಕ ಅನುಸರಿಸುತ್ತಿವೆ. ಈ ಪ್ರಯತ್ನಗಳನ್ನು ಸೋಲಿಸದ ಹೊರತು, ನಾವು ಕಾರ್ಮಿಕ ವರ್ಗದ ಹಕ್ಕುಗಳನ್ನು ರಕ್ಷಿಸಲು ಸಾಧ್ಯವಿಲ್ಲ. ಕಾರ್ಮಿಕ ಸಂಘಗಳು ಆರ್ಥಿಕ ಬೇಡಿಕೆಗಳಿಗೆ ಮಾತ್ರ ಸೀಮಿತವಾಗಿಲ್ಲ, ಬದಲಾಗಿ ರೈತರು, ಕೃಷಿ ಕಾರ್ಮಿಕರು ಮತ್ತು ಇತರ ಸಾಮಾನ್ಯ ಜನರ ಕಾಳಜಿಗಳನ್ನು ತಮ್ಮ ಬೇಡಿಕೆಗಳ ಪಟ್ಟಿಯಲ್ಲಿ ಸೇರಿಸಿಕೊಂಡಿವೆ ಎಂಬುದನ್ನು ಗಮನಿಸುವುದು ಹೃದಯಸ್ಪರ್ಶಿಯಾಗಿದೆ. ಕಾರ್ಮಿಕ ವರ್ಗದ ಪಕ್ಷವಾಗಿ, ಜುಲೈ 9 ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿರುವ ಕಾರ್ಮಿಕ ಸಂಘಗಳೊಂದಿಗೆ ನಿಲ್ಲುವುದು, ತನ್ನ ಬದ್ಧ ಕರ್ತವ್ಯವೆಂದು ಸಿಪಿಐ(ಎಂ) ಪರಿಗಣಿಸುತ್ತದೆ. ಎಲ್ಲಾ ಪಕ್ಷದ ಘಟಕಗಳು ಸಕ್ರಿಯವಾಗಿ ಪ್ರಚಾರ ಮಾಡುತ್ತವೆ ಮತ್ತು ಮುಷ್ಕರದ ಯಶಸ್ಸಿಗೆ ಜನಸಾಮಾನ್ಯರನ್ನು ಸಜ್ಜುಗೊಳಿಸಲು ಸಿಪಿಐ(ಎಂ) ಕೆಲಸ ಮಾಡುತ್ತದೆ.

ಪಕ್ಷವು ಕಾರ್ಮಿಕ ವರ್ಗದ ಮೇಲಿನ ದಾಳಿಯ ಹಿಂದಿರುವ ರಾಜಕೀಯವನ್ನು ಬಹಿರಂಗಪಡಿಸುತ್ತದೆ ಮತ್ತು ತುರ್ತಾಗಿ ಕಾರ್ಮಿಕರೊಂದಿಗೆ ಒಟ್ಟುಗೂಡಿ ಹೋರಾಡುವ ಮುತುವರ್ಜಿಯನ್ನು ಎತ್ತಿ ತೋರಿಸುತ್ತದೆ. ಈ ದಾಳಿಗಳು ಕೇವಲ ಕಾರ್ಮಿಕರ ಹಕ್ಕುಗಳ ಮೇಲೆ ಮಾತ್ರವಲ್ಲ, ಅದು ಒಟ್ಟಾರೆಯಾಗಿ, ದೇಶದ ಪ್ರಜಾಪ್ರಭುತ್ವದ ಮೌಲ್ಯಗಳ ಮೇಲಿನ ದಾಳಿಯಾಗಿದೆ ಎಂಬುದನ್ನು ಗಮನಿಸಬೇಕು. ಇದಲ್ಲದೆ, ಆಡಳಿತ ವರ್ಗಗಳು–ಆರ್‌ಎಸ್‌ಎಸ್–ಬಿಜೆಪಿ–ತಮ್ಮ ಪ್ರತಿನಿಧಿಗಳ ಮೂಲಕ ಕೋಮು ದ್ವೇಷವನ್ನು ಹರಡುವ ಮೂಲಕ ಕಾರ್ಮಿಕ ವರ್ಗ ಮತ್ತು ಇತರ ಶ್ರಮಿಕ ವರ್ಗಗಳ ಏಕತೆಯನ್ನು ಮುರಿಯಲು ಪ್ರಯತ್ನಿಸುತ್ತಿವೆ. ಆಳುವ ವರ್ಗಗಳು ನವ–ಫ್ಯಾಸಿಸಂ ಕಡೆಗೆ ತಳ್ಳುವ ನಿಟ್ಟಿನಲ್ಲಿ ಕಾರ್ಯ ನಿರ್ವಿಸುತ್ತಿರುವುದು ಗಂಭೀರವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಅಲ್ಲಿ ಬಂಡವಾಳಶಾಹಿ ಶೋಷಣೆಯ ವಿರುದ್ಧ ಭಿನ್ನಾಭಿಪ್ರಾಯ ಮತ್ತು ಪ್ರತಿಭಟಿಸುವ ಹಕ್ಕನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಲಾಗುತ್ತಿದೆ. ಕಾರ್ಪೊರೇಟ್‌ಗಳೊಂದಿಗೆ ಶಾಮೀಲು ನೀತಿ ಅನುಸರಿಸಿ, ಅವರ ಪರವಾಗಿ ಆಡಳಿತ ವರ್ತಿಸುತ್ತದೆ. ಹೀಗಾಗಿ ಬಡವರ ವಿರೋಧಿ ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧದ ಹೋರಾಟದಲ್ಲಿ ಸಿಪಿಐ(ಎಂ) ಕಾರ್ಮಿಕ ವರ್ಗದ ಜೊತೆ ದೃಢವಾಗಿ ನಿಲ್ಲಬೇಕು. ಹಾಗಾಗಿ, ಈ ಮುಷ್ಕರದ ಪ್ರಾಮುಖ್ಯತೆಯನ್ನು ಎತ್ತಿಹಿಡಯಬೇಕಾಗಿದೆ.

ಅನು: ನಾಗರಾಜ ನಂಜುಂಡಯ್ಯ

ಸಂಘರ್ಷ ಪ್ರಜಾಪ್ರಭುತ್ವಕ್ಕಾಗಿ..... ಪುಟ 2 ರಿಂದ

ರಾಜನ ಅಂತ್ಯದ ನಂತರ ಆಳುವರ್ಯಾರು?

ಇದು ಅಂದಿನ ಪ್ರಧಾನ ಪ್ರಶ್ನೆ. ಲೆವಲರ್ಸ್‌ಗಳು ನಿರಂತರವಾಗಿ ಪ್ರತಿಪಾದಿಸುತ್ತ ಬಂದದ್ದು ರಾಜನ ಕಾಲದ, ಅವನಿಂದ ಪ್ರಶಸ್ತಿ ಪಡೆದ ಮಾನ್ಯರಿಂದ ಕೂಡಿದ ಪಾರ್ಲಿಮೆಂಟನ್ನು ವಿಸರ್ಜಿಸಿ. ರಾಜನಿಗೆ ಮಾತ್ರವಲ್ಲ ರಾಜನ ಪರ ವಹಿಸಿ ಜನರಿಗೆ ವಿರುದ್ಧವಾಗಿ ಅಕ್ರಮಗಳನ್ನು ಎಸಗಿದ ಸಾಮಂತರುಗಳು, ಜಹಗೀರುದಾರರುಗಳಿಗೂ ಶಿಕ್ಷೆ ವಿಧಿಸಿ.

ರಾಜನಿಗೆ ಶಿಕ್ಷೆ ವಿಧಿಸುವ ತೀರ್ಮಾನ ಕೈಗೊಳ್ಳುವ ಮೊದಲು ಲೆವಲರ್ಸ್ ನಾಯಕ ಲಿಲ್‌ಬರ್ನ್ ಕ್ರೋಮ್‌ವೆಲ್‌ಗೆ ಬಹಳ ಸ್ಪಷ್ಟವಾಗಿ ತನ್ನ ಅಭಿಪ್ರಾಯ ತಿಳಿಸಿದ. ರಾಜನಿಗೆ ಮತ್ತು ಇತರ ಜನದ್ರೋಹಿಗಳಿಗೆ ಶಿಕ್ಷೆ ವಿಧಿಸುವ ಅಧಿಕಾರ ಹಳೆಯ ಪಾರ್ಲಿಮೆಂಟಿನಿಂದಲ್ಲ. ಅದು ಬರುವುದು ಜನತೆಯಿಂದ. ಆದ್ದರಿಂದ ಜನತೆಯ ಒಪ್ಪಂದ ಎಂಬ ಸಂವಿಧಾನಕ್ಕೆ ಜನತೆಯ ಅಂಗೀಕಾರ ಪಡೆಯಬೇಕು. ಜನತೆಯ ಪ್ರತಿನಿಧಿಗಳಿಂದ ಕೂಡಿದ ಪ್ರಜಾಪ್ರಭುತ್ವದ ಪಾರ್ಲಿಮೆಂಟ್ ರೂಪಿಸಿದ ನಿಯಮಗಳ ಆಧಾರದ ಮೇಲೆ ಮಾತ್ರ ರಾಜನಿಗೆ ಶಿಕ್ಷೆ ವಿಧಿಸಬೇಕು.

ರಾಜನಿಗೆ ಮರಣ ದಂಡನೆ ವಿಧಿಸಿದ ಕೂಡಲೇ ಜನರಿಂದ ಆಯ್ಕೆಗೊಳ್ಳದ ಶ್ರೀಮಂತರ ಪಾರ್ಲಿಮೆಂಟ್ ಎಂಬ ಮತ್ತೊಂದು ದಬ್ಬಾಳಿಕೆಗಾರ ಸಂಸ್ಥೆ ಪರಮಾಧಿಕಾರ ಪಡೆಯುತ್ತದೆ. ಅದು ಜನ ಮಾನ್ಯತೆ ಪಡೆದ ಸಂಸ್ಥೆಯಾಗುವುದಿಲ್ಲ.

ಆದರೆ ರಾಜನ ಹತ್ಯೆ ಮತ್ತು ಸೈನ್ಯದ ಬಲ ಬಳಸಿ ಕ್ರೋಮ್‌ವೆಲ್ ವಿರುದ್ಧದ ಬಹುಮತದ ಪಾರ್ಲಿಮೆಂಟ್ ಸದಸ್ಯರ ಉಚ್ಚಾಟನೆಯಾದ ಮೇಲೆ ಅವನಿಗೆ ಮತ್ತು ಗ್ರಾಂಡಿಗಳಿಗೆ ಲೆವಲರ್ಸ್‌ಗಳ ಅಗತ್ಯ ಇಲ್ಲವಲ್ಲ. ಆದ್ದರಿಂದ ಲೆವಲರ್ಸ್‌ಗಳ ಯಾವ ಮಾತಿಗೂ, ಈಗಾಗಲೇ ಗ್ರಾಂಡಿಗಳು ಮತ್ತು ಲೆವಲರ್ಸ್‌ಗಳು ಕೂಡಿ ಅಂಗೀಕರಿಸಿದ್ದ ಜನತೆಯ ಒಪ್ಪಂದದ ಅಂಶಗಳಿಗೂ ಮಾನ್ಯತೆ ನೀಡಲಿಲ್ಲ.

ಅದಕ್ಕೆ ಬದಲಾಗಿ ಮಿಲಿಟರಿ ಬಲ ಬಳಸಿ ಎರಡು ಬಾರಿ ತುಂಡು ತುಂಡು ಮಾಡಿದ್ದ ಪಾರ್ಲಿಮೆಂಟ್‌ನ ತುಂಡು ಇಂಗ್ಲೆಂಡಿನ ಆಡಳಿತ ನಡೆಸಲು ಒಂದು ರಾಜ್ಯ ಮಂಡಳಿ (ಕೌನ್ಸಿಲ್ ಆಫ್ ಸ್ಟೇಟ್) ಎಂಬುದನ್ನು ಆಯ್ಕೆ ಮಾಡಿತು. ಗ್ರಾಂಡಿಗಳು ಮತ್ತಿತರ ಶ್ರೀಮಂತರನ್ನು ಒಳಗೊಂಡ ಪಾರ್ಲಿಮೆಂಟ್‌ನ ಕೆಲ ಸದಸ್ಯರು, ಸೇನಾಧಿಕಾರಿಗಳಾಗಿದ್ದ ಗ್ರಾಂಡಿಗಳಿಂದ ಕೂಡಿದ ಈ ಮಂಡಳಿಗೆ ನೇಮಕ ಮಾಡಲಾಯಿತು. ಆ ಹೆಸರಿನಲ್ಲಿಯೂ ಗ್ರಾಂಡಿಗಳೇ, ಈ ಹೆಸರಿನಲ್ಲಿಯೂ ಗ್ರಾಂಡಿಗಳೇ. ಒಂದು ರೀತಿ ಅವರವರನ್ನು ಅವರವರೇ ಆಯ್ಕೆ ಮಾಡಿಕೊಂಡ ಅಕ್ರಮ.

ಒಂದು ಕ್ಷಿಪ್ರ ಕ್ರಾಂತಿಯ ಮೂಲಕ ಕ್ರೋಮ್‌ವೆಲ್ ನೇತೃತ್ವದ ಗ್ರಾಂಡಿಗಳು ಅಧಿಕಾರ ವಹಿಸಿಕೊಂಡಂತಾಯಿತು.

ಇಲ್ಲಿಯವರೆಗೆ ಸೇನೆಯಲ್ಲಿ ಲೆವಲರ್ಸ್‌ಗಳಿಗೆ ಸಮ ಗಣನೀಯ ಪ್ರಾತಿನಿಧ್ಯ ನೀಡಿ ಸಮಿತಿ, ಸೈನ್ಯ ಮಂಡಳಿಗಳನ್ನು ಸ್ಥಾಪಿಸಿದ್ದು, ಅವರ ಬೆಂಬಲ, ಅಪಾರ ಬಲಿದಾನಗಳು ಈಗ ಲೆಕ್ಕಕ್ಕೆ ಬರಲಿಲ್ಲ.

ಈ ರಾಜ್ಯ ಮಂಡಳಿ ಇಂಗ್ಲೆಂಡನ್ನು ಒಂದು ಪ್ರೊಟೆಕ್ಟೋರೇಟ್ ಎಂದು ಘೋಷಿಸಿ ಅದಕ್ಕೆ ಕ್ರೋಮ್‌ವೆಲ್‌ನನ್ನು ಸರ್ವಾಧಿಕಾರಿಯನ್ನಾಗಿ ನೇಮಿಸಿತು. ತುಂಡು ಪಾರ್ಲಿಮೆಂಟನ್ನು ವಿಸರ್ಜಿಸಿ ಕ್ರೋಮ್‌ವೆಲ್ ಮತ್ತು ಗ್ರಾಂಡಿಗಳು ನೇಮಕಾತಿಯ ಪಾರ್ಲಿಮೆಂಟ್ ಅಸ್ತಿತ್ವಕ್ಕೆ ಬಂದಿತು.

ಹೀಗೆ ರಾಜ ಪ್ರಭುತ್ವವನ್ನು ಅದರ ಪಾಲನೆಯ ಪಾಳೆಯಗಾರಿ ವ್ಯವಸ್ಥೆಯನ್ನು ಕಿತ್ತು ಹಾಕಿದ್ದು ಒಂದು ದೊಡ್ಡ ಸಾಧನೆ. ಆದರೆ ಅದರ ಬದಲಾಗಿ ಅಸ್ತಿತ್ವಕ್ಕೆ ಬಂದದ್ದು ಒಂದು ಸರ್ವಾಧಿಕಾರ.

ಜೂನ್ 25: ನೆನಪಿನಲ್ಲಿ.... ಪುಟ 4 ರಿಂದ

ದುರ್ಬಲಗೊಳಿಸುವುದು, ನಿರಂತರ ಕಣ್ಗಾವಲಿನಂತಹ ಹೊಸ ಫ್ಯಾಸಿಸ್ಟ್ ಸ್ಥಿತಿಯನ್ನು ಪ್ರಸ್ತುತ ವ್ಯವಸ್ಥಿತವಾಗಿ ಜಾರಿಗೆ ತರಲಾಗುತ್ತಿದೆ. ವಿಶೇಷವಾಗಿ ಕಮ್ಯುನಿಸ್ಟರು, ಅಲ್ಪಸಂಖ್ಯಾತರು ಮತ್ತು ಜಾತ್ಯತೀತ ಶಕ್ತಿಗಳನ್ನು ಈ ದಮನಕ್ಕೆ ಗುರಿಯಾಗಿ ಮಾಡಿಕೊಂಡಿದ್ದಾರೆ.

ತುರ್ತು ಪರಿಸ್ಥಿತಿಯನ್ನು ಸ್ವಾಗತಿಸಿದ ಟಾಟಾ ಅಂದು ಮತ್ತು ಇಂದು

ದೊಡ್ಡ ಬಂಡವಾಳಶಾಹಿಗಳು ಮತ್ತು ಭೂಮಾಲೀಕರು ತಮ್ಮ ವರ್ಗ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ನಿರಂಕುಶ ಶಕ್ತಿಗಳಿಗೆ ಬೆಂಬಲ ಕೊಡುತ್ತಾರೆ ಎಂದು ಸಿಪಿಐ(ಎಂ) ಸದಾ ಎಚ್ಚರಿಸುತ್ತಲೇ ಇದೆ. 1975ರಲ್ಲಿ ಸಹ, ಏಕಸ್ವಾಮ್ಯ ಬಂಡವಾಳಶಾಹಿಗಳ ಒಂದು ವಿಭಾಗವು ತುರ್ತು ಪರಿಸ್ಥಿತಿಯನ್ನು ಸ್ವಾಗತಿಸಿತು. 'ಸಂಸದೀಯ ವ್ಯವಸ್ಥೆ ನಮ್ಮ ಜನರಿಗೆ ಸೂಕ್ತವಲ್ಲ' ಎಂದು ಟಾಟಾ ಹೇಳಿದರು. ಇಂದು, ಮೋದಿ ಆಡಳಿತದಲ್ಲಿ ಜಾತ್ಯತೀತತೆ, ಫೆಡರಲಿಸಂ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವದ ಅಡಿಪಾಯವನ್ನು ನಾಶಮಾಡುವ ಯೋಜನೆಯಲ್ಲಿ ಕಾರ್ಪೊರೇಟ್ ಜಗತ್ತಿನ ದೊಡ್ಡ ಭಾಗವು ಮತೀಯ ಶಕ್ತಿಗಳೊಂದಿಗೆ ಕೈಜೋಡಿಸಿವೆ.

ಅಂದು ತುರ್ತು ಪರಿಸ್ಥಿತಿಯನ್ನು ಹೋರಾಡಿ ಸೋಲಿಸಿದಂತೆಯೇ, ನಾವು ಮತ್ತೆ ಮುನ್ನಡೆಯಬೇಕು. ಸರ್ವಾಧಿಕಾರವನ್ನು ತಡೆಗಟ್ಟಲು ಮತ್ತು ಸಂವಿಧಾನದಲ್ಲಿ ಪ್ರತಿಪಾದಿಸಲಾದ ಮೂಲಭೂತ ಮೌಲ್ಯಗಳನ್ನು ರಕ್ಷಿಸಲು ಸಿಪಿಐ(ಎಂ) ಮತ್ತೊಮ್ಮೆ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಸಜ್ಜುಗೊಳಿಸುತ್ತಿದೆ. 50 ವರ್ಷಗಳ ನಂತರ ತುರ್ತು ಪರಿಸ್ಥಿತಿಯನ್ನು ನೆನಪಿಸಿಕೊಳ್ಳುವುದು ಕೇವಲ ಇತಿಹಾಸವನ್ನು ನೆನಪಿಸಿಕೊಳ್ಳುವ ವಿಷಯವಲ್ಲ. ಹೆಚ್ಚುತ್ತಿರುವ ಕೋಮುವಾದಿ ಮತ್ತು ನವ–ಫ್ಯಾಸಿಸ್ಟ್ ಶಕ್ತಿಗಳಿಂದ ನಮ್ಮ ಗಣರಾಜ್ಯವನ್ನು ರಕ್ಷಿಸುವ ನಮ್ಮ ಸಂಕಲ್ಪವನ್ನು ಮತ್ತಷ್ಟು ಬಲಪಡಿಸಲು ಇದು ಒಂದು ಕ್ರಿಯಾಶೀಲ ಕರೆಯಾಗಿದೆ!

ಕನ್ನಡಕ್ಕೆ: ಸಿಚಿ

“ನಿರಂಕುಶಾಧಿಕಾರಿಗಳಂತೆ ವರ್ತಿಸಿದ ಆಳರಸರಿಗೆ ಏನಾಯಿತು ಎಂಬುದನ್ನು ನೆನಪಿಸಿಕೊಳ್ಳೋಣ”

ತುರ್ತು ಪರಿಸ್ಥಿತಿಯ ಸಮಯದಲ್ಲಿ ಪೋಲೀಸ್ ಹಿಂಸೆಯ ಕುರಿತು ವಿಧಾನಸಭೆಯಲ್ಲಿ ಪಿಣರಾಯಿ ವಿಜಯನ್ ಅವರ ಐತಿಹಾಸಿಕ ಭಾಷಣ

ಪಿಣರಾಯಿ ವಿಜಯನ್ 1970 ರಲ್ಲಿ ಮೊದಲ ಬಾರಿಗೆ ಕೂತುಪರಂಬು ಕ್ಷೇತ್ರವನ್ನು ಪ್ರತಿನಿಧಿಸುವ ಮೂಲಕ ಕೇರಳ ವಿಧಾನಸಭೆಯನ್ನು ಪ್ರವೇಶಿಸಿದರು. ತುರ್ತು ಪರಿಸ್ಥಿತಿ ಹೇರಿಕೆಯಿಂದಾಗಿ ಆ ಅವಧಿ 1977 ರವರೆಗೆ ವಿಸ್ತರಿಸಲ್ಪಟ್ಟಿತು. ಸೆಪ್ಟೆಂಬರ್ 28, 1975 ರ ನಂತರ, ಅವರ ಹೆಸರು ವಿಧಾನಸಭೆಯ ದಾಖಲೆಗಳಲ್ಲಿ ಇತರರ ಭಾಷಣಗಳ ಮೂಲಕ ಮಾತ್ರ ಕಾಣಿಸಿಕೊಳ್ಳುತ್ತದೆ. ತುರ್ತು ಪರಿಸ್ಥಿತಿ ಘೋಷಣೆಯಾದ ನಂತರ ಬಂಧಿಸಲ್ಪಟ್ಟ ಮೊದಲ ಹತ್ತು ವಿರೋಧ ಪಕ್ಷದ ಶಾಸಕರಲ್ಲಿ ಅವರು ಒಬ್ಬರು. ಆದರೆ ಇತರರಿಗಿಂತ ಭಿನ್ನವಾಗಿ, ಪಿಣರಾಯಿ ವಿಜಯನ್ ಅವರನ್ನು ಜೈಲಿಗೆ ಹಾಕುವ ಮೊದಲು ಕ್ರೂರ ಕಸ್ಟಡಿ ಚಿತ್ರಹಿಂಸೆಗೆ ಒಳಪಡಿಸಲಾಯಿತು, ಆ ಕಾಲದ ಭಾರೀ ಸೆನ್ಸಾರ್ಶಿಪ್ ಕಾರಣದಿಂದಾಗಿ ಪತ್ರಿಕೆಗಳಲ್ಲಿ ಎಲ್ಲಿಯೂಅದುಕಾಣಿಸಿಕೊಂಡಿಲ್ಲ. ವಿರೋಧ ಪಕ್ಷದ ನಾಯಕ ಇಎಂಎಸ್ ನಂಬೂದಿರಿಪಾಡ್ ಸೇರಿದಂತೆ ವಿಧಾನಸಭೆಯಲ್ಲಿ ಪದೇ ಪದೇ ಪ್ರಸ್ತಾಪಿಸಲ್ಪಟ್ಟಿದ್ದರೂ, ಈ ವಿಷಯವನ್ನು ಬುಚ್ಚಿಹಾಕಲಾಯಿತು. ವಿಧಾನಸಭೆ ವಿಸರ್ಜನೆಯಾಗುವವರೆಗೂ ಪಿಣರಾಯಿ ಜೈಲಿನಲ್ಲೇ ಇದ್ದರು. ಅವರು ಕೂತುಪರಂಬುದಿಂದ ಮತ್ತೆ ಮುಂದಿನ ವಿಧಾನಸಭೆಗೆ ಮರು ಆಯ್ಕೆಯಾದರು.

ಮಾರ್ಚ್ 30, 1977 ರಂದು, ಆ ವಿಧಾನಸಭೆ ಅಧಿವೇಶನದಲ್ಲಿ, ತುರ್ತು ಪರಿಸ್ಥಿತಿಯ ಸಮಯದಲ್ಲಿ ಅವರು ಅನುಭವಿಸಿದ ಕಸ್ಟಡಿ ಚಿತ್ರಹಿಂಸೆಯ ಭಯಾನಕತೆಯನ್ನು ವಿವರಿಸುವ ಆಘಾತಕಾರಿ ಭಾಷಣ ಮಾಡಿದರು.

ಸದನವು ದಿಗ್ಭ್ರಮೆಗೊಂಡು ಮೌನವಾಗಿ ಆಲಿಸಿತು. ಅವರ ಭಾಷಣದ ಸಂಪೂರ್ಣ ಪಠ್ಯ ಹೀಗಿದೆ:

ಸೆಪ್ಟೆಂಬರ್ 28, 1975ರ ನಂತರ ನಾನು ಮೊದಲ ಬಾರಿಗೆ ಈ ವಿಧಾನಸಭೆಯಲ್ಲಿ ಮಾತನಾಡುತ್ತಿರುವುದರಿಂದ, ಈ ಸದನದ ಮುಂದೆ ಕೆಲವು ಸಂಗತಿಗಳನ್ನು ಹಂಚಿಕೊಳ್ಳಲೇಬೇಕಾಗಿದೆ. ಆ ದಿನಾಂಕದಿಂದ ಈ ವಿಧಾನಸಭೆಯಲ್ಲಿ ನನ್ನ ಹೆಸರು ಹಲವು ಬಾರಿ ಬಂದಿರಬಹುದು. ನಿನ್ನೆ ಕೂಡ, ಗೌರವಾನ್ವಿತ ಮುಖ್ಯಮಂತ್ರಿಗಳು ವಿವಿಧ ಪ್ರಶ್ನೆಗಳಿಗೆ ಉತ್ತರವಾಗಿ ನನ್ನ ಹೆಸರನ್ನು ಉಲ್ಲೇಖಿಸಿದರು.

ಸೆಪ್ಟೆಂಬರ್ 28, 1975ರ ರಾತ್ರಿ ನನ್ನನ್ನು ರಾಜ್ಯಾದ್ಯಂತ ಅನೇಕ ಸಿಪಿಐ(ಎಂ) ಸದಸ್ಯರೊಂದಿಗೆ ‘ಮಿಸಾ’ ಅಡಿಯಲ್ಲಿ ಬಂಧಿಸಲಾಯಿತು. ನನ್ನ ಮನೆ ತಲಶ್ಶೇರಿ ಪೋಲೀಸ್ ವೃತ್ತದ ಅಡಿಯಲ್ಲಿ ಧರ್ಮಡೊಂ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿತ್ತು. ನನ್ನನ್ನು ಬಂಧಿಸಲು ಬಂದ ಅಧಿಕಾರಿ ಕೂತುಪರಂಬು ಸರ್ಕಲ್ ಇನ್ಸ್‌ಪೆಕ್ಟರ್ ಬಲರಾಮನ್. ಅವರು ನನ್ನ ಮನೆಯ ಬಾಗಿಲು ತಟ್ಟಿದರು. ನಾನು ತೆರೆದೆ.

"ಏನು ವಿಷಯ?" ನಾನು ಕೇಳಿದೆ.

"ನಾವು ನಿಮ್ಮನ್ನು ಬಂಧಿಸಲು ಇಲ್ಲಿದ್ದೇವೆ."

"ಯಾವ ಆಧಾರದ ಮೇಲೆ?"

"ನಮಗೆ ವಿಶೇಷ ಸೂಚನೆಗಳಿವೆ."

"ಯಾರಿಂದ?"

"ಪೋಲೀಸ್ ವರಿಷ್ಠಾಧಿಕಾರಿಯಿಂದ. ನಿಮ್ಮನ್ನು ಬಂಧಿಸಲು ನಮಗೆ ಆದೇಶಿಸಲಾಗಿದೆ."

ಅವರೊಂದಿಗೆ ಕೂತುಪರಂಬ ಸಬ್–ಇನ್ಸ್‌ಪೆಕ್ಟರ್ ಮತ್ತು ದೊಡ್ಡ ಪೋಲೀಸ್ ತಂಡವಿತ್ತು. ನಾನು ಆಗಷ್ಟೇ ಎಚ್ಚರಗೊಂಡಿದ್ದೆ. ನಾನು ಬಟ್ಟೆ ಧರಿಸಿ ಅವರೊಂದಿಗೆ ಪೋಲೀಸ್ ಠಾಣೆಗೆ ಹೋದೆ. ನಾವು ಠಾಣೆ ತಲುಪುವವರೆಗೂ ಅವರು ಸೌಜನ್ಯದಿಂದ ವರ್ತಿಸಿದರು. ಠಾಣೆಗೆ ಬಂದ ನಂತರ, ಅವರು ನನ್ನ ಜೇಬಿನಲ್ಲಿ ಏನಾದರೂ ಇದೆಯೇ ಎಂದು ಕೇಳಿದರು. ನನ್ನ ಗುರುತಿನ ಚೀಟಿ ಇದೆ ಎಂದು ನಾನು ಅವರಿಗೆ ಹೇಳಿದೆ. ಅವರು ಅದನ್ನು ತೋರಿಸುವಂತೆ ಕೇಳಿದರು; ನಾನು ಅದನ್ನು ಕೊಟ್ಟೆ. ನಂತರ ಅವರು, “ಅವನನ್ನು ಬಂಧಿಸಿ” ಎಂದರು.

ನಾನು ಕೇಳಿದೆ, “ಅದು ಅಗತ್ಯವೇ?”

“ಹೌದು, ಅದು ನಮ್ಮ ನಿಯಮ.”

ನನ್ನನ್ನು ಲಾಕ್–ಅಪ್‌ಗೆ ಕರೆದೊಯ್ಯುವಾಗ, ಒಬ್ಬ ಪೋಲೀಸ್ “ನಿನ್ನ ಅಂಗಿಯನ್ನು ಬಿಚ್ಚಿಡು” ಎಂದನು.

“ಏಕೆ? ನೀವು ಸಾಮಾನ್ಯ ಅಪರಾಧಿಗಳನ್ನು ಹೀಗೆಯೇ ನಡೆಸಿಕೊಳ್ಳುತ್ತೀರಾ?”

“ನಾನು ಅದಕ್ಕೆ ಉತ್ತರಿಸಲು ಸಾಧ್ಯವಿಲ್ಲ. ಇನ್ಸ್‌ಪೆಕ್ಟರ್ ಅವರನ್ನು ಕೇಳಿ.” ಎಂದರು.





ಆದ್ದರಿಂದ ನಾನು ಇನ್ಸ್‌ಪೆಕ್ಟರ್ ಅವರನ್ನು ಕೇಳಿದೆ, “ನಾವೆಲ್ಲರೂ ರಾಜಕೀಯ ಕಾರ್ಯಕರ್ತರಲ್ಲವೇ? ನಾನು ನನ್ನ ಅಂಗಿಯನ್ನು ತೆಗೆಯಬೇಕೇ?”

ಇನ್ಸ್‌ಪೆಕ್ಟರ್ ಪೋಲೀಸರಿಗೆ ಹೇಳಿದರು– “ಅದನ್ನು ತೆಗೆಯುವ ಅಗತ್ಯವಿಲ್ಲ. ಅವನು ತನ್ನ ಅಂಗಿಯನ್ನು ಧರಿಸಿಕೊಂಡು ಲಾಕ್–ಅಪ್‌ನಲ್ಲಿಯೇ ಇರಲಿ.”

ನಾನು ಲಾಕ್–ಅಪ್‌ಗೆ ಪ್ರವೇಶಿಸುತ್ತಿದ್ದಂತೆ, ಅವರು ನನಗೆ ಚಾಪೆ ಕೊಟ್ಟರು. ನಾನು ಅದನ್ನು ತೆಗೆದುಕೊಂಡು ಒಳಗೆ ಕುಳಿತೆ.

ಎರಡು ನಿಮಿಷಗಳು ಕಳೆದಿಲ್ಲ. ಅವರು ಸೆಲ್ ಅನ್ನು ಲಾಕ್ ಮಾಡಿದರು, ಹೊರಗೆ ಲೈಟ್ ಆಫ್ ಮಾಡಿದರು. ಲಾಕ್–ಅಪ್ ಒಳಗೆ ಬೆಳಕು ಇರಲಿಲ್ಲ, ಕೇವಲ ಮಂದವಾಗಿ ಕಾಣಿಸುತ್ತಿತ್ತು. ಇಬ್ಬರು ಯುವಕರು ಸೆಲ್ ಅನ್ನು ಪ್ರವೇಶಿಸಿದರು. ನಂತರ, ಅವರು ಆ ಠಾಣೆಯವರಲ್ಲ ಎಂದು ನನಗೆ ಅರಿವಾಯಿತು, ಅವರನ್ನು ವಿಶೇಷವಾಗಿ ಈ ಉದ್ದೇಶಕ್ಕಾಗಿಯೇ ಕರೆತರಲಾಗಿತ್ತು.

ನಾನು ಕುಳಿತಿದ್ದೆ. ಅವರು ಒಳಗೆ ಬಂದರು. ನಾನು ಎದ್ದು ನಿಂತೆ.

ಅವರಲ್ಲಿ ಒಬ್ಬ "ನಿನ್ನ ಹೆಸರೇನು?" ಎಂದು ಕೇಳಿದ.

"ವಿಜಯನ್" ಎಂದು ಉತ್ತರಿಸಿದೆ.

"ಯಾವ ವಿಜಯನ್?"

"ಪಿಣರಾಯಿ ವಿಜಯನ್."

ಅವರು "ಓಹ್... ಪಿಣರಾಯಿ ವಿಜಯನ್" ಎಂದು ಪುನರಾವರ್ತಿಸಿದರು ಮತ್ತು ನಂತರ ಏಟು ಪ್ರಾರಂಭವಾಯಿತು.

ಮೊದಲ ಸುತ್ತು ಆ ಇಬ್ಬರು ವ್ಯಕ್ತಿಗಳಿಂದ ಆಗಿತ್ತು. ಬಹುಶಃ ಇಬ್ಬರು ಸಾಕಾಗಲಿಲ್ಲ ಎಂದು ಅವರು ಭಾವಿಸಿದ್ದರು. ಶೀಘ್ರದಲ್ಲೇ, ಸರ್ಕಲ್ ಇನ್ಸ್‌ಪೆಕ್ಟರ್ ಸೇರಿದಂತೆ ದೊಡ್ಡ ಗುಂಪು ಸೇರಿಕೊಂಡಿತು. ಈಗ ಐದು ಜನ ಇದ್ದರು. ಅದು ಯಾವ ರೀತಿಯ ಏಟು ಎಂದು ನಾನು ವಿವರಿಸಬೇಕಾಗಿಲ್ಲ. ಕೇರಳವನ್ನು ತಿಳಿದಿರುವ ಯಾರಾದರೂ ಅದನ್ನು ಊಹಿಸಬಹುದು.

ಅವರು ನನ್ನನ್ನು ಸಾಧ್ಯವಿರುವ ಎಲ್ಲ ರೀತಿಯಲ್ಲಿ ಹೊಡೆದರು. ನಾನು ಬಿದ್ದು ಮತ್ತೆ ಎದ್ದೆ, ಪದೇ ಪದೇ. ಅವರು ನನ್ನನ್ನು ಹೊಡೆದಾಗ, ಅವರು "ನೀವು ಅಧಿಕಾರಿಗಳ ವಿರುದ್ಧ ಮಾತನಾಡುತ್ತೀರಿ, ನೀವು ಮಂತ್ರಿಗಳ ವಿರುದ್ಧ ಮಾತನಾಡುತ್ತೀರಿ, ಅಲ್ಲವೇ?" ಎಂದು ಕೂಗುತ್ತಲೇ ಇದ್ದರು.

ನಾನು ಹಲವು ಬಾರಿ ಬಿದ್ದೆ, ಮತ್ತೆ ನಿಲ್ಲಲು ಪ್ರಯತ್ನಿಸಿದೆ. ಕೊನೆಗೆ, ನನಗೆ ಎದ್ದೇಳಲು ಸಾಧ್ಯವಾಗಲಿಲ್ಲ. ನಂತರ ಅವರೆಲ್ಲರೂ ನನ್ನನ್ನು ಪದೇ ಪದೇ, ಸಾಧ್ಯವಾದಷ್ಟು ಬಲಹಾಕಿ ಒದ್ದರು. ಅವರಲ್ಲಿ ಐದು ಮಂದಿ ಸುಮಾರು 15ರಿಂದ 20 ನಿಮಿಷಗಳ ಕಾಲ ನನ್ನನ್ನು ದಣಿವತನಕ ಹೊಡೆದರು. ನಂತರ ಅವರು ಹೊರಟುಹೋದರು.

ಮರುದಿನ ಬೆಳಿಗ್ಗೆ ತನಕ ನಾನು ಅಲ್ಲೇ ಮಲಗಿದ್ದೆ. ಅಷ್ಟೊತ್ತಿಗೆ ನನ್ನ ಶರ್ಟ್ ಹರಿದಿತ್ತು, ನನ್ನ ವೆಸ್ಟ್ ಮಾಯವಾಗಿತ್ತು, ನನ್ನ ಧೋತಿ ಕಾಣೆಯಾಗಿತ್ತು. ನನ್ನ ಒಳ ಉಡುಪು ಮಾತ್ರ ಉಳಿದಿತ್ತು. ಆ ಲಾಕ್–ಅಪ್‌ನಲ್ಲಿ ನನ್ನ ಬಳಿ ಇದ್ದದ್ದು ಅಷ್ಟೇ.

ಮರುದಿನ, ಕೂತುಪರಂಬದಿಂದ ಹೊಸ ಪೋಲೀಸ್ ತಂಡ ಬಂತು. ಅವರಲ್ಲಿ ಕೆಲವರು ನನಗೆ ತಿಳಿದಿದ್ದರು. ನನಗೆ ಏನಾಯಿತು ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಅವರು ಮೃದುವಾಗಿ, “ನಿಮಗೆ ಸ್ವಲ್ಪ ಚಹಾ ಬೇಕಾ?” ಕೇಳಿದರು.

ಬೆಳಿಗ್ಗೆ 10 ಗಂಟೆಗೆ ಅವರು ನನ್ನನ್ನು ಕಣ್ಣೂರಿಗೆ ಕರೆದೊಯ್ದರು. ನಾನು ಅಲ್ಲಿಗೆ ತಲುಪಿದಾಗ, ನನಗೆ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ನನ್ನನ್ನು ಪೋಲೀಸ್ ಜೀಪಿನಲ್ಲಿ ಎತ್ತಿಕೂರಿಸಬೇಕಾಯಿತು. ನಿಲ್ದಾಣದಲ್ಲಿ ಸಬ್–ಇನ್ಸ್‌ಪೆಕ್ಟರ್ ಪುಲಿಕ್ಕೋಡನ್ ನಾರಾಯಣನ್ ನಿಂತಿದ್ದರು. ನನ್ನನ್ನು ನೋಡುವಾಗಲೇ ಏನಾಯಿತು ಎಂದು ಯಾರಿಗಾದರೂ ಅರ್ಥವಾಗುತ್ತಿತ್ತು.

ಅವರು ಹೇಳಿದರು, "ವಿಜಯನ್, ನಿಮ್ಮ ಮುಖ ಬದಲಾಗಿದೆ."

ಇದು ಮತ್ತೊಂದು ಸುತ್ತಿನ ಚಿತ್ರಹಿಂಸೆಯ ಆರಂಭವಾಗಿರಬಹುದು ಎಂದು ನಾನು ಭಾವಿಸಿದೆ. ಆದರೆ ಆಶ್ಚರ್ಯವೆಂದರೆ, ಎರಡನೇ ಸುತ್ತು ಇರಲಿಲ್ಲ.

ಮಧ್ಯರಾತ್ರಿ, ನನ್ನನ್ನು ಕಣ್ಣೂರು ಕೇಂದ್ರ ಜೈಲಿಗೆ ಕರೆದೊಯ್ಯಲಾಯಿತು. ನನ್ನನ್ನು ದಾಖಲಿಸುವ ಜವಾಬ್ದಾರಿ ಉಪ ಜೈಲರ್ ಮೇಲಿತ್ತು.

ನಾನು ಹೇಳಿದೆ, "ನನ್ನ ದೇಹದ ಮೇಲೆ ಗುರುತುಗಳನ್ನು ನೀವು ನೋಡಬಹುದು. ದಯವಿಟ್ಟು ಅವುಗಳನ್ನು ರೆಕಾರ್ಡ್ ಮಾಡಿ."

ಅವರು ಉತ್ತರಿಸಿದರು– "ತೆರೆದ ಗಾಯಗಳು ಅಥವಾ ರಕ್ತಸ್ರಾವವಾಗಿದ್ದರೆ ಮಾತ್ರ ನಾವು ದಾಖಲೆ ಮಾಡಬಹುದು."

ನಾನು ನನ್ನ ಶರ್ಟ್ ತೆಗೆದು ತೋರಿಸಿದೆ. ಯಾರಾದರೂ ಮೂಗೇಟುಗಳನ್ನು ನೋಡಬಹುದಾಗಿತ್ತು.

ಆದರೂ, ಅವರು ಹೇಳಿದರು– "ಗಾಯಗಳಿಲ್ಲ. ದಾಖಲಿಸಲು ಏನೂ ಇಲ್ಲ."

ಇದು ಉದ್ದೇಶಪೂರ್ವಕ ಎಂದು ನನಗೆ ತಿಳಿಯಿತು. ನನ್ನ ಎಡಗಾಲು ಮುರಿದಿದೆ ಎಂದು ನಾನು ಅವನಿಗೆ ಹೇಳಿದೆ. ಆದರೆ ಅವನು ಏನನ್ನೂ ದಾಖಲಿಸುವುದಿಲ್ಲ ಎಂದ. ನಂತರ ನನ್ನ ಒಡನಾಡಿಗಳು ನನ್ನನ್ನು ಚಂದ್ರಶೇಖರನ್ ಮತ್ತು ಶಂಕರನ್ ಕುಟ್ಟಿ ಇರಿಸಲಾಗಿದ್ದ ಎಂಟನೇ ಬ್ಲಾಕ್‌ಗೆ ಕರೆದೊಯ್ದರು. ಅವರು ನನ್ನನ್ನು ನೋಡಿಕೊಂಡರು.

ಮರುದಿನ ಬೆಳಿಗ್ಗೆ ವೈದ್ಯರು ಭೇಟಿ ನೀಡಿ ಜೈಲು ಆಸ್ಪತ್ರೆಗೆ ಕರೆದೊಯ್ದರು. ನನ್ನ ಕಾಲಿಗೆ ಪ್ಲಾಸ್ಟರ್ ಹಾಕಲಾಗಿತ್ತು. ಆರು ವಾರಗಳ ಕಾಲ ನಾನು ಕಾಸ್ಟ್‌ನಲ್ಲಿದ್ದೆ. ತಿಂಗಳುಗಳ ಕಾಲ ಸಹಾಯವಿಲ್ಲದೆ ನನಗೆ ಏನೂ ಮಾಡಲು ಸಾಧ್ಯವಾಗಲಿಲ್ಲ. ತಿನ್ನಲು ಅಥವಾ ಕುಡಿಯಲು ಸಹ ಸಹಾಯ ಅಗತ್ಯವಾಗಿತ್ತು. ನಾನು ಮುಖ್ಯಮಂತ್ರಿಗೆ ಪತ್ರ ಬರೆದೆ. ಸಭಾಧ್ಯಕ್ಷರ ಹುದ್ದೆ ಖಾಲಿಯಾಗಿತ್ತು. ಆದ್ದರಿಂದ ನಾನು ಉಪ ಸಭಾಧ್ಯಕ್ಷರಿಗೆ ಪತ್ರ ಬರೆದೆ. ಯಾವುದೇ ಉತ್ತರ ಬರಲಿಲ್ಲ. ಸ್ವೀಕೃತಿಯೂ ಇರಲಿಲ್ಲ.

ನಾನು ರಿಟ್ ಅರ್ಜಿ ಸಲ್ಲಿಸಿದೆ

ವಿಚಾರಣೆಯ ಸಮಯದಲ್ಲಿ, ಹೈಕೋರ್ಟ್‌ನಲ್ಲಿ, ಉಪ ಜೈಲರ್ ಆಗಮನದ ಸಮಯದಲ್ಲಿ ನನಗೆ ಯಾವುದೇ ಗಾಯಗಳಾಗಿಲ್ಲ ಎಂದು ಹೇಳುವ ಅಫಿಡವಿಟ್ ಸಲ್ಲಿಸಿದರು. ಅವರು ಅದನ್ನು ಹೇಗೆ ಹೇಳಲು ಸಾಧ್ಯ? ಜೈಲು ಸೂಪರಿಂಟೆಂಡೆಂಟ್ ಕೂಡ ನನಗೆ ಯಾವುದೇ ಗೋಚರ ಗಾಯಗಳಾಗಿಲ್ಲ ಎಂದು ಹೇಳಿದರು.

ಹೈಕೋರ್ಟ್ ಇದನ್ನು ಪ್ರಶ್ನಿಸಿತು. “ದಾಖಲಾದಾಗ ಯಾವುದೇ ಗಾಯಗಳಿಲ್ಲದಿದ್ದರೆ, ನಂತರ ಅವು ಹೇಗೆ ಕಾಣಿಸಿಕೊಂಡವು?”

ಉಪಜೈಲರ್ ಒತ್ತಡಕ್ಕೆ ಒಳಗಾಗಿ ಅಫಿಡವಿಟ್ ಸಲ್ಲಿಸಿರಬಹುದು ಎಂದು ನ್ಯಾಯಾಲಯ ಟಿಪ್ಪಣಿ ಮಾಡಿತು.

“ಇದೊಂದು ಗಂಭೀರ ಸಂಗತಿ. ಸರಕಾರ ಸೂಕ್ತ ಕ್ರಮಕೈಗೊಳ್ಳಬೇಕು” ಎನ್ನುತ್ತ ನ್ಯಾಯಾಲಯ ಅರ್ಜಿಯನ್ನು ಇತ್ಯರ್ಥಮಾಡಿತು.

ನಂತರ, ವಿಚಾರಣೆ ನಡೆಸಲಾಗಿದೆ ಎಂದು ನಾನು ಕೇಳಲ್ಪಟ್ಟೆ. ಆದರೆ ಯಾರೂ ನನ್ನನ್ನು ಒಂದೇ ಒಂದು ಪ್ರಶ್ನೆ ಕೇಳಲಿಲ್ಲ. ಒಂದು ದಿನ, ನಾನು ಆಸ್ಪತ್ರೆಯಲ್ಲಿದ್ದಾಗ, ಕೋಝಿಕ್ಕೋಡ್ ಡಿಐಜಿ ಭೇಟಿ ನೀಡಿದರು. "ನೀವು ವಿಚಾರಿಸಲು ಬಂದಿದ್ದೀರಾ?" ಎಂದು ನಾನು ಕೇಳಿದೆ.

"ಓಹ್ ಇಲ್ಲ, ನಾನು ಆಕಸ್ಮಿಕವಾಗಿ ಹತ್ತಿರದಲ್ಲಿದ್ದೆ ಮತ್ತು ನಾನು ಒಳಗೆ ಹೋಗುತ್ತೇನೆ ಎಂದು ಯೋಚಿಸಿ ಬಂದೆ"ಎಂದರು.

ಅಷ್ಟೇ. ಇಲ್ಲಿಯವರೆಗೆ ಏನಾಯಿತು ಎಂದು ಯಾರೂ ನನ್ನನ್ನು ಕೇಳಿಲ್ಲ. ವಿಚಾರಿಸಲು ಕಂದಾಯ ಮಂಡಳಿ ಸದಸ್ಯರನ್ನು ನೇಮಿಸಲಾಗಿದೆ ಎಂದು ಅವರು ಹೇಳಿದರು. ಆ ವಿಚಾರಣೆಯೂ ಕೊನೆಗೊಂಡಿತು. ಆದರೂ, ಯಾರೂ ನನ್ನನ್ನು ಏನೂ ಕೇಳಿಲ್ಲ.

ಇದು ನನ್ನ ಅನುಭವ. ನಾನು ಇದನ್ನು ಈ ಸದನದ ಎಲ್ಲಾ ಸದಸ್ಯರೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ನಾವೆಲ್ಲರೂ ರಾಜಕೀಯ ಜನರು. ನಾವು ವಿಭಿನ್ನ ದೃಷ್ಟಿಕೋನಗಳಿಂದ ವಾದಿಸುತ್ತೇವೆ ಮತ್ತು ಪುಟ 14 ಕ್ಕೆ

ಜುಲೈ ೯ ರ ಸಾರ್ವತ್ರಿಕ ಮುಷ್ಕರಕ್ಕೆ ಎಡಪಕ್ಷಗಳ ಬೆಂಬಲ

ಹತ್ತು ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರ ಅಖಿಲ ಭಾರತ ಕ್ಷೇತ್ರವಾರು ನೌಕರರ ಒಕ್ಕೂಟಗಳು ಮತ್ತು ಸಂಘಗಳನ್ನು ಒಳಗೊಂಡಿರುವ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯು ಕರೆ ನೀಡಿರುವ ಜುಲೈ 9, 2025ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಐದು ಎಡ ಪಕ್ಷಗಳು ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿವೆ. ಈ ಸಾರ್ವತ್ರಿಕ ಮುಷ್ಕರವನ್ನು ಮುಖ್ಯವಾಗಿ ಕಾರ್ಮಿಕ ಸಂಹಿತೆಗಳ ಅನುಷ್ಠಾನದ ವಿರುದ್ಧ ಕರೆಯಲಾಗಿದೆ, ಈ ಕಾರ್ಮಿಕ ಸಂಹಿತೆಗಳು ಕಾರ್ಮಿಕರ ಸಂಘಟನಾ ಹಕ್ಕು ಮತ್ತು ಸಾಮೂಹಿಕ ಕಾರ್ಯಾಚರಣೆ ನಡೆಸುವ ಹಕ್ಕೂ ಸೇರಿದಂತೆ ಅವರ ಮೂಲಭೂತ ಪ್ರಜಾಪ್ರಭುತ್ವ ಹಕ್ಕುಗಳನ್ನು ತೀವ್ರವಾಗಿ ಮೊಟಕುಗೊಳಿಸುವ ಗುರಿಯನ್ನು ಹೊಂದಿರುವ ಕಾರ್ಪೊರೇಟ್ ಅಜೆಂಡಾದ ಪ್ರಮುಖ ಭಾಗವಾಗಿವೆ ಎಂದು ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್) ಲಿಬರೇಷನ್, ಆರ್‌ಎಸ್‌ಪಿ ಮತ್ತು ಫಾರ್ವರ್ಡ್ ಬ್ಲಾಕ್‌ನ ಪ್ರಧಾನ ಕಾರ್ಯದರ್ಶಿಗಳು ತಮ್ಮ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ನೇತೃತ್ವದ ಸರ್ಕಾರವು ಈಗ ತನ್ನ ಮೂರನೇ ಅವಧಿಯಲ್ಲಿ ತನ್ನ ನವ ಉದಾರವಾದಿ ಕಾರ್ಯಸೂಚಿಯನ್ನು ಆಕ್ರಮಣಕಾರಿಯಾಗಿ ಮುಂದೊತ್ತುತ್ತಿದೆ, ಇದರಲ್ಲಿ ಕಾರ್ಮಿಕ ಸಂಹಿತೆಗಳು ಕೇಂದ್ರ ಅಂಶವಾಗಿವೆ. ಇದು ಪ್ರಮುಖ ರಾಷ್ಟ್ರೀಯ ಸಂಪನ್ಮೂಲಗಳ ಖಾಸಗೀಕರಣದ ಕಡೆಗೆ, ವಿಶೇಷವಾಗಿ ರಕ್ಷಣೆ ಮತ್ತು ಸಂವಹನದಂತಹ ಆಯಕಟ್ಟಿನ ಕ್ಷೇತ್ರಗಳಲ್ಲಿ ಆಕ್ರಮಣಕಾರಿಯಾಗಿ ಸಾಗುತ್ತಿದೆ, ಈ ಕಾರ್ಮಿಕ ವಿರೋಧಿ ನೀತಿಗಳಿಗೆ ಎಲ್ಲಾ ವಿರೋಧವನ್ನು ನಿಗ್ರಹಿಸಲು ಸಹ ಇದು ಪ್ರಯತ್ನಿಸುತ್ತಿದೆ ಎಂದು ಈ ಎಡಪಕ್ಷಗಳ ಮುಖಂಡರು ಹೇಳಿದ್ದಾರೆ.

ಜುಲೈ 9 ರ ಸಾರ್ವತ್ರಿಕ ಮುಷ್ಕರದಲ್ಲಿ ಕಾರ್ಮಿಕ ಸಂಘಗಳು ಪುನರುಚ್ಚರಿಸಿರುವ ಬೇಡಿಕೆಗಳು ರೈತರು, ಕೃಷಿ ಕಾರ್ಮಿಕರು ಮತ್ತು ಸಾರ್ವಜನಿಕರ ಕಳವಳಗಳನ್ನು ಕೂಡ ಬಿಂಬಿಸುತ್ತವೆ. ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳು ಕೂಡ ಸಾರ್ವತ್ರಿಕ ಮುಷ್ಕರಕ್ಕೆ ತಮ್ಮ ಬೆಂಬಲವನ್ನು ನೀಡಿವೆ ಮತ್ತು ಆ ದಿನದಂದು ಬೃಹತ್ ಮತಪ್ರದರ್ಶನಗಳಿಗೆ ಕರೆ ನೀಡಿವೆ. ಕಾರ್ಮಿಕರ ಸಾರ್ವತ್ರಿಕ ಮುಷ್ಕರವು ರೈತರ ಈ ಸೌಹಾರ್ದ ಕ್ರಮಗಳ ಜೊತೆಗೆ, ದುಡಿಯುವ ಜನರನ್ನು ವಿಭಜಿಸುವ ಮತ್ತು ದ್ವೇಷವನ್ನು ಹರಡುವ ಪ್ರಯತ್ನಗಳ ವಿರುದ್ಧ ಅವರ ಐಕ್ಯತೆಯನ್ನು ಬಲಪಡಿಸಲು ಸಹಾಯ ಮಾಡುತ್ತದೆ ಎಂದಿರುವ ಎಡಪಕ್ಷಗಳು, ಈ ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸುವಂತೆ ಜನರಿಗೆ ಕರೆ ನೀಡಿವೆ. ಈ ಮುಷ್ಕರವನ್ನು ಯಶಸ್ವಿಗೊಳಿಸಲು ಸಕ್ರಿಯವಾಗಿ ಪ್ರಚಾರ ಮಾಡಿ ದೊಡ್ಡ ಸಂಖ್ಯೆಯಲ್ಲಿ ಸಜ್ಜುಗೊಳ್ಳುವಂತೆ ತಮ್ಮೆಲ್ಲ ಘಟಕಗಳಿಗೆ ಕರೆ ನೀಡಿವೆ.

ಒಂದು ಆಳವಾದ ಸಂಚು- ಬಿಹಾರ ಸಿಪಿಐ(ಎಂ)

ಆತುರಾತುರವಾಗಿ ಚುನಾವಣಾ ಪಟ್ಟಿಯ ಪರಿಷ್ಕರಣೆಯ ಈ ಕಾರ್ಯಕ್ರಮವನ್ನು ಆರಂಭಿಸಿರುವ ಬಗ್ಗೆ ಸಿಪಿಐ(ಎಂ) ಬಿಹಾರ ರಾಜ್ಯಸಮಿತಿ ಬಲವಾಗಿ ಖಂಡಿಸಿದೆ. ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತಗೆದುಕೊಳ್ಳದೆ ಈ ರೀತಿಯ ಕಾರ್ಯಕ್ರಮ ಆರಂಭಿಸಿರುವುದು ಪ್ರಜಾಪ್ರಭುತ್ವ-ವಿರೋಧಿ ಮಾತ್ರವಲ್ಲ, ಸಂಪೂರ್ಣವಾಗಿ ಅವ್ಯಾವಹಾರಿಕವೂ ಆಗಿದೆ ಎಂದು ಅದು ಹೇಳಿದೆ.

ಮತದಾರರು ತಮ್ಮ ಪೌರತ್ವವನ್ನು ಸಾಬೀತುಪಡಿಸಲು ತಮ್ಮ ಪ್ರಮಾಣ ಪತ್ರವನ್ನು ಮಾತ್ರವಲ್ಲ, ತಮ್ಮ ತಂದೆ-ತಾಯಿಯರ ಪ್ರಮಾಣ ಪತ್ರಗಳನ್ನೂ ಕೊಡಬೇಕು. ಬಿಹಾರದಂತಹ ಇಂದು ಕೂಡ ಜನಗಳಿಗೆ ಇರಲು ಸರಿಯಾದ ಮನೆಯೂ ಇರದಂತಹ, ಮಳೆಗಾಲದಲ್ಲಿ ಮನೆ ಸಾಮಾನುಗಳೆಲ್ಲ ಒದ್ದೆಯಾಗಿ ಹೋಗುವಂತಹ ಹಿಂದುಳಿದ ಪ್ರದೇಶಗಳಲ್ಲಿ ಜನರ ಬಳಿ ಎಂತಹ ಪ್ರಮಾಣ ಪತ್ರ ಇರಲು ಸಾಧ್ಯ ಎಂದು ರಾಜ್ಯ ಸಮಿತಿ ಪ್ರಶ್ನಿಸಿದೆ.

ಕಂಠಮಟ್ಟ ಭ್ರಷ್ಟಾಚಾರದಲ್ಲಿ ಮುಳುಗಿರುವ ಸರಕಾರೀ ಇಲಾಖೆ ಯಾವ ರೀತಿಯಲ್ಲಿ ಜನಗಳಿಗೆ ತೊಂದರೆ ಕೊಡುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಬಿಹಾರ ಸರಕಾರದ ಭೂಸರ್ವೇಕ್ಷಣೆ ಕಾಗದಪತ್ರಗಳು ಜನಸಾಮಾನ್ಯರ ಬಳಿಯೂ ಇಲ್ಲ, ಸರಕಾರದ ಬಳಿಯೂ ಇಲ್ಲ ಎಂಬ ಕಾರಣಕ್ಕಾಗಿಯೇ ತಾನೇ ನಿಂತುಹೋಗಿರುವುದು: ಏನಾದರೂ ಕಾಗದ-ಪತ್ರಗಳಿದ್ದರೂ ತಿಂಗಳಾನುಗಟ್ಟಲೆ ಕಚೇರಿಗಳಿಗೆ ತಿರುಗಾಡಿದ ನಂತರವೇ ಮತ್ತು ಕಾಣಿಕೆ ಸಲ್ಲಿಸಿದ ಮೇಲೆಯೇ ಏನಾದರೂ ಸಿಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸರಿಯಾಗಿ ಚುನಾವಣೆಯ ಮೊದಲು ಈ ಕೆಲಸ ಮಾಡುವುದರ ಅರ್ಥ ಮತದಾರ ಪಟ್ಟಿಗಳಿಂದ ಬಡವರನ್ನು ಹೊರಹಾಕುವುದು ಎಂದಷ್ಟೇ ಆಗುತ್ತದೆ.

ಈ ಆಟ ಕೂಡ ಹರಿಯಾಣ ಮತ್ತು ಮಹಾರಾಷ್ಟ್ರದಲ್ಲಿ ನಡೆಸಿದಂತೆಯೇ ಇರುವಂತೆ ಕಾಣುತ್ತದೆ ಎಂದು ಸಂದೇಹ ವ್ಯಕ್ತಪಡಿಸಿರುವ ಸಿಪಿಐ(ಎಂ) ಬಿಹಾರ ರಾಜ್ಯಸಮಿತಿಯು, ಈ ಪರಿಷ್ಕರಣೆಯ ಕೆಲಸವನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಮತದಾರರ ಪಟ್ಟಿಗಳಲ್ಲಿ ಹೆಸರುಗಳನ್ನು ಸೇರಿಸುವ ಅಥವ ತೆಗೆಯುವ ಈಗ ಜಾರಿಯಲ್ಲಿರುವ ಪ್ರಕ್ರಿಯೆಯನ್ನೇ ಮುಂದುವರೆಸಬಹುದು ಎಂದು ಚುನಾವಣಾ ಆಯೋಗವನ್ನು ಕೋರಿದೆ.

ಆರೆಸ್ಸೆಸ್‌ನ ನಿಜ ಆಶಯ ಬಟ್ಟಬಯಲಾಗಿದೆ

ಭಾರತೀಯ ಸಂವಿಧಾನದ ಪೀಠಿಕೆಯಿಂದ 'ಸಮಾಜವಾದಿ' ಮತ್ತು 'ಜಾತ್ಯತೀತ' ಪದಗಳನ್ನು ತೆಗೆದುಹಾಕಲು ಆರ್‌ಎಸ್‌ಎಸ್ ಪ್ರಧಾನ ಕಾರ್ಯದರ್ಶಿ ಮಾಡಿರುವ ಪ್ರಸ್ತಾಪವನ್ನು ಸಿಪಿಐ(ಎಂ) ಬಲವಾಗಿ ಖಂಡಿಸುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ. ಈ ಪ್ರಸ್ತಾಪವು ಸಂವಿಧಾನವನ್ನು ಬುಡಮೇಲು ಮಾಡುವ ಆರ್‌ಎಸ್‌ಎಸ್‌ನ ದೀರ್ಘಕಾಲೀನ ಉದ್ದೇಶವನ್ನು ಮತ್ತು ತನ್ನ ಹಿಂದುತ್ವ ಯೋಜನೆಯನ್ನು ಅನುಸರಿಸುವ ಸಲುವಾಗಿ ಭಾರತವನ್ನು ಒಂದು 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ಅದರ ಆಶಯವನ್ನು ಬಯಲಿಗೆ ತಂದಿದೆ ಎಂದು ಅದು ಹೇಳಿದೆ.

ಭಾರತೀಯ ಸಂವಿಧಾನವು ನಮ್ಮ ಐತಿಹಾಸಿಕ ವಸಾಹತುಶಾಹಿ-ವಿರೋಧಿ ಸ್ವಾತಂತ್ರ್ಯ ಹೋರಾಟದ ವಿವಿಧ ಧಾರೆಗಳಿಂದ ಬಂದ ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರ ಆಕಾಂಕ್ಷೆಗಳನ್ನು ಸಾಕಾರಗೊಳಿಸುತ್ತದೆ. 'ಸಮಾಜವಾದ' ಮತ್ತು 'ಜಾತ್ಯತೀತತೆ'ಯನ್ನು ಪೀಠಿಕೆಯಲ್ಲಿ ಸೇರಿಸುವುದು ಮನಬಂದಂತೆ ಮಾಡುವ ಸೇರ್ಪಡೆಯಲ್ಲ; ಇದು ಮಹಾನ್ ಶಹೀದ್ ಭಗತ್ ಸಿಂಗ್ ಮತ್ತು ಅವರ ಒಡನಾಡಿಗಳಂತಹ ಸ್ವಾತಂತ್ರ್ಯ ಹೋರಾಟಗಾರರು ಯಾವ ಮೂಲ ಮೌಲ್ಯಗಳಿಗಾಗಿ ತಮ್ಮ ಪ್ರಾಣಗಳನ್ನು ತ್ಯಾಗ ಮಾಡಿದರೋ ಅದನ್ನು ಪ್ರತಿಬಿಂಬಿಸುತ್ತದೆ. ಅವರ ಆದರ್ಶಗಳು ಸಂವಿಧಾನದ ಪ್ರತಿಯೊಂದು ನಿಬಂಧನೆಯಲ್ಲಿ ಹಾಸುಹೊಕ್ಕಾಗಿವೆ ಮತ್ತು ಈ ಪದಗಳ ಸೇರ್ಪಡೆ ಆ ಪರಂಪರೆಯನ್ನು ದೃಢಪಡಿಸುತ್ತದೆಯಷ್ಟೇ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಸ್ವಾತಂತ್ರ್ಯ ಚಳವಳಿಯಲ್ಲಿ ಯಾವುದೇ ಪಾತ್ರ ವಹಿಸದ ಆರ್‌ಎಸ್‌ಎಸ್ ಈಗ ಈ ಮೂಲಾಧಾರ ತತ್ವಗಳನ್ನು ತೆಗೆದುಹಾಕಬೇಕೆಂದು ಪ್ರತಿಪಾದಿಸುವುದು ಪರಮ ಬೂಟಾಟಿಕೆಯಾಗಿದೆ. ನಮ್ಮ ಹುತಾತ್ಮರು ಎತ್ತಿ ಹಿಡಿದ ಮೌಲ್ಯಗಳನ್ನು ಅದು ಸಹಿಸುವುದಿಲ್ಲ ಎಂಬುದು ಅದರ ಪ್ರತಿಗಾಮಿ, ಜನವಿರೋಧಿ ಮತ್ತು ವಿಭಜಕ ಸಿದ್ಧಾಂತವನ್ನು ಬಯಲಿಗೆಳೆಯುತ್ತದೆ.

ನಮ್ಮ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲಾದ ಮೂಲ ಮೌಲ್ಯಗಳನ್ನು ಬದಲಾಯಿಸುವ ಯಾವುದೇ ಪ್ರಯತ್ನವನ್ನು ಸಿಪಿಐ(ಎಂ) ದೃಢವಾಗಿ ವಿರೋಧಿಸುತ್ತದೆ ಎಂದಿರುವ ಪೊಲಿಟ್‌ಬ್ಯುರೊ ಜನರು ಜಾಗರೂಕರಾಗಿರಬೇಕು ಮತ್ತು ಆರ್‌ಎಸ್‌ಎಸ್ ಮತ್ತು ಅದರ ಪೋಷಣೆಯಲ್ಲಿರುವ ಬಿಜೆಪಿಯ ಇಂತಹ ಎಲ್ಲಾ ಪ್ರಯತ್ನಗಳನ್ನು ದೃಢನಿಶ್ಚಯದಿಂದ ವಿರೋಧಿಸಬೇಕು ಎಂದು ಮನವಿ ಮಾಡಿದೆ.

ಹಟ್ಟಿ ಚಿನ್ನದ ಗಣಿ ಕಾರ್ಮಿಕ ಸಂಘದ.... ಪುಟ 5 ರಿಂದ

ಹಿರಿಯ ಕಾರ್ಮಿಕ ಮುಖಂಡರು ಹಾಗೂ ಎಐಟಿಯುಸಿ ನೇತೃತ್ವದಲ್ಲಿ ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದ ಕಾಂ.ಎಸ್.ಎಂ.ಶಫೀ ಹಾಗೂ ಅವರ ಬೆಂಬಲಿಗರು ಸಿಐಟಿಯು ರಾಜ್ಯ ನಾಯಕತ್ವವನ್ನು ಭೇಟಿ ಮಾಡಿದರು. ಚುನಾವಣೆಯನ್ನು ಅವರ ನೇತೃತ್ವದಲ್ಲೇ ನಡೆಸುವುದು ಹಾಗೂ ಸಿಐಟಿಯು ರಾಜ್ಯ ನಾಯಕತ್ವ ಹಾಗೂ ಸ್ಥಳೀಯ ನಾಯಕರು ಕೂಡ ಅವರ ತಂಡದ ಭಾಗವಾಗಿ ಇರುವ ಬಗ್ಗೆ ಸಹಮತಕ್ಕೆ ಬರಲಾಯಿತು. ಬಳಿಕ ಸಿಐಟಿಯು ರಾಜ್ಯ ಸಮಿತಿಯಿಂದ ಕೆ.ಮಹಾಂತೇಶ ಅವರ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಲಾಯಿತು.

ಕಾರ್ಮಿಕ ನಾಯಕರೊಂದಿಗೆ ಭಾವನಾತ್ಮಕ ನಂಟು

ಲಿಂಗಸೂಗೂರು ತಾಲೂಕಿನ ಹಟ್ಟಿ ಹೈದ್ರಾಬಾದ್ ಕರ್ನಾಟಕದ ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ಪ್ರದೇಶ. ಹಟ್ಟಿಯ ಜನಸಂಖ್ಯೆ ಸುಮಾರು 40 ಸಾವಿರದಷ್ಟಿರಬಹುದು. ಇಲ್ಲಿ ಕಳೆದ ಏಳು ದಶಕಗಳಿಂದ ಕನಿಷ್ಟ ಮೂರು ತಲೆ ಮಾರು ಕುಟುಂಬಗಳು ಈ ಗಣಿ ಕೆಲಸದ ಜತೆ ಭಾವನಾತ್ಮಕ ನಂಟು ಹೊಂದಿವೆ. ಹೀಗಾಗಿ ಇಲ್ಲಿನ ಪ್ರತಿ ಚಟುವಟಿಕೆ ಹಾಗೂ ಹೋರಾಟಗಳ ಜತೆ ಅವರ ಸಂಬಂಧ ಬೆಸೆದುಕೊಂಡಿದೆ. ಇಲ್ಲಿ ಕೆಲಸ ಮಾಡುವ 3,400 ಕಾರ್ಮಿಕರಲ್ಲಿ ಬಹುಪಾಲು ದಲಿತರು ಮತ್ತು ಅಲ್ಪಸಂಖ್ಯಾತರೇ ಪ್ರಧಾನ. ಆರಂಭದಲ್ಲಿ ಬಹುಪಾಲು ಜನ ಶಿಕ್ಷಣದಿಂದ ವಂಚಿತರಾದ ಶ್ರಮಜೀವಿಗಳು. ಆದರೆ ಇತ್ತೀಚಿನ ವರ್ಷಗಳಲ್ಲಿ ವಿವಿಧ ರೀತಿಯ ಶಿಕ್ಷಣ ಪಡೆಯುತ್ತಿರುವವರು ಹಾಗೂ ರಾಜ್ಯ, ದೇಶ ಹಾಗೂ ವಿದೇಶಗಳಲ್ಲಿ ವಿವಿಧ ರೀತಿಯ ಕೆಲಸ ಮಾಡುವ ಯುವಕ ಯುವತಿಯರ ಸಂಖ್ಯೆ ಹೆಚ್ಚಾಗುತ್ತಿದೆ. ಇಲ್ಲಿ ಹಲವು ದಶಕಗಳಿಂದ ಒಡಮೂಡಿದ ಕಾರ್ಮಿಕ ಚಳವಳಿ ಜನರಲ್ಲಿ ಅರಿವನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಹೀಗಾಗಿ ತಮಗಾಗಿ ತಮ್ಮ ಬದುಕಿಗಾಗಿ ಶ್ರಮಿಸಿದ ಕಾರ್ಮಿಕ ನಾಯಕರನ್ನು ಇಲ್ಲಿ ಕಾರ್ಮಿಕರು ಅಕ್ಷರಶಃ ದೇವರಂತೆ ನಂಬಿ ಸ್ವತಃ ಅವರ ಸಮಾಧಿಗಳನ್ನು ಇಲ್ಲಿಯೇ ಮಾಡಿ ಅವರನ್ನು ನಿರಂತರವಾಗಿ ಸ್ಮರಿಸುತ್ತಿದ್ದಾರೆ. ಅದೇ ವೇಳೆಗೆ ಕೇವಲ ತೋರ್ಪಡೆಗಾಗಿ ಕೆಲಸ ಮಾಡಿದವರನ್ನು ಮುಲಾಜಿಲ್ಲದೆ ಸೋಲಿಸಿ ಸುಣ್ಣವಾಗಿಸಿದ್ದಾರೆ.

ಸಮರಶೀಲ ಚಳವಳಿಗಳು

ಈ ಪ್ರದೇಶದಲ್ಲಿ ಮೊದಲಿನಿಂದಲೂ ಸಿಪಿಐ(ಎಂ) ಹಾಗೂ ಅದರ ನೇತೃತ್ವದಲ್ಲಿ ರೈತ, ಕಾರ್ಮಿಕ, ಕೂಲಿಕಾರರು ಹಾಗೂ ಮಹಿಳಾ, ವಿದ್ಯಾರ್ಥಿ ಯುವಜನ ಚಳವಳಿಗಳು ಸಕ್ರಿಯವಾಗಿ ನೂರಾರು ಸಮರಶೀಲ ಚಳವಳಿಗಳನ್ನು ನಡೆಸುತ್ತಾ ಜನಮಾನಸದಲ್ಲಿ ಉಳಿದಿವೆ. ಈಗಲೂ ಹಟ್ಟಿ ಮತ್ತು ಲಿಂಗಸುಗೂರು ಹಾಗೂ ದೇವದುರ್ಗ ತಾಲೂಕಿನ ನಮ್ಮ ಸಾಮೂಹಿಕ ಮತ್ತು ವರ್ಗ ಸಂಘಟನೆಗಳು ನಡೆಸುತ್ತಿರುವ ಹತ್ತು ಹಲವು ಹೋರಾಟಗಳು ಇಲ್ಲಿ ಕಾರ್ಮಿಕರಿಗೆ ಸ್ಪೂರ್ತಿದಾಯಕವಾಗಿವೆ. ಈ ಚುನಾವಣೆಯಲ್ಲಿಯೂ ಆ ಎಲ್ಲ ಸಂಘಟನೆಗಳ ನಾಯಕರು ಹಾಗೂ ಕಾರ್ಯಕರ್ತರುಗಳು ಸಕ್ರಿಯವಾಗಿ ಮನೆ ಮನೆಗೆ ಹಳ್ಳಿ ಹಳ್ಳಿಗಳಿಗೆ ತೆರಳಿ ಈ ಚುನಾವಣೆಯಲ್ಲಿ ಸಿಐಟಿಯು ನೇತೃತ್ವದ ತಂಡವನ್ನು ಗೆಲ್ಲಿಸಲು ಮನವಿ ಮಾಡಿದರು.

ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘದ 2025–26ನೇ ಅವಧಿಗೆ ದಿನಾಂಕ: 21–06–2025 ರಂದು ನಡೆದ ಚುನಾವಣೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿ

ಕ್ರ.ಸಂ	ಅಭ್ಯರ್ಥಿಯ ಹೆಸರು (ಶ್ರೀ/ಶ್ರೀಮತಿ)	ಪಡೆದ ಮತಗಳು	ಚಿಹ್ನೆ	ಸ್ಥಾನ
01	ಮಹಾಂತೇಶ್ ಕೆ	944	ಬಂಡಿಗಾಲಿ	ಅಧ್ಯಕ್ಷ
02	ಚಂದ್ರಶೇಖರ್	1007	ಬಂಡಿಗಾಲಿ	ಉಪಾಧ್ಯಕ್ಷ
03	ತಿಪ್ಪಣ್ಣ	944	ತಕ್ಕಡಿ	
04	ಎಸ್.ಎಂ.ಶಫಿ	1014	ಬಂಡಿಗಾಲಿ	ಪ್ರಧಾನ ಕಾರ್ಯದರ್ಶಿ
05	ಸಿದ್ದಪ್ಪ ಮುಂಡರಗಿ	984	ಬಂಡಿಗಾಲಿ	ಕೋಶಾಧ್ಯಕ್ಷ
06	ಚಂದ್ರಶೇಖರ್	1048	ಬಂಡಿಗಾಲಿ	ಸಹಾಯಕ ಕೋಶಾಧ್ಯಕ್ಷ
07	ಜಮದಗ್ನಿ	946	ಬಂಡಿಗಾಲಿ	ಕಾರ್ಯದರ್ಶಿ
08	ಗೌಸ್ ಮಿಯಾ	899	ಬಂಡಿಗಾಲಿ	
09	ಮೊಹ್ಮದ್ ಅನೀಫ್	883	ಬಂಡಿಗಾಲಿ	
10	ಯಂಕೋಬ	874	ಬಂಡಿಗಾಲಿ	
11	ನಾಗರಾಜ	869	ಬಂಡಿಗಾಲಿ	
12	ರಮೇಶ ಬಾಬು ಎ	857	ಬಂಡಿಗಾಲಿ	
13	ಗುರುರಾಜ	270	ಆಕಳು	ಮಲ್ಲಪ್ಪ ಶಾಫ್ಟ್
14	ಮೌನೇಶ	263	ಆಕಳು	
15	ಹಾಜಿಬಾಬಾ	246	ಆಕಳು	
16	ಗ್ಯಾನಪ್ಪ	151	ಆಕಳು	ಸೆಂಟ್ರಲ್ ಶಾಫ್ಟ್
17	ಹನುಮಂತ ಗುರಿಕಾರ	149	ಬಂಡಿಗಾಲಿ	
18	ಅಮರೇಶ	88	ಆಕಳು	ವಿಲೇಜ್ ಶಾಫ್ಟ್
19	ಗುಂಡಪ್ಪ	123	ಬಂಡಿಗಾಲಿ	ತಾಂತ್ರಿಕ ವಿಭಾಗ "ಎ"
20	ಗಂಗಪ್ಪ	100	ತಕ್ಕಡಿ	ತಾಂತ್ರಿಕ ವಿಭಾಗ "ಬಿ"
21	ಎಂ.ಡಿ ಮುನಿರುದ್ದಿನ್	107	ತಕ್ಕಡಿ	ಲೋಹ ಇಲಾಖೆಯ
22	ಡಾ. ಕುಪ್ಪಣ್ಣ ತಲೆಹೊಡಕರ	148	ಆಕಳು	ಆಡಳಿತ
23	ಹನುಮಂತರಾಯ	49	ತಕ್ಕಡಿ	ಊಟಿ
24	ಉಮಾಪತಿ	106	ತಕ್ಕಡಿ	ಹೀರಾ-ಬುದ್ದಿನ್ನಿ
25	ಪೆಂಚಲಮ್ಮ	113	ತಕ್ಕಡಿ	ಆಡಳಿತ ಮಹಿಳೆ

ಕಾರ್ಮಿಕ ಅಧಿಕಾರಿ ಹಾಗೂ ಚುನಾವಣಾಧಿಕಾರಿಗಳು
ದಿ.ಹಟ್ಟಿ ಗೋಲ್ಡ್‌ಮೈನ್ಸ್-ಹಟ್ಟಿ
ತಾ|| ಲಿಂಗಸೂಗೂರು.



ಮಿಲಿಟರಿ ವೆಚ್ಚಗಳ ಏರಿಕೆಗೆ ಜನಕಲ್ಯಾಣ ವೆಚ್ಚಗಳಲ್ಲಿ ಇಳಿಕೆ

ನವ ಉದಾರವಾದಿ ಬಂಡವಾಳಶಾಹಿಯ ಬಿಕ್ಕಟ್ಟು ತನ್ನ ಪ್ರಾಬಲ್ಯಕ್ಕೆ ಒಂದು ಸವಾಲಾಗಿ ಪರಿಣಮಿಸಿರುವುದರಿಂದಾಗಿ, ಸಾಮ್ರಾಜ್ಯಶಾಹಿಯು ಜನ ಕಲ್ಯಾಣ ವೆಚ್ಚಗಳನ್ನು ಮತ್ತಷ್ಟು ಕಡಿತಗೊಳಿಸಿ ಮಿಲಿಟರಿ ವೆಚ್ಚಗಳತ್ತ ಸಾಗುವ ಬದಲಾವಣೆಯನ್ನು ತರುತ್ತಿದೆ. ಮುಂದುವರೆದ ದೇಶಗಳ ಬಂಡವಾಳಶಾಹಿಗಳು ದೇಶೀಯವಾಗಿಯೂ ಸಹ ದಶಕಗಳಿಂದ ಕಾಣದ ಒಂದು ಅಪಾಯಕಾರಿ ಪರಭಕ್ಷಕ ಮತ್ತು ಆಕ್ರಮಣಕಾರಿ ರೂಪವನ್ನು ಪಡೆದುಕೊಳ್ಳುತ್ತಿದ್ದಾರೆ. ಇತ್ತ ಭಾರತದ ಫ್ಯಾಸಿಸ್ಟ್–ತೆರನ ಆಳ್ವಿಕೆಯು ಉದ್ಯೋಗ ಖಾತ್ರಿ ಯೋಜನೆಯಂತಹ ಕಾರ್ಯಕ್ರಮಗಳಿಗೆ ಹಣ ಕೊಡದೆ ಅವುಗಳನ್ನು ಸೊರಗಿಸುತ್ತಿದ್ದರೂ ಸಹ, ಮಿಲಿಟರಿ ವೆಚ್ಚವನ್ನು ಹೆಚ್ಚಿಸುವ ಎಲ್ಲ ಪ್ರಯತ್ನಗಳನ್ನು ಮಾಡುತ್ತದೆ. ಇದು ಟ್ರಂಪ್ ನಾಯಕತ್ವದ ಮುಂದುವರೆದ ಬಂಡವಾಳಶಾಹಿ ಏನು ಮಾಡಲು ಪ್ರಯತ್ನಿಸುತ್ತಿದೆಯೋ ಅದನ್ನು ಪ್ರತಿಬಿಂಬಿಸುತ್ತದೆ. ಇದರ ವಿರುದ್ಧ ನಾವು ಹೋರಾಡಬೇಕಾಗಿದೆ.

ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್



ಯುರೋಪಿನ ದೇಶಗಳು ತಮ್ಮ ಮಿಲಿಟರಿ ವೆಚ್ಚಗಳಿಗೆ ಬೇಕಾಗುವ ಹಣದ ಅಂದಾಜನ್ನು ಇತ್ತೀಚೆಗೆ ಭಾರೀ ಪ್ರಮಾಣದಲ್ಲಿ ಏರಿಕೆ ಮಾಡಿಕೊಂಡಿವೆ ಮತ್ತು ಈ ಕ್ರಮವನ್ನು ಉಳಿದ ದೇಶಗಳು ಅನುಸರಿಸುತ್ತಿರುವುದು ಕಂಡುಬರುತ್ತಿದೆ. ಈ ಮಿಲಿಟರಿ ವೆಚ್ಚಗಳು ಏನನ್ನು ಒಳಗೊಂಡಿವೆ ಎಂಬುದರ ಆಧಾರದ ಮೇಲೆ ಭಿನ್ನ ಭಿನ್ನವಾದ ಅಂದಾಜುಗಳಿವೆ. ನಮ್ಮ ವಿಶ್ಲೇಷಣೆಗಾಗಿ ಸ್ಟಾಕ್‌ಹೋಂನಲ್ಲಿರುವ ಅಂತಾರಾಷ್ಟ್ರೀಯ ಶಾಂತಿ ಸಂಶೋಧನಾ ಸಂಸ್ಥೆಯ ಅಂದಾಜುಗಳನ್ನು ತೆಗೆದುಕೊಳ್ಳೋಣ. ಈ ಸಂಸ್ಥೆಯ ಪ್ರಕಾರ, ಕಳೆದ ಹತ್ತು ವರ್ಷಗಳಿಂದಲೂ ಸತತವಾಗಿ ಪ್ರತಿ ವರ್ಷವೂ ನಿಜ ಮಿಲಿಟರಿ ವೆಚ್ಚಗಳ ಏರಿಕೆ ಕಂಡುಬರುತ್ತದೆ. 2024ರ ಈ ವೆಚ್ಚಗಳು ಅದರ ಹಿಂದಿನ ವರ್ಷಕ್ಕಿಂತಲೂ ಶೇ. 9.4ರಷ್ಟು ಏರಿಕೆಯಾಗಿವೆ. ಇದು ಶೀತಲ ಸಮರದ ಅಂತ್ಯದ ನಂತರದ ಯಾವುದೇ ವರ್ಷಕ್ಕೆ ಹೋಲಿಸಿದರೂ ಅತ್ಯಧಿಕ ವಾರ್ಷಿಕ ಹೆಚ್ಚಳವಾಗಿದೆ. 2024ರ ಜಾಗತಿಕ ಒಟ್ಟು ಮಿಲಿಟರಿ ವೆಚ್ಚವು 2.718 ಟ್ರಿಲಿಯನ್ ಡಾಲರ್‌ಗಳಷ್ಟಿತ್ತು.

ಈ ಭಾರೀ ಏರಿಕೆಯ ಹಿಂದಿರುವ ಎರಡು ಕಾರಣಗಳನ್ನು ಸ್ಪಷ್ಟವಾಗಿ ಗುರುತಿಸಬಹುದು: ಮೊದಲನೆಯದು, ಯುಎಸ್ ನೇತೃತ್ವದ ಮುಂದುವರೆದ ದೇಶಗಳ ಸಾಮ್ರಾಜ್ಯವು ಎದುರಿಸುತ್ತಿರುವ ಸವಾಲು ವಿಶೇಷವಾಗಿ, ಯುಎಸ್‌ನಲ್ಲಿ ವಸತಿ ಗುಳ್ಳೆ ಒಡೆದಾಗ ಆರಂಭವಾದ ನವ ಉದಾರವಾದಿ ಬಂಡವಾಳಶಾಹಿಯ ಬಿಕ್ಕಟ್ಟಿನೊಂದಿಗೆ ವಿಸ್ತಾರಗೊಳ್ಳುತ್ತಿದೆ. ಎರಡನೆಯದು, ಈ ಸಾಮ್ರಾಜ್ಯವನ್ನು ಉಳಿಸಿಕೊಂಡು ಬರುವ ಮಿಲಿಟರಿ ವೆಚ್ಚದ ಸಿಂಹಪಾಲನ್ನು ಇನ್ನು ಮುಂದೆ ಹೊರಲು ಸಿದ್ಧವಿಲ್ಲದ ಯುಎಸ್, ಅದರ ಯುರೋಪಿಯನ್ ಪಾಲುದಾರರು ಈ ಹೊರೆಯ ಒಂದು ಭಾಗವನ್ನು ವಹಿಸಿಕೊಳ್ಳಬೇಕೆಂದು ಬಯಸುತ್ತದೆ. ಈ ಕಾರಣಗಳಿಂದಾಗಿ ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮ ಮಿಲಿಟರಿ ವೆಚ್ಚಗಳನ್ನು ಹೆಚ್ಚಿಸಿಕೊಂಡಿವೆ. ಇತರ ದೇಶಗಳು ಈ ಸಾಮ್ರಾಜ್ಯಶಾಹಿ ತೇರಿನ ಗಾಲಿಯ ಕೆಳಗೆ ಬೀಳದಂತೆ ನೋಡಿಕೊಳ್ಳಲು ತಮ್ಮ ಮಿಲಿಟರಿ ವೆಚ್ಚಗಳನ್ನು ಹೆಚ್ಚಿಸಿಕೊಳ್ಳುವ ಒತ್ತಡಕ್ಕೆ ಒಳಗಾಗಿವೆ.

ಈ ಎರಡೂ ಕಾರಣಗಳ ಬಗ್ಗೆಯೂ ಒಂದೊಂದು ಮಾತನ್ನು ಹೇಳಬಹುದು. ಈ ಬಿಕ್ಕಟ್ಟು ಆರಂಭವಾಗುವ ಮೊದಲು ತಮ್ಮ ಪಾವತಿ ಶೇಷದ (ಚುಕ್ತಾ) ಚಾಲ್ತಿ ಖಾತೆಯಲ್ಲಿ ಅಧಿಕ ಕೊರತೆಯನ್ನು ಹೊಂದಿರದ ಅಥವಾ ಹೊಂದಿದ್ದ ಕೊರತೆಗಳನ್ನು ಹಾಗೂ ಹೀಗೂ ಒಳಹರಿಯುವ ಹಣದ ಮೂಲಕ ಸರಿದೂಗಿಸಿಕೊಳ್ಳಬಹುದಾಗಿದ್ದ ಅನೇಕ ದೇಶಗಳು ಬಿಕ್ಕಟ್ಟಿನ ನಂತರದಲ್ಲಿ ಸಂಕಷ್ಟದಲ್ಲಿ ಸಿಲುಕಿದವು. ಕೊರೊನಾ ಸಾಂಕ್ರಾಮಿಕದ ನಂತರ ಅವುಗಳ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ರಫ್ತು ಮಾರುಕಟ್ಟೆಗಳು ಕುಗ್ಗಿದ ಪರಿಣಾಮವಾಗಿ ಅವರ ಚಾಲ್ತಿ ಖಾತೆಯ ಕೊರತೆಗಳು ಹೆಚ್ಚಿದವು. ಹೂಡಿಕೆ ಮಾಡಿದ ಹಣವನ್ನು (ಬಂಡವಾಳ) ಹಿಂಪಡೆಯುವಲ್ಲಿ ತೊಂದರೆಯಾಗಬಹುದು ಎಂಬುದಾಗಿ ಹೂಡಿಕೆದಾರರು ಭೀತಿಗೊಳಗಾದ ಕಾರಣದಿಂದ ಹಣಕಾಸಿನ ಒಳಹರಿವು ನಿಂತು ಹೋಯಿತು. ಹಾಗಾಗಿ, ಈ ದೇಶಗಳು ಸಾಲದ ಬಿಕ್ಕಟ್ಟಿನಲ್ಲಿ ಮುಳುಗಿದವು. ಸಾಂಕ್ರಾಮಿಕದ ನಂತರ ಇದೇ ರೀತಿಯ ಇನ್ನೂ ತೀವ್ರ ತರದ ಸಂಕಷ್ಟಗಳಿಗೆ ಅನೇಕ ದೇಶಗಳು ಒಳಗಾದವು. ಈ ಬೆಳವಣಿಗೆಗಳು, ಯುಎಸ್ ನೇತೃತ್ವದ ಸಾಮ್ರಾಜ್ಯಶಾಹಿ ಶಕ್ತಿಗಳು ವಿಶ್ವದ ಮೇಲೆ ಹೇರಿದ ನವ ಉದಾರವಾದಿ ಅಂತಾರಾಷ್ಟ್ರೀಯ ವ್ಯವಸ್ಥೆಯ ಬಗ್ಗೆ ಭ್ರಮನಿರಸನ ಉಂಟುಮಾಡಿದವು.

ರಷ್ಯಾದ ಬೆದರಿಕೆಯ ಕುತಂತ್ರ

ಅದೇ ಕಾಲಮಾನದಲ್ಲಿ, ಯುಎಸ್ ನೇತೃತ್ವದ ಮುಂದುವರೆದ ದೇಶಗಳ ತಯಾರಿಕಾ ಚಟುವಟಿಕೆಗಳ ಸ್ಥಳಾಂತರದ ಮೂಲಕ ಕೊನೆಯಪಕ್ಷ ಆರಂಭದಲ್ಲಿ ಉತ್ತೇಜಿಸಲ್ಪಟ್ಟ ಚೀನಾ ಒಂದು ಗಮನಾರ್ಹವಾದ ಉನ್ನತ ಮಟ್ಟದ ಬೆಳವಣಿಗೆಯ ದರಗಳನ್ನು ದಾಖಲಿಸಿತು. ತನ್ನ ಚಾಲ್ತಿ ಖಾತೆಯಲ್ಲಿ ಮಿಗುತಾಯವನ್ನು ಒಂದು ಗಣನೀಯ ಪ್ರಮಾಣದಲ್ಲಿ ಹೊಂದಿದ್ದ ಚೀನಾ, ಬಿಕ್ಕಟ್ಟಿನಿಂದಾಗಿ ಸಂಕಷ್ಟದಲ್ಲಿರುವ ಮತ್ತು ಸಂಕಷ್ಟಕ್ಕೆ ಒಳಗಾಗಬಹುದಾದ ದೇಶಗಳಿಗೆ ಅಲ್ಪ ಸ್ವಲ್ಪ ಸಹಾಯವನ್ನು ಒದಗಿಸಲು ಮುಂದೆ ಬಂತು. ಚೀನಾದ ಈ ಕ್ರಮವು ಸಾಮ್ರಾಜ್ಯಶಾಹಿಯ ಪ್ರಾಬಲ್ಯಕ್ಕೆ ಒಂದು ಗಂಭೀರ ಸವಾಲನ್ನು ಒಡ್ಡಿತು. ಈ ಸವಾಲಿನಿಂದ ಬೆದರಿದ ಸಾಮ್ರಾಜ್ಯಶಾಹಿಯು ತನ್ನ ಮಿಲಿಟರಿ ಹಸ್ತಕ್ಷೇಪದ ಸಾಮರ್ಥ್ಯವನ್ನು ಬಲಪಡಿಸಿಕೊಳ್ಳ ಬಯಸುತ್ತದೆ.

ಅದೇ ಸಮಯದಲ್ಲಿ, ಬಿಕ್ಕಟ್ಟಿನ ಪರಿಣಾಮವಾಗಿ ತನ್ನ ಸ್ವಂತ ಅರ್ಥವ್ಯವಸ್ಥೆಯ ಮೇಲೆ ಉಂಟಾದ ಪರಿಣಾಮಗಳನ್ನು ನಿವಾರಿಸಿಕೊಳ್ಳಲು "ನನ್ನ ನೆರೆಯವನು ಹಾಳಾಗಲಿ" ನೀತಿಗಳ ಮೂಲಕ ಅಮೆರಿಕವು ಸುಂಕಗಳನ್ನು ಆಶ್ರಯಿಸುವ ರೀತಿಯಲ್ಲೇ, ಬಿಕ್ಕಟ್ಟಿನ ಪರಿಣಾಮವಾಗಿ ಅಮೆರಿಕವು ತನ್ನ ಮಿಲಿಟರಿ ವೆಚ್ಚದ ಒಂದು ಭಾಗವನ್ನು ಇತರ ಸಾಮ್ರಾಜ್ಯಶಾಹಿ ದೇಶಗಳ ಮೇಲೆ ಹೊರಿಸಬಯಸುತ್ತದೆ. ಈ ರೀತಿಯಲ್ಲಿ ಹೊರೆ ಇಳಿಸಿಕೊಳ್ಳುವ ಕ್ರಮಗಳು ಒಟ್ಟಾರೆಯಾಗಿ ಸಾಮ್ರಾಜ್ಯಶಾಹಿ ಜಗತ್ತಿನ ಒಟ್ಟು ಮಿಲಿಟರಿ ವೆಚ್ಚಗಳನ್ನು ಹೆಚ್ಚಿಸುತ್ತವೆ, ಏಕೆಂದರೆ, ಕನಿಷ್ಠ ಪಕ್ಷ ಭಾಗಶಃವಾಗಿಯಾದರೂ ಯುಎಸ್ ಮಿಲಿಟರಿ ರಕ್ಷಣೆಯಡಿಯಲ್ಲಿದ್ದ ಯುರೋಪ್ ಈಗ ಬೃಹತ್ ಮಿಲಿಟರಿ ವೆಚ್ಚವನ್ನು ತಾನೇ ಕೈಗೊಳ್ಳಬೇಕಾಗುತ್ತದೆ.

ಯುರೋಪಿನ ದೇಶಗಳು ರಷ್ಯಾದ ಆಕ್ರಮಣಕಾರಿ ಬೆದರಿಕೆಯನ್ನು ಮುಂದೊಡ್ಡುವ ಮೂಲಕ ತಮ್ಮ ಹೆಚ್ಚುವರಿ ಮಿಲಿಟರಿ ವೆಚ್ಚಗಳನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತವೆ. ಆದರೆ, ಈ ಬೆದರಿಕೆಯು ಎಷ್ಟರ ಮಟ್ಟಿಗೆ ನಿಜ ಎಂಬುದನ್ನು ಪರಿಶೀಲನೆಗೆ ಒಳಪಡಿಸುವುದಿಲ್ಲ. ಸೋವಿಯತ್ ಒಕ್ಕೂಟದ ಪತನದ ಸಮಯದಲ್ಲಿ ನ್ಯಾಟೋ ಮಿಲಿಟರಿ ಕೂಟದ ವ್ಯಾಪ್ತಿಯನ್ನು ಪೂರ್ವ ದಿಕ್ಕಿನಲ್ಲಿ ವಿಸ್ತರಣೆ ಮಾಡುವುದಿಲ್ಲ ಎಂದು ಕ್ಲಿಂಟನ್ ಆಡಳಿತವು ಸೋವಿಯತ್ ಒಕ್ಕೂಟದ ಅಂದಿನ ಅಧ್ಯಕ್ಷ ಮಿಖಾಯಿಲ್ ಗೋರ್ಬಚೋವ್ ಅವರಿಗೆ ನೀಡಿದ ಭರವಸೆಯ ಹೊರತಾಗಿಯೂ, ನ್ಯಾಟೋದ ವ್ಯಾಪ್ತಿಯನ್ನು ರಷ್ಯಾದ ಗಡಿಯವರೆಗೂ ವಿಸ್ತರಣೆ ಮಾಡಲಾಗಿದೆ. ಮಾತ್ರವಲ್ಲ, ಉಕ್ರೇನ್‌ನಲ್ಲಿ ಚುನಾಯಿತ ವಿಕ್ಟರ್ ಯಾನುಕೋವಿಚ್ ಸರ್ಕಾರದ ವಿರುದ್ಧ ಯುಎಸ್–ರೂಪಿಸಿದ ದಂಗೆಯ ಮೂಲಕ ಮಹಾ ಯುದ್ಧ ಸಮಯದ ನಾಜಿ ಸಹಯೋಗಿ ಸ್ಟೆಪನ್ ಬಂಡೇರಾ ಅವರ ಅನುಯಾಯಿಗಳನ್ನು ಒಳಗೊಂಡ ಒಂದು ಫ್ಯಾಸಿಸ್ಟ್ ಆಳ್ವಿಕೆಯನ್ನು ಉಕ್ರೇನ್‌ನಲ್ಲಿ ಸ್ಥಾಪಿಸಲಾಯಿತು. ಈ ಫ್ಯಾಸಿಸ್ಟ್ ಆಳ್ವಿಕೆಯು ರಷ್ಯನ್ ಮಾತನಾಡುವ ಉಕ್ರೇನ್‌ನ ಅಲ್ಪಸಂಖ್ಯಾತರನ್ನು ಹತ್ಯೆಗೈದಿತು ಮತ್ತು ನ್ಯಾಟೋ ಸದಸ್ಯತ್ವವನ್ನು ಕೇಳಿತು. ರಷ್ಯಾ, ಈ ಎಲ್ಲ ಬೆದರಿಕೆಯ ಕ್ರಮಗಳನ್ನೂ ಎದುರಿಸಬೇಕಾಯಿತು. ಹಾಗಾಗಿ, ಯುರೋಪಿನ ವಿರುದ್ಧ ರಷ್ಯಾವು ಆಕ್ರಮಣಕಾರಿಯಾಗಿದೆ ಎಂಬ ಮಾತುಗಳು ಸಾಮ್ರಾಜ್ಯಶಾಹಿಯ ಪ್ರಚಾರದ ವಸ್ತುವಾಗಿವೆಯೇ ವಿನಃ ವಾಸ್ತವವಲ್ಲ.

ಪ್ರಸ್ತುತದಲ್ಲಿ ರಷ್ಯಾವು ಒಂದು ಯುದ್ಧದಲ್ಲಿ ನಿಜಕ್ಕೂ ತೊಡಗಿಕೊಂಡಿದ್ದರೂ ಸಹ, 2024ರಲ್ಲಿ ರಷ್ಯಾದ ಒಟ್ಟು ಮಿಲಿಟರಿ ವೆಚ್ಚಗಳು 149 ಬಿಲಿಯನ್ ಡಾಲರಿನಷ್ಟಿರುವಾಗ, ಯುರೋಪಿನ ನ್ಯಾಟೋ ಸದಸ್ಯ ದೇಶಗಳ ಒಟ್ಟು ಮಿಲಿಟರಿ ವೆಚ್ಚವು 454 ಬಿಲಿಯನ್ ಡಾಲರುಗಳಷ್ಟಿದೆ. ಇದು ರಷ್ಯಾದ ಮಿಲಿಟರಿ ವೆಚ್ಚಕ್ಕಿಂತಲೂ ಮೂರು ಪಟ್ಟು ಹೆಚ್ಚಿಗೆ ಇದೆ ಎಂಬ ಅಂಶವು ಮಹತ್ವ ಹೊಂದಿದೆ. ಆದ್ದರಿಂದ, ಮಿಲಿಟರಿ ಉದ್ದೇಶಗಳಿಗಾಗಿ ರಷ್ಯಾಕ್ಕಿಂತ ಮೂರು ಪಟ್ಟು ಹೆಚ್ಚು ಖರ್ಚು ಮಾಡಲು ರಷ್ಯಾದ ಬೆದರಿಕೆ ಎಂಬುದಕ್ಕೆ ಮೊರೆಹೋಗುವ ಕ್ರಮವು ಹಾಸ್ಯಾಸ್ಪದವೂ ಹೌದು ಮತ್ತು ಒಂದು ಕುತಂತ್ರವೂ ಹೌದು. ಹಾಗೆ ನೋಡಿದರೆ ಯುರೋಪಿನ ದೇಶಗಳ ಮಿಲಿಟರಿ ವೆಚ್ಚಗಳು ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಲೆಕ್ಕಾಚಾರಗಳಿಂದ ಕೂಡಿವೆ.

ಜನಕಲ್ಯಾಣ ವೆಚ್ಚಗಳಲ್ಲಿ ಕಡಿತ ಖಚಿತ

ಈ ಸನ್ನಿವೇಶದಲ್ಲಿ ಕಳವಳಕಾರಿಯಾಗಿ ಕಾಣುವ ಒಂದು ಸಂಗತಿಯೆಂದರೆ, ಜರ್ಮನಿಯ ಮಿಲಿಟರಿ ವೆಚ್ಚವು ಹಿಂದಿನ ವರ್ಷಕ್ಕಿಂತಲೂ ಶೇ. 28ರಷ್ಟು ಏರಿಕೆಯಾಗಿದೆ. ಯುದ್ಧಾನಂತರದಲ್ಲಿ ತನ್ನನ್ನು ಪುನಃ ಶಸ್ತ್ರಸಜ್ಜಿತಗೊಳಿಕೊಳ್ಳುವ ಅವಕಾಶವಿಲ್ಲದಿದ್ದ ಪರಿಸ್ಥಿತಿಯಲ್ಲಿದ್ದ ಜರ್ಮನಿ, 2024ರಲ್ಲಿ ಯುರೋಪಿನ ದೇಶಗಳಲ್ಲೇ ಅತಿ ಹೆಚ್ಚು ಮತ್ತು ವಿಶ್ವದ ನಾಲ್ಕನೇ ಅತಿ ಹೆಚ್ಚು ಮಿಲಿಟರಿ ಖರ್ಚುಗಳನ್ನು ಕೈಗೊಳ್ಳುವ ಪ್ರಸ್ತುತ ಸ್ಥಿತಿಗೆ ತಲುಪಿರುವುದು ಒಂದು ಮಹತ್ವದ ಬದಲಾವಣೆಯೇ ಸರಿ. ನಾಜಿ ಭೂತಕಾಲವು ಮರುಕಳಿಸುವ ಲಕ್ಷಣಗಳನ್ನು ಜರ್ಮನಿ ತೋರಿಸುತ್ತಿರುವುದನ್ನು ಮತ್ತು ಅದರ ಕುಖ್ಯಾತ ಯುದ್ಧೋನ್ಮಾದದ ಇತಿಹಾಸವನ್ನು ಗಮನಿಸಿದರೆ, ಈ ವಿದ್ಯಮಾನವು ಅತ್ಯಂತ ಗಂಭೀರ ಪರಿಣಾಮಗಳಿಂದ ಕೂಡಿದ ಬೆಳವಣಿಗೆಯಾಗಿ ಕಾಣುತ್ತದೆ.

ಈ ಸಂದರ್ಭದಲ್ಲಿ ಉದ್ಭವಿಸುವ ನಿರ್ಣಾಯಕವಾದ ಒಂದು ಪ್ರಶ್ನೆ ಯಾವುದು ಎಂದರೆ: ಸಾಮ್ರಾಜ್ಯಶಾಹಿ ಜಗತ್ತಿನಲ್ಲಿ ಮಿಲಿಟರಿ ವೆಚ್ಚಗಳ ಈ ಏರಿಕೆ ಮತ್ತು ಅದನ್ನು ಇನ್ನೂ ಹೆಚ್ಚಿಸಲು ಬದ್ಧರು ಎಂಬ ಘೋಷಣೆಯನ್ನು ಗಮನಿಸಿದರೆ, ಈ ಮಿಲಿಟರಿ ವೆಚ್ಚಗಳಿಗೆ ಬೇಕಾಗುವ ಹಣವನ್ನು ಹೇಗೆ ಹೊಂದಿಸಿಕೊಳ್ಳಲಾಗುವುದು? ಬೂರ್ಜ್ವಾ ಸರ್ಕಾರಗಳ ಗ್ರಹಿಕೆಯಲ್ಲಿ, ಬಂಡವಾಳಗಾರರಿಗೆ ತೆರಿಗೆ ರಿಯಾಯಿತಿ ಒದಗಿಸುವ ಕ್ರಮವು ಪ್ರಸ್ತುತದಲ್ಲಿ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಒಂದು ಪ್ರಾಥಮಿಕ ಸಾಧನವಾಗಿ ತೋರುವುದರಿಂದ, ಸ್ವಲ್ಪ ಮಟ್ಟಿನ ವಿತ್ತೀಯ ಕೊರತೆಯು ಅನಿವಾರ್ಯವಾಗಿ ಉಂಟಾಗುತ್ತದೆಯಾದರೂ, ಜನಕಲ್ಯಾಣ ವೆಚ್ಚಗಳ ಕಡಿತವಾಗುವುದು ಖಚಿತ ಎಂಬುದಂತೂ ಸ್ಪಷ್ಟವಾಗುತ್ತದೆ.

"ದೊಡ್ಡ ಸುಂದರ ಮಸೂದೆ" ಎಂದು ಕರೆಯಲಾದ ಡೊನಾಲ್ಡ್ ಟ್ರಂಪ್ ಅವರ ವಿತ್ತೀಯ ಕಾರ್ಯಸೂಚಿಯನ್ನು ನೋಡಿದಾಗ ಜನ ಕಲ್ಯಾಣ ವೆಚ್ಚಗಳು ಕಡಿತಗೊಳ್ಳುವ ಅಂಶವು ಸ್ಪಷ್ಟವಾಗುತ್ತದೆ. ಈ ಮಸೂದೆಯನ್ನು ಯುಎಸ್ ಕಾಂಗ್ರೆಸ್ ಅಂಗೀಕರಿಸಿದೆ ಮತ್ತು ಅದು ಸೆನೆಟ್ ಅನುಮೋದನೆಗಾಗಿ ಕಾಯುತ್ತಿದೆ. ಈ ಮಸೂದೆಯ ಪ್ರಕಾರ ಮುಂದಿನ ಹತ್ತು ವರ್ಷಗಳಲ್ಲಿ ತೆರಿಗೆ ರಿಯಾಯಿತಿಗಳು 3.76 ಟ್ರಿಲಿಯನ್ ಡಾಲರುಗಳಷ್ಟಿರುತ್ತವೆ ಮತ್ತು ಒಟ್ಟು ವೆಚ್ಚ ಕಡಿತ ಕಡಿತಗಳು 1.3 ಟ್ರಿಲಿಯನ್ ಡಾಲರುಗಳಷ್ಟಿರುತ್ತವೆ. ಈ ಕ್ರಮದಿಂದಾಗಿ ಸರ್ಕಾರದ ಒಟ್ಟು ಸಾಲವು (ಈ ಸಾಲದ ಮೇಲಿನ ಬಡ್ಡಿಯನ್ನು ಲೆಕ್ಕ ಹಾಕದೆ) 2.5 ಟ್ರಿಲಿಯನ್ ಡಾಲರ್‌ಗಳಿಗೆ ಏರಿಕೆಯಾಗುತ್ತದೆ. ಈ ಮಸೂದೆಯಡಿಯಲ್ಲಿ ತೆರಿಗೆ ರಿಯಾಯಿತಿಗಳನ್ನು ಎಲ್ಲ ಜನ ಗುಂಪುಗಳಿಗೂ ನೀಡಲಾಗುತ್ತದೆಯಾದರೂ, ತೆರಿಗೆಯ ಪ್ರಸ್ತಾಪಗಳನ್ನು ಮತ್ತು ಖರ್ಚುಗಳ ಪ್ರಸ್ತಾಪಗಳನ್ನು ಒಟ್ಟಿಗೆ ತೆಗೆದುಕೊಂಡು ನೋಡಿದರೆ, ರಿಯಾಯಿತಿಗಳ ಅತಿ ದೊಡ್ಡ ಫಲಾನುಭವಿಗಳು ಶ್ರೀಮಂತರಾಗಿರುತ್ತಾರೆ ಮತ್ತು ಬಡವರ ಸ್ಥಿತಿ–ಗತಿಗಳು ಸಂಪೂರ್ಣವಾಗಿ ಹದಗೆಡುತ್ತವೆ. ಹಾಗೆ ನೋಡಿದರೆ, ಪ್ರಧಾನವಾಗಿ ಆರೋಗ್ಯ–ಸೌಲಭ್ಯಗಳ ಕಡಿತ ಮತ್ತು ಆರೋಗ್ಯ ವಿಮೆ ಶುಲ್ಕಗಳ ಹೆಚ್ಚಳದ ಕಾರಣದಿಂದಾಗಿ, ಮುಂಬರುವ ವರ್ಷಗಳಲ್ಲಿ ಜನಸಂಖ್ಯೆಯ ಮೇಲ್ತುದಿಯ ಶೇ.10ರಷ್ಟು

ಪುಟ 15 ಕ್ಕೆ

ಇಸ್ರೇಲ್–ಇರಾನ್ ಯುದ್ಧ.......

ಪುಟ 16 ರಿಂದ

ಯ ಅಣುಶಕ್ತಿ ಏಜೆನ್ಸಿ– ಐಎಇಎ) ಪರೀಕ್ಷಣೆ ತಪ್ಪಿಸಿ NPT (ಅಣ್ವಸ್ತ್ರ ಪ್ರಸರಣ ನಿಷೇಧ–ಎನ್‌ಪಿಟಿ) ಒಪ್ಪಂದ ಮುರಿದು, ಯುರೇನಿಯಂ 90% ಶುದ್ಧೀಕರಣ ಸಾಧಿಸಿದ್ದು ಅಣ್ವಸ್ತ್ರ ತಯಾರಿಕೆ, ಕೆಲವೇ ದಿನಗಳ ದೂರದಲ್ಲಿದೆ.

2. ಇಸ್ರೇಲಿ ಪ್ರಭುತ್ವದ ಅಸ್ತಿತ್ವದ ವಿರುದ್ಧ ಇರಾನ್ ನಿರಂತರ ಬೆದರಿಕೆ ಹಾಕುತ್ತಿದ್ದು ತನ್ನ 'ಪ್ರಾಕ್ಸಿ ಭಯೋತ್ಪಾದಕ' ಸಂಘಟನೆಗಳ ಮೂಲಕ ನಿರಂತರ ಬೆದರಿಕೆ ಒಡ್ಡುತ್ತಿದೆ ಮತ್ತು
3. ಅಣ್ವಸ್ತ್ರ ಮತ್ತು ಕ್ಷಿಪಣಿ ಕ್ಷಮತೆಯ ಮೂಲಕ ಇಡೀ ಪಶ್ಚಿಮ ಏಶ್ಯಾ ಪ್ರದೇಶಕ್ಕೆ ಭದ್ರತಾ ಬೆದರಿಕೆ ಒಡ್ಡಿದೆ.

ಈ ಆಪಾದನೆಗಳಲ್ಲಿ ಎಷ್ಟು ಹುರುಳಿದೆ?

ಅಂತರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ (IAEA-LJEJ)ಮತ್ತು ಯುಎಸ್‌ನ ರಾಷ್ಟ್ರೀಯ ಗೂಢಚಾರ ಸಂಸ್ಥೆ ಯುಎಸ್ ಪಾರ್ಲಿಮೆಂಟಿಗೆ, ಇರಾನ್ ಅಣ್ವಸ್ತ್ರ ತಯಾರಿಕೆಯ ಯೋಜನೆ ಹೊಂದಿಲ್ಲವೆಂದು ವರದಿ ಮಾಡಿವೆ. ಇರಾನ್ ತನ್ನ ಅಣುಶಕ್ತಿ ಯೋಜನೆ ಶಾಂತಿಯುತ ಬಳಕೆಗೆ ಮಾತ್ರ ಸೀಮಿತವಾಗಿದೆ. ಎನ್‌ಪಿಟಿ ಒಪ್ಪಂದದ ಪ್ರಕಾರ ನಡೆದುಕೊಳ್ಳಲಾಗಿದೆ. ಐದು ಭದ್ರತಾ ಸಮಿತಿಯ ಶಾಶ್ವತ ಸದಸ್ಯರು ಮತ್ತು ಜರ್ಮನಿಯ ಜತೆ 2015ರಲ್ಲಿ ಮಾಡಿದ JCPOA ಒಪ್ಪಂದದ ಪ್ರಕಾರ ಇರಾನ್ ನಡೆದುಕೊಂಡಿದೆ. ಈ ಒಪ್ಪಂದದ ಪ್ರಕಾರ ಯುಎಸ್ ನಡೆದುಕೊಂಡಿಲ್ಲ. ಇರಾನ್ ಮೇಲೆ ಹಾಕಿದ್ದ ದಿಗ್ಬಂಧನವನ್ನು ತೆಗೆದು ಹಾಕಿಲ್ಲ. ಮಾತ್ರವಲ್ಲ, 2018ರಲ್ಲಿ ಟ್ರಂಪ್ ಮೊದಲ ಅಧ್ಯಕ್ಷಗಿರಿಯ ಅವಧಿಯಲ್ಲಿ ಏಕಪಕ್ಷೀಯವಾಗಿ ಒಪ್ಪಂದದಿಂದ ಹೊರನಡೆದಿದೆ. ಆದರೂ ಇರಾನ್ 2023ರ ವರೆಗೆ ಐಎಇಎ ಪರೀಕ್ಷಣೆ ಮುಂತಾದ ಷರತ್ತುಗಳನ್ನು ಪಾಲಿಸುತ್ತಿದ್ದು, ಆ ನಂತರವೇ ಐಎಇಎ ತನಿಖೆಯನ್ನು ನಿಲ್ಲಿಸಿದೆ. ಬದಲಿಗೆ, ಐಎಇಎ ಪರೀಕ್ಷಕರು ಗೂಢಚಾರರಂತೆ ವರ್ತಿಸಿದ್ದು, ಅವರ ಜತೆ ವ್ಯವಹರಿಸಿದ ಇರಾನಿ ವಿಜ್ಞಾನಿಗಳ ವೈಯಕ್ತಿಕ ವಿವರಗಳನ್ನು ಯುಎಸ್ ಮತ್ತು ಇಸ್ರೇಲಿ ಸರಕಾರಗಳಿಗೆ ಕಳಿಸಿವೆ. ಅವರ ಜತೆ ವ್ಯವಹರಿಸಿದ ಮತ್ತು ಇತ್ತೀಚಿನ ಅಣುಶಕ್ತಿ ಒಪ್ಪಂದದ ಮಾತುಕತೆಗಳಲ್ಲಿ ಭಾಗವಹಿಸಿದ ವಿಜ್ಞಾನಿಗಳನ್ನೇ ಹತ್ಯೆ ಮಾಡಲಾಗಿದೆ. ದಾಳಿಯ 2–3 ದಿನಗಳ ಮೊದಲಷ್ಟೇ ಇರಾನ್ ಕೆಲವು ನಿಯಮಗಳನ್ನು ಉಲ್ಲಂಘಿಸಿದೆ ಎಂದು ಐಎಇಎ ವರದಿ ನೀಡಿದ್ದು ಮತ್ತು ಅಣು ಸ್ಥಾವರಗಳ ಮೇಲೆ ದಾಳಿಯ ಬಗ್ಗೆ ಖಂಡಿಸದೆ ಮೌನವಾಗಿರುವುದು ಅದು ಯುಎಸ್–ಇಸ್ರೇಲಿ ಕೂಟದ ಅಂಗದಂತೆ ವರ್ತಿಸಿದೆ ಎಂದು ಇರಾನ್ ಆಪಾದಿಸಿದೆ.

ಚೋದ್ಯದ ವಿಷಯವೆಂದರೆ ಇಸ್ರೇಲ್ ಬಳಿ 10ಕ್ಕೂ ಹೆಚ್ಚು ಅಣ್ವಸ್ತ್ರಗಳಿವೆ ಮತ್ತು ಅದು ಎನ್‌ಪಿಟಿಗೆ ಸಹಿ ಹಾಕಿಲ್ಲ ಅಥವಾ ತನ್ನ ಅಣು ಸ್ಥಾವರಗಳನ್ನು ಐಎಇಎ ಪರೀಕ್ಷಣೆಗೆ ಒಳಪಡಿಸಿಲ್ಲ, ಯುಎಸ್‌ನ ತಾಂತ್ರಿಕ ಸಹಾಯದಿಂದಲೇ ಅದು ಅಣು ಸ್ಥಾವರಗಳನ್ನು ಮತ್ತು ಅಣ್ವಸ್ತ್ರಗಳನ್ನು ಹೊಂದಿದೆ. ಇಂತಹ ಇಸ್ರೇಲ್ ಮತ್ತು ಯುಎಸ್, ಇರಾನ್ ಎನ್‌ಪಿಟಿ ಉಲ್ಲಂಘಿಸಿದೆ ಮತ್ತು ಐಎಇಎ ಜತೆ ಸಹಕರಿಸುತ್ತಿಲ್ಲವೆಂದು ಅಣು ಸ್ಥಾವರಗಳ ಮೇಲೆ ವಿನಾಶಕಾರಿ ದಾಳಿ ಮಾಡಿರುವುದಕ್ಕಿಂತ ಹೆಚ್ಚಿನ ಕ್ರೂರ ವ್ಯಂಗ್ಯ ಇನ್ನೊಂದಿಲ್ಲ.

ಇರಾನ್ ಪ್ಯಾಲೆಸ್ಟೀನ್‌ನ ಹಮಾಸ್, ಲೆಬನಾನ್‌ನ ಹೆಜಬೊಲ್ಲಾ ಮತ್ತು ಯೆಮೆನ್‌ನ ಹೌತಿ ಸಂಘಟನೆಗಳನ್ನು ಬಳಸಿ ಇಸ್ರೇಲ್ ವಿರುದ್ಧ ಸತತವಾಗಿ ಪ್ರಾಕ್ಸಿ ಯುದ್ಧ ನಡೆಸುತ್ತಿದೆ ಎಂಬುದು ಸಹ ನಿಜವಲ್ಲ. ಹಮಾಸ್, ಹೆಜಬೊಲ್ಲಾ ಮತ್ತು ಹೌತಿ–ಇವು ಆಯಾ ದೇಶಗಳಲ್ಲಿ ಜನತೆಯ ಪರವಾಗಿ ಹೋರಾಡುವ ಸಂಘಟನೆಗಳು. ಇವುಗಳಿಗೆ ಇರಾನ್ ಬೆಂಬಲ ಕೊಡುತ್ತಿದೆ ಎನ್ನುವುದು ನಿಜ. ಆದರೆ ಯುಎಸ್–ಇಸ್ರೇಲಿ ಕೂಟ ಈ ದೇಶಗಳ ಜನತೆಯ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ದಮನ ಮಾಡುತ್ತಿವೆ ಎನ್ನುವುದು ಅಷ್ಟೇ ನಿಜ. ಅವು ಸಶಸ್ತ್ರ ಗೆರಿಲ್ಲಾ ಹೋರಾಟಕ್ಕಿಳಿಯಲು ಇಸ್ರೇಲಿ ಹಿಂಸಾಚಾರ, ದಮನಗಳೇ ಕಾರಣ.

ಇರಾನ್ ಈ ಪ್ರದೇಶದ ದೇಶಗಳ ಭದ್ರತೆಗೆ ಬೆದರಿಕೆ ಎನ್ನುವ ಆಪಾದನೆ ಸಹ ಅಷ್ಟೇ ಹಾಸ್ಯಾಸ್ಪದ. ಇರಾನ್ ಯಾವುದೇ ದೇಶದ ಮೇಲೆ ಯುದ್ಧ ಹೂಡಿಲ್ಲ. ಅದು ಭಾಗವಹಿಸಿದ ಇತ್ತೀಚಿನ ಯುದ್ಧವೆಂದರೆ 1980–88ರ ಇರಾಕ್–ಇರಾನ್ ಯುದ್ಧ. ಅದೂ ಇರಾಕ್ ಆಕ್ರಮಣದಿಂದ ಆರಂಭವಾಗಿತ್ತು. ಅದಕ್ಕೆ ಯುಎಸ್–ಇಸ್ರೇಲಿ ಕೂಟದ ಪ್ರಚೋದನೆ, ಬೆಂಬಲ ಎರಡೂ ಇತ್ತು. ಈ ಎರಡೂ ದೇಶಗಳು ಪರಸ್ಪರ ನಾಶ ಮಾಡಿ ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಳ್ಳುವ ಗುರಿಯಿತ್ತು. ಇರಾಕ್‌ಗೆ ನಾಟೋ ದೇಶಗಳು ನಿಷೇಧಿತ ರಾಸಾಯನಿಕ ಅಸ್ತ್ರಗಳನ್ನು ಕೊಟ್ಟಿದ್ದು. ಕೊನೆಗೆ ಇರಾನ್ ಮೇಲೆ ಅದನ್ನು ಬಳಸಿತು ಎಂದು ಆಪಾದನೆ ಆಡುವ ಡಬ್ಬಲ್–ಕ್ರಾಸ್ ಆಟ ಆವಾಗಲೂ ಆಡಿದ್ದವು.

ನಿಜವಾಗಿಯೂ ಈ ಪ್ರದೇಶದಲ್ಲಿನ ಪ್ರತಿ ದೇಶದ ಮೇಲೆ ಈಜಿಪ್ಟ್, ಕೊಲ್ಲಿ ದೇಶಗಳು, ಜೋರ್ಡಾನ್, ಲೆಬನಾನ್, ಸಿರಿಯಾ, ಯೆಮೆನ್, ಇರಾಕ್, ಇರಾನ್ ಹೀಗೆ ಎಲ್ಲ ದೇಶಗಳ ಮೇಲೆ ಇಸ್ರೇಲ್ ಯುದ್ಧ ಮಾಡಿದೆ. ಅತ್ಯಾಧುನಿಕ ಆಕ್ರಾಮಕ ವೈಮಾನಿಕ, ಸೇನಾ ಬಲ ಮತ್ತು ಅಣ್ವಸ್ತ್ರಗಳನ್ನು ಹೊಂದಿದೆ. ಹೆಚ್ಚಿನವನ್ನು ಬಳಸಿದೆ ಕೂಡಾ. ಮೇಲಾಗಿ ಅದಕ್ಕೆ ಯುಎಸ್ ಮತ್ತು ನಾಟೋ ಕೂಟದ ಮಿಲಿಟರಿ ನೆಲೆಗಳ, ಯುದ್ಧ ನೌಕೆಗಳ ಬೆಂಬಲವಿದೆ.

ಇರಾನ್ ಸರಕಾರ, ಏಕಪಕ್ಷೀಯ, ಸರ್ವಾಧಿಕಾರಿ ಮತ್ತು ಜನತೆಯ ಅದರಲ್ಲೂ ಮಹಿಳೆಯರ ಹಕ್ಕುಗಳನ್ನು ದಮನಿಸುವ ಸರಕಾರವನ್ನು ಬದಲಿಸಬೇಕು ಎಂಬ ವಾದವನ್ನೂ ಇಸ್ರೇಲ್–ಯುಎಸ್ ಮುಂದಿಟ್ಟಿವೆ. ಒಂದು ದೇಶದ ಸರಕಾರದ, ರಾಜಕೀಯ ವ್ಯವಸ್ಥೆಯ ಆಯ್ಕೆ–ಆಯಾ ದೇಶದ ಜನತೆಯ ಸಾರ್ವಭೌಮ ಹಕ್ಕು. ಸರಕಾರ ಅಥವಾ ರಾಜಕೀಯ ವ್ಯವಸ್ಥೆ ಸರಿಯಿಲ್ಲದಿದ್ದರೆ ಆಂತರಿಕ ಪ್ರಕ್ರಿಯೆಗಳ ಮೂಲಕವೇ ಬದಲಾವಣೆ ಬರಬೇಕು. ಅದನ್ನು ಉಲ್ಲಂಘಿಸಿ ಸರಕಾರ ಬದಲಾವಣೆಗೆ ಒತ್ತಾಯಿಸುವುದು ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆ.

(ಉಳಿದ ಭಾಗ ಮುಂದಿನ ಸಂಚಿಕೆಯಲ್ಲಿ)

ನಿರಂಕುಶಾಧಿಕಾರಿಗಳಂತೆ ವರ್ತಿಸಿದ ಆಳರಸರಿಗೆ.......

ಪುಟ 11 ರಿಂದ

ಚರ್ಚಿಸುತ್ತೇವೆ. ಆದರೆ ಯಾರನ್ನಾದರೂ ಪೊಲೀಸ್ ಠಾಣೆಗೆ ಕರೆದೊಯ್ದು, ಬಂಧಿಸಿ, ಕ್ರೂರವಾಗಿ ಹಲ್ಲೆ ಮಾಡುವುದು ರಾಜಕೀಯವೇ? ರಾಜಕೀಯ ಎಂದರೆ ಇದೇನಾ?

ಕಣ್ಣೂರಿನ ಸರ್ಕಲ್ ಇನ್ಸ್‌ಪೆಕ್ಟರ್ ಅಥವಾ ಡಿಎಸ್‌ಪಿ ತಾವಾಗಿಯೇ ವರ್ತಿಸಿದ್ದಾರೆಂದು ನಾನು ನಂಬಬೇಕೇ? ನಾನು ಅದನ್ನು ನಂಬುವುದಿಲ್ಲ. ಅವರು ಕೇಳಿದ್ದರೆ, ಖಂಡಿತವಾಗಿಯೂ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿತ್ತು. ಆದರೆ ಏನೂ ಆಗಲಿಲ್ಲ. ದಾಳಿಯ ನೇತೃತ್ವ ವಹಿಸಿದ್ದ ಅದೇ ಸರ್ಕಲ್ ಇನ್ಸ್‌ಪೆಕ್ಟರ್ ಬಲರಾಮನ್ ಅವರನ್ನು ನಂತರ ತಲಶ್ಶೇರಿ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಬಡ್ತಿ ನೀಡಲಾಯಿತು. ಅದು ನ್ಯಾಯವೇ?

ಇಲ್ಲಿನ ಎಲ್ಲಾ ಸದಸ್ಯರಿಗೂ ನಾನು ಕೊನೆಯದಾಗಿ ಮನವಿ ಮಾಡುತ್ತೇನೆ, ನಾವು ಸದನದ ವಿಭಿನ್ನ ಬದಿಗಳಲ್ಲಿ ಕುಳಿತುಕೊಳ್ಳಬಹುದು, ಆದರೆ ರಾಜಕೀಯ ಭಿನ್ನಾಭಿಪ್ರಾಯಗಳು ಇಂತಹ ಕ್ರೌರ್ಯಕ್ಕೆ ಕಾರಣವಾಗಬಾರದು. ಇದು ಯಾರಿಗೂ ಗೌರವದ ಬ್ಯಾಡ್ಜ್ ಅಲ್ಲ. ಇದು ರಾಜಕೀಯವಲ್ಲ. ಇದು ಘನತೆಯಲ್ಲ.

ಶ್ರೀ ಕರುಣಾಕರನ್‌ಗೆ, ನಾನು ಹೇಳುವುದೇನೆಂದರೆ: ನಾವು ವಾದಿಸಿದ್ದೇವೆ ಮತ್ತು ಬಲವಾಗಿ ಮಾತನಾಡಿದ್ದೇವೆ. ನಾವು ಅದನ್ನು ಮುಂದುವರಿಸುತ್ತೇವೆ. ನಾನು ಅಚ್ಯುತ ಮೆನನ್‌ಗೆ ಬರೆದ ನನ್ನ ಪತ್ರದಲ್ಲಿಯೂ ಇದನ್ನೇ ಬರೆದಿದ್ದೇನೆ. ಇವುಗಳನ್ನು ನಿಗ್ರಹಿಸಲು ಸಾಧ್ಯವಿಲ್ಲ. ಇದು ರಾಜಕೀಯ. ನಮ್ಮ ಪಕ್ಷವು ಇನ್ನೂ ಕೆಟ್ಟದ್ದನ್ನು ಸಹಿಸಿಕೊಂಡಿದೆ. ಒಡನಾಡಿಗಳು ಲಾಕ್–ಅಪ್‌ಗಳಲ್ಲಿ ಸತ್ತಿದ್ದಾರೆ. ಪ್ರತಿಭಟನೆಯ ಸಮಯದಲ್ಲಿ ಕೆಲವರಿಗೆ ಗುಂಡಿಕ್ಕಲಾಗಿದೆ. ಇತರರನ್ನು ಬಾಡಿಗೆ ಗೂಂಡಾಗಳು ಇರಿದಿದ್ದಾರೆ ಅಥವಾ ಗುಂಡಿಕ್ಕಿ ಕೊಂದಿದ್ದಾರೆ. ಇದೆಲ್ಲವನ್ನೂ ತಿಳಿದಿದ್ದರೂ ನಾವು ಇನ್ನೂ ಈ ಪಕ್ಷದೊಂದಿಗಿದ್ದೇವೆ. ಏಕೆಂದರೆ ನಾವು ಅಂತಹ ಅಪಾಯಗಳನ್ನು ನಿರೀಕ್ಷಿಸುತ್ತೇವೆ.

ಆದರೆ ನಮ್ಮನ್ನು ಲಾಕ್–ಅಪ್‌ನಲ್ಲಿ ಇರಿಸಿ ನಾಲ್ಕು ಪೊಲೀಸರು ಮತ್ತು ಒಬ್ಬ ಇನ್ಸ್‌ಪೆಕ್ಟರ್ ಅನ್ನು ಹರಿಯ ಮಾಡುವ ಮೂಲಕ ನಮ್ಮಲ್ಲಿ ಒಬ್ಬರನ್ನು ಸುಮ್ಮನಾಗಿಸಬಹುದು ಎಂದು ನೀವು ಭಾವಿಸಿದರೆ, ನೀವು ತಪ್ಪು. ಅದು ನಮ್ಮನ್ನು ಸುಮ್ಮನಾಗಿಸುವುದಿಲ್ಲ, ಅದು ನಮ್ಮನ್ನು ಬಲಪಡಿಸುತ್ತದೆ.

ಇದು ರಾಜಕೀಯವಲ್ಲ. ಇದು ಘನತೆಯಲ್ಲ. ಮತ್ತು ಇದು ಖಂಡಿತವಾಗಿಯೂ ಆಡಳಿತವಲ್ಲ.

ಶ್ರೀ ಕರುಣಾಕರನ್, ನೀವು ಇಂದು ಮುಖ್ಯಮಂತ್ರಿ. ನೀವು ಈ ಪರಂಪರೆಯನ್ನು ಮುಂದುವರಿಸಲಿದ್ದೀರಾ? ನೀವು ಪೊಲೀಸ್ ಹಿಂಸಾಚಾರವನ್ನು ಮುಂದುವರಿಸುತ್ತೀರಾ?

ಮತ ಎಣಿಕೆಯ ದಿನದಂದು ಅದೇ ಸರ್ಕಲ್ ಇನ್ಸ್‌ಪೆಕ್ಟರ್ ತಲಶ್ಶೇರಿಯಲ್ಲಿ ಒಂದಲ್ಲ, ಆರು ಅಥವಾ ಏಳು ಬಾರಿ ಹಲವಾರು ಲಾಠಿ ಚಾರ್ಜ್‌ಗಳನ್ನು ನಡೆಸಿದರು. ತಲಶ್ಶೇರಿ, ಪೆರುಂಗಲಂ, ಕೂತುಪರಂಬ ಮತ್ತು ಪೆರಾವೂರ್ ಎಂಬ ನಾಲ್ಕು ಕ್ಷೇತ್ರಗಳ ಮತಗಳನ್ನು ಎಣಿಕೆ ಮಾಡುತ್ತಿದ್ದ ಕಾರಣ ಸಾವಿರಾರು ಜನರು ಅಲ್ಲಿ ಸೇರಿದ್ದರು.

ಮತ್ತು ಕೆಲವು ದಿನಗಳ ಹಿಂದೆ, ಅದೇ ಅಧಿಕಾರಿ ವಿರೋಧ ಪಕ್ಷದ ಮೂವರು ಕಾರ್ಯಕರ್ತರನ್ನು ಬಟ್ಟೆಯಿಲ್ಲದೆ ಬಂಧನದಲ್ಲಿಟ್ಟು, ಕಟ್ಟಿ, ಹಗ್ಗಗಳಿಂದ ಎಳೆದೊಯ್ದರು. ಅದು ಆತ ಹರಿಯಬಿಟ್ಟ ಭಯೋತ್ಪಾದನೆಯ ರೀತಿ.

ಅವರಿಗೆ ಇಂದು ಮುಖ್ಯಮಂತ್ರಿಯಾಗಿರುವ ಅಂದಿನ ಗೃಹ ಸಚಿವರ ಸಂಪೂರ್ಣ ಬೆಂಬಲವಿತ್ತು. ಆ ಪರಂಪರೆ ಮುಂದುವರಿಯಬಾರದು. ಪೊಲೀಸ್ ಅಧಿಕಾರಿಯ ಪ್ರತಿಯೊಂದು ಮಾತನ್ನೂ ನಂಬಿ ಆಡಳಿತ ನಡೆಸಬೇಡಿ.

ಬೆಳಿಗ್ಗೆ 5:15 ಕ್ಕೆ ನನ್ನನ್ನು ಶಿವಪುರಂ ಪಕ್ಷದ ಕಚೇರಿಯಲ್ಲಿ ಬಂಧಿಸಲಾಗಿದೆ ಎಂದು ಅವರು ಹೇಳಿದರು. ಆ ದಿನಗಳಲ್ಲಿ ನಾನು ಶಿವಪುರಂ ಬಳಿಯೂ ಹೋಗಿರಲಿಲ್ಲ. ಆದರೆ ಪೊಲೀಸರು ಹೇಳಿದ್ದು ಅದನ್ನೇ ಮತ್ತು ಅದೇ ಸರ್ಕಾರದ ದಾಖಲೆಯಲ್ಲಿ ಸೇರಿಕೊಂಡಿತು. ಅದು ನ್ಯಾಯವೇ?

ಈ ದೇಶದಲ್ಲಿ ಒಬ್ಬ ಸಾಮಾನ್ಯ ವಿರೋಧ ಪಕ್ಷದ ಕಾರ್ಯಕರ್ತನಿಗೆ ಶಾಂತಿಯುತವಾಗಿ ರಾಜಕೀಯ ಕೆಲಸ ಮಾಡುವ ಘನತೆಯನ್ನು ನಿರಾಕರಿಸಿದರೆ, ಅದು ಪ್ರಜಾಪ್ರಭುತ್ವಕ್ಕೆ ಒಂದು ದುರಂತ.

ಒಂದು ಕಾಲದಲ್ಲಿ ನಿರಂಕುಶಾಧಿಕಾರಿಗಳಂತೆ ವರ್ತಿಸಿದ ಆಡಳಿತಗಾರರಿಗೆ ಏನಾಯಿತು ಎಂಬುದನ್ನು ನೆನಪಿಸಿಕೊಳ್ಳೋಣ. ಆ ಇತಿಹಾಸದಿಂದ ಕಲಿಯೋಣ.

ವಯಲಾರ್ ರವಿ ಮತ್ತು ಉನ್ನಿಕೃಷ್ಣನ್ ಕೂಡ ಈಗ ಸಂಜಯ್ ಗಾಂಧಿಯನ್ನು ಪದಚ್ಯುತಗೊಳಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ನಾವು ಹಿಂದೆ ಅದನ್ನು ಊಹಿಸಲು ಸಾಧ್ಯವಿತ್ತೇ?

ಇಂದು, 50 ಸಂಸದರು ಸಂಜಯ್ ಗಾಂಧಿಯನ್ನು ಪದಚ್ಯುತಗೊಳಿಸಬೇಕೆಂದು ಒತ್ತಾಯಿಸುವ ಪತ್ರಕ್ಕೆ ಸಹಿ ಹಾಕಿದ್ದಾರೆ.

ಇದೀಗ ದೇಶದ ಸ್ಥಿತಿ.

ಹಾಗಾಗಿ, ಶ್ರೀ ಕರುಣಾಕರನ್, ಗೋಡೆಯ ಮೇಲಿನ ಬರಹವನ್ನು ಓದಿ.

ಅದಕ್ಕೆ ತಕ್ಕಂತೆ ಆಳ್ವಿಕೆ ಮಾಡಿ.

ಏಕೆಂದರೆ ಇದು ಒನ್ ಮ್ಯಾನ್ ಶೋ ಎಂದು ನೀವು ಮತ್ತು ಸಿ.ಎಚ್. ಮೊಹಮ್ಮದ್ ಕೋಯಾ ಎಲ್ಲಾ ಪಾತ್ರಗಳನ್ನು ನಿರ್ವಹಿಸುತ್ತಿದ್ದೀರಿ ಎಂದು ನೀವು ಭಾವಿಸಿದರೆ, ನೀವು ತಪ್ಪಾಗಿ ಭಾವಿಸುತ್ತಿದ್ದೀರಿ.

ಇದು ಇನ್ನು ಮುಂದೆ ದೆಹಲಿ ಅಲ್ಲ. ಕೇರಳ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಅಥವಾ ನೀತಿಯನ್ನು ನಿರ್ಧರಿಸಲು ಅಲ್ಲಿ ಯಾರೂ ಉಳಿದಿಲ್ಲ.

ಅದನ್ನು ಅರ್ಥಮಾಡಿಕೊಳ್ಳಿ. ಮತ್ತು ಬುದ್ಧಿವಂತಿಕೆಯಿಂದ ವರ್ತಿಸಿ.

ಮಿಲಿಟರಿ ವೆಚ್ಚಗಳ ಏರಿಕೆಗೆ ಜನಕಲ್ಯಾಣ.....

ಪುಟ 13 ರಿಂದ

ಜನರ ಕುಟುಂಬಗಳು ತಮ್ಮ ಸಂಪನ್ಮೂಲಗಳ ನಿವ್ವಳ ಹೆಚ್ಚಳವನ್ನು ಕಾಣುತ್ತಾರೆ ಮತ್ತು ತಳ ಭಾಗದ ಶೇ. 10ರಷ್ಟು ಜನರ ಕುಟುಂಬಗಳು ತಮ್ಮ ಸಂಪನ್ಮೂಲಗಳ ನಿವ್ವಳ ಇಳಿಕೆಯನ್ನು ಕಾಣುತ್ತಾರೆ.

ಅಪಾಯಕಾರಿ ರೂಪ

ಯುಎಸ್ ಕಾಂಗ್ರೆಸ್ ಈ ಮಸೂದೆಯನ್ನು ಕೇವಲ ಒಂದು–ಮತದ ಬಹುಮತದಿಂದ ಅಂಗೀಕರಿಸಿದೆಯಾದರೂ ಮತ್ತು ಸೆನೆಟ್‌ನಲ್ಲಿ ದೊರೆಯುವ ಫಲಿತಾಂಶವು ಇನ್ನೂ ಸ್ಪಷ್ಟವಿಲ್ಲವಾದರೂ, ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಮಸೂದೆಯನ್ನು ಎಷ್ಟರ ಮಟ್ಟಿಗೆ ಸ್ವೀಕರಿಸುತ್ತದೆ ಎಂಬುದು ಇನ್ನೂ ಸ್ಪಷ್ಟವಿಲ್ಲದ ಮತ್ತು ಸಂಪೂರ್ಣವಾಗಿ ಬೇರೆಯದೇ ಆದ ಒಂದು ವಿಷಯ. ಬ್ರಿಟನ್‌ನಲ್ಲಿ ಲಿಜ್ ಟ್ರಸ್ ಸರ್ಕಾರವು ಬಂಡವಾಳಗಾರರಿಗೆ ತೆರಿಗೆ ರಿಯಾಯಿತಿಗಳನ್ನು ನೀಡುವ ಸಲುವಾಗಿ ವಿತ್ತೀಯ ಕೊರತೆಯ ವಿಸ್ತರಣೆಯನ್ನು ಪ್ರಸ್ತಾಪಿಸಿತ್ತು. ಆದರೆ, ವಿತ್ತೀಯ ಕೊರತೆಯ ಈ ವಿಸ್ತರಣೆಯೂ ಸಹ ಹಣಕಾಸು ಬಂಡವಾಳಕ್ಕೆ ಸ್ವೀಕಾರಾರ್ಹವಾಗಿರಲಿಲ್ಲ. ಹಣಕಾಸು ಬಂಡವಾಳವು ದೇಶವನ್ನು ತೊರೆದು ಹೋಗುತ್ತಿದ್ದಂತೆಯೇ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಬ್ರಿಟಿಷ್ ಪೌಂಡ್‌ನ ಮೌಲ್ಯ ಕುಸಿಯಿತು ಮತ್ತು ಲಿಜ್ ಟ್ರಸ್ ರಾಜೀನಾಮೆ ನೀಡಬೇಕಾಯಿತು. ಈ ಪ್ರಕ್ರಿಯೆಯಲ್ಲಿ ಬ್ರಿಟಿಷ್ ಇತಿಹಾಸದಲ್ಲಿ ಅತಿ ಕಡಿಮೆ ಅವಧಿಯ ಪ್ರಧಾನಿಯಾಗಿ ಲಿಜ್ ಟ್ರಸ್ ದಾಖಲಾದರು. ಟ್ರಂಪ್ ಅವರ ಈ ಮಸೂದೆಯನ್ನು ಹಣಕಾಸು ಬಂಡವಾಳವು ಒಂದು ವೇಳೆ ಅನುಕೂಲಕರವಾಗಿ ಸ್ವೀಕರಿಸದಿದ್ದರೆ, ದುಡಿಯುವ ಜನರ ಮೇಲೆ ಹೆಚ್ಚಿನ ಪರಿಣಾಮ ಬೀರುವ ಜನ ಕಲ್ಯಾಣ ವೆಚ್ಚಗಳನ್ನು ಇನ್ನೂ ಹೆಚ್ಚು ಕಡಿತಗೊಳಿಸುವ ಮೂಲಕ ವಿತ್ತೀಯ ಕೊರತೆಯ ಪ್ರಮಾಣವನ್ನು ಮತ್ತಷ್ಟು ↗

ದೇವನಹಳ್ಳಿ: ಕಾರ್ಪೊರೇಟ್ ಶಕ್ತಿಗಳ ಕಣ್ಸನ್ನೆಯಂತೆ.........

ಪುಟ 8 ರಿಂದ

ಕನಿಷ್ಟ 90ರಷ್ಟು ರೈತರು ಭೂಮಿ ಕೊಡುವುದಿಲ್ಲ ಎಂದು ಲಿಖಿತವಾಗಿ ಸಾರಿದ್ದಾರೆ. ಅಂದರೆ ಶೇ. 10ರಷ್ಟು ರೈತರ ಒಪ್ಪಿಗೆಯೂ ಇಲ್ಲ. ಹಿಂದೆ ರಾಜ್ಯದಲ್ಲಿ ಬಿಜೆಪಿ ಆಡಳಿತದಲ್ಲಿ ಇದ್ದಾಗ ಭೂ ಸ್ವಾಧೀನದ ಅಧಿಸೂಚನೆ ಹೊರಡಿಸಲಾಗಿತ್ತು. ಆಗ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಆಗಿನ ವಿರೋಧ ಪಕ್ಷದ ಮುಖಂಡರಾದ ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಲವಂತದ ಭೂಸ್ವಾಧೀನ ಅನ್ಯಾಯದ್ದು, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಭೂಸ್ವಾಧೀನ ಕೈಬಿಡುತ್ತದೆ ಎಂದು ಭರವಸೆ ಕೊಟ್ಟಿದ್ದರು. ಕಲಾವಿದ ಪ್ರಕಾಶ ರಾಜ್ ಸೇರಿದಂತೆ ಪ್ರತಿಭಟನೆಯಲ್ಲಿ ಮಾತನಾಡಿದ ಬಹುತೇಕ ನಾಯಕರು ಈ 'ಗೋಸುಂಬೆ ನೀತಿ'ಯನ್ನು ಖಂಡಿಸಿದರು.

ಕೆಐಎಡಿಬಿ ಕೇಡಿಗತನ

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ(ಕೆಐಎಡಿಬಿ)ಯ ಹೆಸರಿನಲ್ಲಿ 'ಕೈಗಾರಿಕೆ' 'ಅಭಿವೃದ್ಧಿ' ಮುಂತಾದ ಶಬ್ದಗಳಿದ್ದರೂ, ಅದು ದೇಶಕ್ಕೆ ಅನ್ನ ನೀಡುವ ರೈತರ ಪಾಲಿಗೆ ಕೇಡಿಗನಾಗಿ ವರ್ತಿಸುತ್ತಿರುವುದೇ ಜಾಸ್ತಿ. ರಿಯಲ್ ಎಸ್ಟೇಟ್ ಲಾಬಿಯೊಂದಿಗೆ ಕೆಐಎಡಿಬಿ ಶಾಮೀಲಾಗಿ ಅಗತ್ಯವಿಲ್ಲದ ಕಡೆ, ಅಗತ್ಯಕ್ಕಿಂತಲೂ ಜಾಸ್ತಿ ರೈತರ ಭೂಮಿ ಕಸಿಯುತ್ತಿದೆ ಎಂಬುದು ಈಗಾಗಲೇ ಸಾಬೀತಾಗಿ ಹೋಗಿರುವ ವಿಷಯ. ಕಳೆದ ಕೆಲವು ದಶಕಗಳಲ್ಲಿ ಈ ಸಂಸ್ಥೆಯು ರೈತರಿಂದ ಕಿತ್ತುಕೊಂಡಿರುವ ಜಮೀನೆಷ್ಟು? ರೈತರಿಗೆ ಯಾವ ರೀತಿಯ ಪರಿಹಾರ ಕೊಡಲಾಗಿದೆ? ಎಷ್ಟು ಪರಿಹಾರ ಕೊಡಲಾಗಿದೆ? ಕೈಗಾರಿಕೆಗೆಂದು ಬಂಡವಾಳಗಾರರಿಗೆ ನೀಡಲಾದ ಜಾಗದಲ್ಲಿ ಎಷ್ಟು ಭೂಮಿ ನಿಜಕ್ಕೂ ಕೈಗಾರಿಕೆಗೆ ಬಳಕೆಯಾಗಿದೆ? ಯಾವ ಕೈಗಾರಿಕೆಯೂ ಇಲ್ಲದೇ, ಇತ್ತ ವ್ಯವಸಾಯವೂ ಇಲ್ಲದೇ ಎಷ್ಟು ಜಾಗ ಪಾಳು ಬಿದ್ದಿದೆ, ಬೀಳು ಬಿದ್ದಿದೆ? ಕೈಗಾರಿಕೆಯ ಹೆಸರಿನಲ್ಲಿ ಯಾವ ಯಾವ ರಿಯಲ್ ಎಸ್ಟೇಟ್ ಕುಳಗಳು ಎಲ್ಲೆಲ್ಲಿ ಎಷ್ಟೆಷ್ಟು ಜಾಗವನ್ನು ಕಬಳಿಸಿಕೊಂಡು ಕೂತಿವೆ? ಜಾಗತಿಕ ಹೂಡಿಕೆದಾರರ ಸಮಾವೇಶ ಇತ್ಯಾದಿಗಳಲ್ಲಿ ಘೋಷಣೆಯಾದ ಬಂಡವಾಳ ಹೂಡಿಕೆ ನಿಜಕ್ಕೂ ಎಷ್ಟು ಹರಿದು ಬಂದಿದೆ? ನಿಜಕ್ಕೂ ಎಷ್ಟು ಉದ್ಯೋಗ ಸೃಷ್ಟಿಸಲಾಗಿದೆ? ಈ ಎಲ್ಲವುಗಳ ಬಗೆಗೆ ಒಂದು ಸರಿಯಾದ ತನಿಖೆ ನಡೆಸಿ ಸತ್ಯವನ್ನು ಬಯಲಿಗೆ ಇಡಬೇಕಿದೆ. ಆಗ ಹೊರಬೀಳುತ್ತವೆ ಭೂ ಬಕಾಸುರ ಹಗರಣಗಳು. ಭ್ರಷ್ಟರು–ದುಷ್ಟರು–ಭೂ ದಂಧೆಕೋರರನ್ನು ಜೈಲಿಗಟ್ಟಬೇಕಾದ ಸರಕಾರವು ಕಾರ್ಪೊರೇಟ್ ಕಂಪನಿಗಳ ಕಣ್ಸನ್ನೆಗೆ ಕಾಯುತ್ತಾ ರೈತರ ಬದುಕನ್ನು ಕೊಲ್ಲಲು ಕಾದು ನಿಂತಿರುವುದು ಇಂದಿನ ಕಾಲಮಾನದ ಕಟು ವಾಸ್ತವ. ಇದರ ಹೆಸರು ಜಾಗತೀಕರಣ, ಉದಾರೀಕರಣ, ಖಾಸಗೀಕರಣ.

'ಬೀಜ ಬಿತ್ತಿ ಉದ್ಯೋಗ ಬೆಳೆವರೇ?'

ಸರಕಾರ ಚನ್ನರಾಯಪಟ್ಟಣದಲ್ಲಿ ಬರುತ್ತದೆ ಎಂದು ಹೇಳುತ್ತಿರುವುದು 'ಡಿಫೆನ್ಸ್ ಏರೋಸ್ಪೇಸ್ ಪಾರ್ಕ್'. ಅಂದರೆ ರಕ್ಷಣೆಗೆ ಸಂಬಂಧಿಸಿದ ವಿಮಾನ ಮುಂತಾದವುಗಳನ್ನು ತಯಾರಿಸುವ ಕಾರ್ಖಾನೆಗಳು ಎಂದು. ಇದು ನಿಜವೇ ಎಂಬುದು ಮೊದಲ ಪ್ರಶ್ನೆ. ವಿಮಾನ ಇತ್ಯಾದಿ ತಯಾರಿಸುವ ಕಾರ್ಖಾನೆಗೆ ಬಂಜರು ಭೂಮಿ ಯಾಕಾಗಬಾರದು? ಸರಕಾರ ಹೇಳುವ ಉದ್ಯೋಗವನ್ನು ನೆಲದಾಳದಲ್ಲಿ ಬೀಜ ಬಿತ್ತಿ ಬೆಳೆಯುವರೇ? ಭೂಮಿ ಬೆಂಗಳೂರು ಹತ್ತಿರವೇ ಯಾಕಾಗಬೇಕು? ಉತ್ತರ ಕರ್ನಾಟಕದ ಗುಲ್ಬರ್ಗಾವೋ, ಹುಬ್ಬಳ್ಳಿಯೋ, ಬೆಳಗಾವಿಯೋ, ಮಧ್ಯ ಕರ್ನಾಟಕದ ಚಿತ್ರದುರ್ಗವೋ ಯಾಕಾಗಬಾರದು? ಇವೆಲ್ಲಾ ರೈತ ಸಮುದಾಯದ ಪ್ರಾಮಾಣಿಕ ಪ್ರಶ್ನೆಗಳು.

'ಡಿಫೆನ್ಸ್ ಏರೋಸ್ಪೇಸ್ ಪಾರ್ಕ್'ನ ಯೋಜನೆಯ ಹಿಂದೆ ಧೀರೂಬಾಯಿ ಅಂಬಾನಿ ಹೆಸರಿನ ಕಂಪನಿ, ಅದಾನಿ ಮುಂತಾದ 'ಸಾಹುಕಾರರ' ಕಂಪನಿಗಳ ಕರಾಮತ್ತು ಇದೆಯೆಂಬ ಚಿತ್ರ ಗೋಚರಿಸುತ್ತಿದೆ.

'ಚಾಣಕ್ಯ ನೀತಿ'

'ಚಾಣಕ್ಯ' ಹೆಸರಿನ ಒಂದು ವಿಶ್ವವಿದ್ಯಾಲಯವು ದೇವನಹಳ್ಳಿ ವಿಮಾನ ನಿಲ್ದಾಣದ ಬಳಿ 116 ಎಕರೆ ಭೂಮಿಯನ್ನು ಸರಕಾರದಿಂದ ಸುಲಭವಾಗಿ ಪಡೆದುಕೊಳ್ಳುತ್ತದೆ. ಒಂದು ಖಾಸಗಿ ವಿವಿಗೆ 116 ಎಕರೆ ಭೂಮಿ ಬೇಕಾ? ಕಾರ್ಖಾನೆ ಸ್ಥಾಪಿಸಿದರೂ ಬಂಡವಾಳಿಗರು ಕೇಳುವ ನೂರಾರು, ಸಾವಿರಾರು ಎಕರೆ ಭೂಮಿ ನಿಜಕ್ಕೂ ಆ ಉದ್ದೇಶಕ್ಕೆ ಬೇಕಾ ಎಂಬ ಬಗೆಗೆ ನಿಜವಾದ ತನಿಖೆ ನಡೆಯಬೇಕಾಗಿದೆ.

ಭೂ ಒಡೆಯರು–ಕಾವಲುಗಾರರಾಗಬೇಕೇ?

ಇನ್ನು ರೈತರು ಪರಿಹಾರ ಪಡೆದುಕೊಂಡು ಬೇರೆ ರೀತಿ ಬದುಕು ರೂಪಿಸಿಕೊಳ್ಳಿ ಎಂಬ ಬಗೆಗೆ. ಕೃಷಿಯನ್ನೇ ನಂಬಿ ಬದುಕುತ್ತಾ ಬಂದವರು ಬಹಳಷ್ಟು ರೈತರು. ಅವರು ಮತ್ತೊಂದು ವಿದ್ಯೆ ತಿಳಿಯದವರು. ಕೈಗೆ ಬಂದ ಒಂದಿಷ್ಟು ಕಾಸು ಹೇಗೆ ಖರ್ಚು ಮಾಡಬೇಕೆಂದು ಅರಿಯದೇ ಬೀದಿ ಪಾಲಾದವರೆಷ್ಟೋ? ಬಂಡವಾಳಶಾಹಿ ಸಮಾಜದ ಮಾಯಾಲೋಕದ ಮೋಹ ಜಾಲಕ್ಕೆ ಸಿಲುಕಿ ಮೋಸ ಹೋದ ರೈತರ ಮಕ್ಕಳೆಷ್ಟೋ? ಸರಕಾರ ಕೊಡುವ ಮೂರು ಕಾಸಿಗೆ, ಅನ್ನ ನೀಡುವ ಭೂಮಿಯನ್ನು ಕೊಟ್ಟು ದಿಕ್ಕು ತಪ್ಪಿ ಪರಿತಪಿಸುತ್ತಿರುವವರೆಷ್ಟೋ? ಇದೇ ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಭೂಮಿ ಕೊಟ್ಟ ಎಷ್ಟೋ ರೈತರ ಬದುಕೇ ನೆಲೆ ಇಲ್ಲದೇ ಅತಂತ್ರವಾಗಿದೆ. ವಿವಾದಗಳು ಇತ್ಯರ್ಥವಾಗಿಲ್ಲ. ಇದ್ದ ಭೂಮಿ ಇತರರ ಕೈಗೆ ಕೊಟ್ಟು ಕಾರ್ಖಾನೆ–ಕಚೇರಿಗಳಲ್ಲಿ ವಾಚ್‌ಮನ್‌ಗಳಾಗಿ, ಶೌಚಾಲಯ ಸ್ವಚ್ಛ ಮಾಡುವವರಾಗಿ, ಹಮಾಲಿ, ಕೂಲಿಗಳಾಗಿ ಬದುಕುತ್ತಿರುವವರೆಷ್ಟೋ? ಇದು ಕರೆಯುವ ಹಸುವನ್ನು ಕೊಟ್ಟು ಒದೆಯುವ ಎಮ್ಮೆಯನ್ನು ಕೊಂಡಂತೆ.

ಕೃಷಿ ವಿಜ್ಞಾನಿ ಪ್ರಕಾಶ ಕಮ್ಮರಡಿಯವರು, ಸಮಸ್ಯೆ ಇದ್ದಾಗ ಕಾರ್ಮಿಕರು, ವೈದ್ಯರೂ ಮುಷ್ಕರ ಮಾಡುತ್ತಾರೆ. ಇಡೀ ಬೆಂಗಳೂರಿಗೆ ಸೊಪ್ಪು–ತರಕಾರಿ, ಹಣ್ಣು–ಹಂಪಲು ಬೆಳೆದು ಕೊಡುವ, ಹಾಲು–ಮೊಸರು–ಮೊಟ್ಟೆ–ಮಾಂಸ ಪೂರೈಸುವ ಬೆಂಗಳೂರಿನ ಸುತ್ತ ಮುತ್ತಲ ಜಿಲ್ಲೆಗಳ ರೈತರು ಬೆಳೆ ಬೆಳೆಯುವುದಿಲ್ಲ ಎಂದು ಮುಷ್ಕರ ಮಾಡಿದರೆ ಏನಾಗುತ್ತದೆ ಎಂದು ಕೇಳಿದ ಬಗೆಗೆ ನಮ್ಮ 'ನಾಗರೀಕ' ಸಮಾಜ ಆಳವಾಗಿ ಯೋಚಿಸಬೇಕು. ರಾಗಿ–ಭತ್ತ, ಹುರುಳಿಕಾಯಿ–ಬದನೆಗಳು ಕಾರ್ಖಾನೆಯಲ್ಲಿ ತಯಾರಾಗುವ ಪರಿಸ್ಥಿತಿಯಂತೂ ಇನ್ನೂ ಬಹುತೇಕ ಜಗತ್ತಿನಲ್ಲಿ ಎಲ್ಲಿಯೂ ಬಂದಿಲ್ಲ.

'ಅವರು ಕೋರಿದ ಕಡೆ ಕೊಡಬೇಕು" ಎಂಬ ಕೆಟ್ಟ ಆದೇಶ 'ಮಣ್ಣು ಮಾರಿಕೊಳ್ಳುವುದಿಲ್ಲ' ಎಂಬ ದಿಟ್ಟ ಸಂದೇಶ

"ಹೂಡಿಕೆ ಮಾಡುವವರು ತಮಗೆ ಸರಿಯೆನಿಸುವ ಪ್ರದೇಶದಲ್ಲಿ ಜಾಗವನ್ನು ಕೋರುತ್ತಾರೆ. ನಾವು ಅವರ ಅಹವಾಲುಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ." ಎಂದು ಸಚಿವ ಎಂ.ಬಿ. ಪಾಟೀಲರು ಬಹಳ ಮುಗ್ದರೋ ಎಂಬಂತೆ ಹೇಳಿಕೆ ಕೊಟ್ಟಿದ್ದಾರೆ. ಪಾಟೀಲರು, ತಮ್ಮದು ಎಂಬ ವೈಯುಕ್ತಿಕ ಆಸ್ತಿ ಏನಾದರೂ ಇದ್ದಲ್ಲಿ, ಅದನ್ನು ಧಾರಾಳವಾಗಿ ಕೇಳಿದವರಿಗೆ ಕೊಡಬಹುದು. ಅದನ್ನು ರೈತರು ತಡೆಯುವುದಿಲ್ಲ. ಪಾಟೀಲರು ಮುಗ್ದರಲ್ಲ. ರೈತರು ಭೂ ಸ್ವಾಧೀನದ ಹಿಂದಿನ ತಿಮಿಂಗಲಗಳು ಯಾರು ಎಂದು ಅರಿಯದಷ್ಟು ಅಮಾಯಕರೂ ಅಲ್ಲ. ಪಾಟೀಲರು ಕಾರ್ಪೊರೇಟ್ ಕಂಪನಿಗಳು–ಬಂಡವಾಳಗಾರರ ಭೂ ದಾಹದ ಪರವಾಗಿ ಹವಾ ಎಬ್ಬಿಸಿ, ಜೋರಾಗಿ ಬ್ಯಾಟ್ ಬೀಸುತ್ತಿದ್ದಾರೆ.

'ಆರಂಭ' ಮಾಡಿಕೊಂಡು ಬಂದವರು

ಅಜ್ಜಿ–ತಾತರ ಕಾಲದಿಂದ, ನೆನಪೇ ಕಷ್ಟವಾಗುವಷ್ಟು ಹಳೆಗಾಲದಿಂದ ಮಣ್ಣನ್ನು ಉತ್ತು–ಬಿತ್ತು 'ಆರಂಭ' ಮಾಡಿಕೊಂಡು ಬಂದವರು ರೈತರು. ಭೂಮಿಯ ಮಾಲಿಕರಾದ ರೈತರಿಗೆ ತಮ್ಮ ಭೂಮಿಯನ್ನು ಕೊಡುವುದಿಲ್ಲ ಎಂದು ಹೇಳುವ ಹಕ್ಕಿಲ್ಲವಂತೆ!! ಇವರು ಬಂಡವಾಳಗಾರರು ಬಂದು ಕೈತೋರಿದ ಜಾಗವನ್ನು ರೈತರಿಂದ ಕಿತ್ತು ಕೊಡುವವರಂತೆ!!! ಜಾಗತೀಕರಣದ ಕಾಲದಲ್ಲಿ ಬಂಡವಾಳಗಾರರು, ಕಾರ್ಪೊರೇಟ್ ಕಂಪನಿಗಳೂ ಭೂಮಿಗೆ ಬೆಲೆ ಕೊಡಲು ಬಂದಿದ್ದಾರೆ. ಆದರೆ ಹೋರಾಟಗಾರರು, 'ಭೂಮಿಗಲ್ಲ, ರೈತರ ಬದುಕಿಗೆ, ಭಾವನೆಗೆ ಬೆಲೆ ಕೊಡಿ' ಎಂದು ಆಗ್ರಹಿಸಿದರು.

'ಸ್ವಾತಂತ್ರ್ಯ ಉದ್ಯಾನ'ವನದಲ್ಲಿ ಹೋರಾಟದ ಮುಂದುವರಿಕೆ

ಜೂನ್ 25 ರಂದು ಹೋರಾಟಗಾರರ ಬಂಧನವಾದ ನಂತರ ದೇವನಹಳ್ಳಿಯಲ್ಲಿ ಪ್ರತಿಭಟನೆ ಮುಂದುವರಿಸಲು ಪೋಲಿಸರು ಅವಕಾಶ ಕೊಡುತ್ತಿಲ್ಲ. ರಾಜ್ಯಕ್ಕೆಲ್ಲಾ ಈಗಾಗಲೇ ಗೊತ್ತಿರುವಂತೆ, ಬೆಂಗಳೂರಿನಲ್ಲಿ ನಗರ ಕೇಂದ್ರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬಿಟ್ಟರೆ ಬೇರೆಲ್ಲೂ ಪ್ರತಿಭಟನೆಯ ಸೊಲ್ಲು ಎತ್ತುವಂತಿಲ್ಲ. ಜನರ ಸಂವಿಧಾನ ಬದ್ಧ ಪ್ರತಿಭಟನೆಯ ಹಕ್ಕನ್ನು ಮೊಟಕುಗೊಳಿಸುವ ನ್ಯಾಯಾಲಯದ ಇಂತಹ ಜನವಿರೋಧಿ ಆದೇಶವೊಂದನ್ನು ಪ್ರಶ್ನಿಸದೇ ಸರಕಾರಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಕೆ ಮಾಡಿಕೊಂಡು ಬಂದಿವೆ. ಜನ ಚಳುವಳಿಗಳ ಬಾಯಿ ಬಂದ್ ಮಾಡಿಸಲು ಯತ್ನಿಸುತ್ತಿವೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇದೆ ಎಂಬ ನೆಲೆಯಲ್ಲಿ ಇದೀಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕನ್ನೂ ಸಹ ಬೆಂಗಳೂರು ಪೋಲಿಸ್ ಕಮೀಷನರ್ ಅವರ ಅಧಿಕಾರ ವ್ಯಾಪ್ತಿಯೊಳಕ್ಕೆ ತಂದಿಡಲಾಗಿದೆ. ಹಾಗೂ ಅಲ್ಲೂ ಯಾವುದೇ ಪ್ರತಿಭಟನೆ, ಧರಣಗಳನ್ನು ನಿಷೇಧಿಸಲಾಗಿದೆ. ಆನೇಕಲ್ ತಾಲೂಕನ್ನು ಸಹ ಇದೇ ವ್ಯಾಪ್ತಿಗೆ ತರಲಾಗಿದೆ.

ಸಿಪಿಐ(ಎಂ) ಪ್ರತಿಭಟನೆ

ಜೂನ್ 26ರಂದು ಇದೇ ಸ್ವಾತಂತ್ರ್ಯ ಉದ್ಯಾನದಲ್ಲಿ ಸಿಪಿಐ(ಎಂ) ಬೆಂಗಳೂರು ಉತ್ತರ–ದಕ್ಷಿಣ ಸಮಿತಿಗಳಿಂದ ಪೋಲಿಸರ ದೌರ್ಜನ್ಯ ವಿರೋಧಿಸಿ ಪ್ರತಿಭಟಿಸಲಾಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ.ಕೆ. ಪ್ರಕಾಶ್, ಇತರ ಮುಖಂಡರು ದಲಿತ, ರೈತ ಮುಂತಾದ ಚಳುವಳಿಗಳ ಮುಖಂಡರು ಮಾತನಾಡಿ ಸರಕಾರದ ದೌರ್ಜನ್ಯವನ್ನು ಖಂಡಿಸಿದರು. ಜೂನ್ 27, 2025 ರಿಂದ ದೇವನಹಳ್ಳಿಯಿಂದ ಪ್ರತಿಭಟನೆಯ ತಾವು ಸ್ವಾತಂತ್ರ್ಯ ಉದ್ಯಾನಕ್ಕೆ ಬದಲಾಗಿದೆ. ಈ ನಡುವೆ ಮುಖ್ಯಮಂತ್ರಿಗಳನ್ನು ಕಂಡ ಪ್ರಕಾಶ್ ರಾಜ್, ಕೆ.ಎಸ್. ವಿಮಲ ಮುಂತಾದ ಗಣ್ಯರ ನಿಯೋಗವು ರೈತರೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸಲು ಒತ್ತಾಯಿಸಿದೆ. ಮುಖ್ಯಮಂತ್ರಿಗಳು ಜುಲೈ 4 ರಂದು ಬೆಳಿಗ್ಗೆ ಮಾತುಕತೆಗೆ ಸಮಯ ನಿಗದಿ ಮಾಡಿದ್ದಾರೆ. ಈ ಮಾತುಕತೆ ಫಲ ನೀಡಲಿ. ಸರಕಾರಕ್ಕೆ 'ಜ್ಞಾನೋದಯ'ವಾಗಲಿ ಎಂದು ಆಶಿಸಬಹುದಷ್ಟೆ.

ಕಡಿತಗೊಳಿಸಬೇಕಾಗುತ್ತದೆ.

ಈ ರೀತಿಯಲ್ಲಿ ಮುಂದುವರೆದ ದೇಶಗಳ ಬಂಡವಾಳಶಾಹಿಯ ಸ್ವಭಾವದಲ್ಲಿ ಒಂದು ಸಂಪೂರ್ಣ ಬದಲಾವಣೆಯನ್ನು ನಾವು ನೋಡುತ್ತಿದ್ದೇವೆ. ಮಹಾ ಯುದ್ಧದ ನಂತರ ಬಂಡವಾಳಶಾಹಿಯು ಎದುರಿಸಿದ ಅಸ್ತಿತ್ವದ ಬಿಕ್ಕಟ್ಟಿನ ಕಾರಣದಿಂದಾಗಿ ಯುದ್ಧಾನಂತರದ ವರ್ಷಗಳಲ್ಲಿ ಜನ ಕಲ್ಯಾಣ (ದೇಶೀಯವಾಗಿ ಹತ್ತಿರ ಹತ್ತಿರ ಪೂರ್ಣ ಉದ್ಯೋಗ ಮಟ್ಟದ ಮತ್ತು ನಿರ್ವಸಾಹತೀಕರಣದ ಹೊರತಾಗಿಯೂ) ವೆಚ್ಚಗಳ ಹೆಚ್ಚಳಕ್ಕೆ ಒಪ್ಪಿಕೊಳ್ಳಬೇಕಾಯಿತು. ಮುಂದುವರೆದ ದೇಶಗಳ ಬಂಡವಾಳಶಾಹಿಯಿಂದ ಕಸಿದುಕೊಂಡ ಈ ರಿಯಾಯಿತಿಗಳನ್ನು ಆಗ ಉದಾರವಾದಿ ಅಭಿಪ್ರಾಯವು ಬಂಡವಾಳಶಾಹಿಯ ಸ್ವರೂಪದಲ್ಲಿ ಉಂಟಾದ ಮೂಲಭೂತ ಮತ್ತು ಶಾಶ್ವತ ಬದಲಾವಣೆ ಎಂದು ಪ್ರಸ್ತುತಪಡಿಸಿತು. ಬಂಡವಾಳಶಾಹಿಯು ಒಂದು ಪರಭಕ್ಷಕ ಸ್ಥಿತಿಯಿಂದ ಜನ ಕಲ್ಯಾಣ ಬಂಡವಾಳಶಾಹಿ ವ್ಯವಸ್ಥೆಗೆ ಬದಲಾಗಿರುವುರಿಂದ ಸಮಾಜವಾದಕ್ಕೆ ಪರಿವರ್ತನೆ ಹೊಂದುವ ಅಗತ್ಯವಿಲ್ಲ ಎಂದು ವಾದಿಸಿತು.

ಈ ದಾವೆಯನ್ನು ಅರವತ್ತರ ದಶಕದ ಉತ್ತರಾರ್ಧ ಮತ್ತು ಎಪ್ಪತ್ತರ ದಶಕದ ಆರಂಭದಲ್ಲಿ ಕಂಡುಬಂದ ಹಣದುಬ್ಬರದ ಏರಿಕೆ ಹುಸಿಗೊಳಿಸಿತು. ಇದು ಎಲ್ಲೆಡೆಯೂ ನವ ಉದಾರವಾದಿ ಆಳ್ವಿಕೆಯನ್ನು ತಂದಿತು ಮತ್ತು ಮುಂದುವರೆದ ಅರ್ಥವ್ಯವಸ್ಥೆಗಳಲ್ಲಿ ನಿರುದ್ಯೋಗವನ್ನು ಹೆಚ್ಚಿಸಿತು. ನವ ಉದಾರವಾದಿ ಬಂಡವಾಳಶಾಹಿಯ ಬಿಕ್ಕಟ್ಟು ಸಾಮ್ರಾಜ್ಯಶಾಹಿ ಪ್ರಾಬಲ್ಯಕ್ಕೆ ಒಂದು ಸವಾಲಾಗಿ ಪರಿಣಮಿಸಿತು. ಈ ಸವಾಲಿನಿಂದಾಗಿ ಸಾಮ್ರಾಜ್ಯಶಾಹಿಯು ಜನ ಕಲ್ಯಾಣ ವೆಚ್ಚಗಳನ್ನು ಮತ್ತಷ್ಟು ಕಡಿತಗೊಳಿಸಿ ಮಿಲಿಟರಿ ವೆಚ್ಚಗಳತ್ತ ಸಾಗುವ ಬದಲಾವಣೆಯನ್ನು ತರುತ್ತಿದೆ. ಮುಂದುವರೆದ ದೇಶಗಳ ಬಂಡವಾಳಶಾಹಿಯು ದೇಶೀಯವಾಗಿಯೂ ಸಹ ದಶಕಗಳಿಂದ ಕಾಣದ ಒಂದು ಅಪಾಯಕಾರಿ ಪರಭಕ್ಷಕ ಮತ್ತು ಆಕ್ರಮಣಕಾರಿ ರೂಪವನ್ನು ಪಡೆದುಕೊಳ್ಳುತ್ತಿದೆ.

2024ರಲ್ಲಿ 86.1 ಬಿಲಿಯನ್ ಡಾಲರ್‌ಗಳನ್ನು ಖರ್ಚು ಮಾಡಿದ ಭಾರತವು ಅಮೆರಿಕ, ಚೀನಾ, ರಷ್ಯಾ ಮತ್ತು ಜರ್ಮನಿಯ ನಂತರ ವಿಶ್ವದ ಐದನೇ ಅತಿ ಹೆಚ್ಚು ಮಿಲಿಟರಿ ಖರ್ಚು ಮಾಡುವ ದೇಶವಾಗಿದೆ. ನಮ್ಮ ದೇಶದಲ್ಲಿರುವ ಫ್ಯಾಸಿಸ್ಟ್–ತೆರನ ಆಳ್ವಿಕೆಯು ಉದ್ಯೋಗ ಖಾತ್ರಿ ಯೋಜನೆಯಂತಹ ಕಾರ್ಯಕ್ರಮಗಳಿಗೆ ಹಣ ಕೊಡದೆ ಅವುಗಳನ್ನು ಸೊರಗಿಸುತ್ತಿದ್ದರೂ ಸಹ, ಮಿಲಿಟರಿ ವೆಚ್ಚವನ್ನು ಹೆಚ್ಚಿಸುವ ಎಲ್ಲ ಪ್ರಯತ್ನಗಳನ್ನು ಮಾಡುತ್ತದೆ. ಇದು ಟ್ರಂಪ್ ನಾಯಕತ್ವದ ಮುಂದುವರೆದ ಬಂಡವಾಳಶಾಹಿ ಏನು ಮಾಡಲು ಪ್ರಯತ್ನಿಸುತ್ತಿದೆಯೋ ಅದನ್ನು ಪ್ರತಿಬಿಂಬಿಸುತ್ತದೆ. ಇದರ ವಿರುದ್ಧ ನಾವು ಹೋರಾಡಬೇಕಾಗಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE June 30-July 6, 2025 Price: Rs. 10/- Date of Publication: 27 June 2025 RNI No. KARKAN/2006/17926 Posted on 01-07-2025
Posted at BG PSO, BG - 560026 **Posted at Periodical Rate -** Rs. 2





ಇಸ್ರೇಲ್–ಇರಾನ್ ಯುದ್ಧ: ಏನಾಯ್ತು? ಏಕಾಯ್ತು? ಮುಂದೇನು?

ಇತ್ತೀಚೆಗೆ ಜಾಗತಿಕವಾಗಿ ಮೂರನೇ ಮಹಾಯುದ್ಧದ ಆತಂಕ ಮೂಡಿಸಿದ್ದ, ಇರಾನ್ ಮೇಲಿನ ಇಸ್ರೇಲಿ ಹಠಾತ್ ದಾಳಿಯಿಂದ ಆರಂಭವಾದ ಯುದ್ಧ, ಅಷ್ಟೇ ಹಠಾತ್ತಾಗಿ ಸದ್ಯಕ್ಕಂತೂ ನಿಂತಿದೆ. ಇದು ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಈ ಯುದ್ಧ ಯಾಕೆ ನಡೆಯಿತು? ಈ ವರೆಗೆ ತೆರೆಯ ಹಿಂದೆ ಮಾತ್ರವಿದ್ದ ಯುಎಸ್ ಏಕೆ ಇದ್ದಕ್ಕಿದ್ದ ಹಾಗೆ ಭಾಗವಹಿಸಿತು? ದೀರ್ಘಕಾಲೀನ ಯುದ್ಧದಂತೆ ಕಾಣುತ್ತಿದ್ದರೂ 12 ದಿನಗಳಲ್ಲಿ ಕದನ ವಿರಾಮ ಹೇಗಾಯಿತು? ಈ ಕದನ ವಿರಾಮ ಉಳಿಯಬಹುದೆ? ಈ ಯುದ್ಧದಲ್ಲಿ ಯಾರು ಗೆದ್ದರು? ಮುಂದೇನಾಗಬಹುದು–ಎಂಬ ಪ್ರಶ್ನೆಗಳಿಗೆ ಇಲ್ಲಿ ಉತ್ತರಿಸಲು ಪ್ರಯತ್ನಿಸಲಾಗಿದೆ.

ವಸಂತರಾಜ ಎನ್.ಕೆ.

1. ಇಸ್ರೇಲ್ ಇರಾನ್ ಮೇಲೆ ಜೂನ್ 13ರಿಂದ ನಡೆಸಿದ 12 ದಿನಗಳ ಯುದ್ಧದಲ್ಲಿ ಏನು ನಡೆಯಿತು?


ಕಳೆದ ಸೆಪ್ಟೆಂಬರ್–ಅಕ್ಟೋಬರ್‌ಗಳಲ್ಲಿ ಪರಸ್ಪರ ದಾಳಿಗಳ ನಂತರ ಈ ವರ್ಷ ಜೂನ್ 13ರಂದು ಇಸ್ರೇಲ್ ಹಠಾತ್ತಾಗಿ ಇರಾನ್‌ನ ಎರಡು (ನಾತಾನ್ಜ್, ಇಸ್ಫಾನ್) ಅಣು ಸ್ಥಾವರಗಳ ಮೇಲೆ ದಾಳಿಮಾಡಿತು. ಈ ದಾಳಿ ಪೂರ್ಣವಾಗಿ ಅನಿರೀಕ್ಷಿತವಲ್ಲದಿದ್ದರೂ, ಯುಎಸ್ ಮತ್ತು ಇರಾನ್ ನಡುವೆ ಅಣ್ವಸ್ತ್ರಗಳ ಕುರಿತು ಮಾತುಕತೆ ಇನ್ನೊಂದು ಸುತ್ತಿನ ಮಾತುಕತೆ ಆರಂಭದ ಹಿಂದಿನ ದಿನ ನಡೆದ ದಾಳಿಯ ಸಮಯವಂತೂ ಅನಿರೀಕ್ಷಿತವಾಗಿತ್ತು ಎನ್ನಬಹುದು. ಇರಾನಿನ ಹಲವು ರಾಜಕೀಯ, ಮಿಲಿಟರಿ ಉನ್ನತ ನಾಯಕರನ್ನು, ಹತ್ತು ಪ್ರಮುಖ ವಿಜ್ಞಾನಿಗಳನ್ನು ಹತ್ಯೆ ಮಾಡಲಾಯಿತು. ಇರಾನಿನ ಒಳಗೆ ಗುಪ್ತವಾಗಿದ್ದ ಮೊಸಾದ್ (ಇಸ್ರೇಲಿ ಗೂಢಚಾರ ಸಂಸ್ಥೆ) ಗೂಢಚಾರರು, ಅವರ ಏಜೆಂಟರು ಮತ್ತು ಡ್ರೋನ್‌ಗಳನ್ನು ಈ ದಾಳಿಗಳಲ್ಲಿ ಬಳಸಿತು. ಈ ಮಾರಕ ದಾಳಿಗಳಲ್ಲಿ ಇಸ್ರೇಲಿನ ನಿಖರ ಬೇಹುಗಾರಿಕೆ ಮತ್ತು ಇರಾನಿನ ಸರಕಾರ, ಸೈನ್ಯಗಳಲ್ಲಿ ಉನ್ನತ ವಲಯಗಳಲ್ಲಿ ಅದರ ನಿಲುಕುವಿಕೆಯ ಪಾತ್ರ ಇರಾನಿ ಸರಕಾರ, ಜನತೆಯನ್ನು ಮಾತ್ರವಲ್ಲ, ಇಡೀ ಜಗತ್ತನ್ನು ಬೆಚ್ಚಿ ಬೀಳಿಸಿತು. ಪ್ರತಿ ರಾತ್ರಿಯೆಂಬಂತೆ ವಿಮಾನ, ಕ್ಷಿಪಣಿ, ಡ್ರೋನ್‌ಗಳ ಮೂಲಕ ನಿರಂತರ ದಾಳಿ ನಡೆಸಲಾಯಿತು.

ಇರಾನಿನ (ಅಕ್ಟೋಬರ್ 2024ರ ದಾಳಿಯಲ್ಲಿ ಭಾಗಶಃ ನಾಶವಾಗಿದ್ದ) ವಾಯು ರಕ್ಷಣಾ ವ್ಯವಸ್ಥೆ, ಡ್ರೋನ್ ಮತ್ತು ಕ್ಷಿಪಣಿ ತಯಾರಿಕಾ ಘಟಕ ಮತ್ತಿತರ ಹಲವು ರಕ್ಷಣಾ ಸ್ಥಾವರಗಳಿಗೆ ಸಾಕಷ್ಟು ಹಾನಿ ಮಾಡಲಾಯಿತು. ರಾಜಧಾನಿ ಟೆಹರಾನ್ ಮತ್ತು ಇತರ ಹಲವು ನಗರಗಳ ನಾಗರಿಕ ವಾಸಸ್ಥಳಗಳ ಮೇಲೆ ಸಹ ಬರ್ಬರ ದಾಳಿ ನಡೆದು, ನೂರಾರು ನಾಗರಿಕರ, ಸಾವು, ನೋವುಗಳಾದವು. ಒಂದು ಕೋಟಿಗಿಂತಲೂ ಹೆಚ್ಚು ಜನಸಂಖ್ಯೆಯ ಟೆಹರಾನ್ ನಗರವನ್ನು 'ಖಾಲಿ ಮಾಡಲು' ಇಸ್ರೇಲ್ ಸಾರ್ವಜನಿಕವಾಗಿ ಆಜ್ಞೆಮಾಡಿತು. ಇರಾನಿ ನಾಯಕರ, ವಿಜ್ಞಾನಿಗಳ ಹತ್ಯೆಗೆ ಗುರಿಯಿಟ್ಟಾಗ ಜತೆಗೆ ಅವರ ಕುಟುಂಬ, ನೆರೆಹೊರೆಯವರ ಸಾಮೂಹಿಕ ಹತ್ಯೆ ನಡೆಸಲು ಇಸ್ರೇಲ್ ಹಿಂದೆ ಮುಂದೆ ನೋಡಲಿಲ್ಲ.

ಜೂನ್ 22ರಂದು ಯುಎಸ್ ಯುದ್ಧ ಪ್ರವೇಶಿಸಿ, ತನ್ನ ಬಿ2 ಬಾಂಬರುಗಳನ್ನು ಬಳಸಿ ಇರಾನಿನ ಮೂರೂ (ನಾತಾನ್ಜ್, ಇಸ್ಫಾನ್, ಫೋರ್ಡೋ) ಅಣು ಸ್ಥಾವರಗಳ ಮೇಲೆ ಭಾರೀ ಬಂಕರ್ ಬಸ್ಟರ್ ಬಾಂಬುಗಳನ್ನು ಹಾಕಿತು. ಫೋರ್ಡೋದಲ್ಲಿರುವ 80 ಮೀಟರ್ ಆಳದಲ್ಲಿರುವ ಭೂಗತ ಸ್ಥಾವರ ಸೇರಿದಂತೆ ಮೂರು ಅಣು ಸ್ಥಾವರಗಳನ್ನೂ ಪೂರ್ಣವಾಗಿ ನಾಶಮಾಡಲಾಗಿದೆ ಎಂದು ಟ್ರಂಪ್ ಕೊಚ್ಚಿಕೊಂಡರು.

ಈ ಯುದ್ಧದಲ್ಲಿ ಇರಾನ್‌ನಲ್ಲಿ 600ರಿಂದ 1000ಕ್ಕೂ ಹೆಚ್ಚು ನಾಗರಿಕರ ಸಾವು ಸಂಭವಿಸಿದೆ. 4500ಕ್ಕಿಂತ ಹೆಚ್ಚು ಜನ ಗಾಯಗೊಂಡಿದ್ದಾರೆ.

ಮೊದಲನೆಯ ದಿನದ ದಾಳಿ, ಹತ್ಯೆಗಳ ಶಾಕ್‌ನಿಂದ ಚೇತರಿಸಿಕೊಂಡು, ಎರಡನೇ ದಿನದ ನಂತರ ಇರಾನ್‌ನಿಂದ ಪ್ರತಿದಾಳಿ ಆರಂಭವಾಯಿತು. ಹೆಚ್ಚು ಯುದ್ಧ ವಿಮಾನ ಹೊಂದಿರದ ಇರಾನ್ ಮುಖ್ಯವಾಗಿ ಕ್ಷಿಪಣಿ ದಾಳಿ ನಡೆಸಿತು. ಇಸ್ರೇಲಿನ ಪ್ರಸಿದ್ಧ ಮೂರು ಸುತ್ತಿನ ಅಬೇಧ್ಯ ಎನ್ನಲಾದ ವಾಯು ರಕ್ಷಣಾ ವ್ಯವಸ್ಥೆ (ಜತೆಗೆ ಯುಎಸ್–ನಾಟೋಗಳ ಪ್ರತಿ–ಕ್ಷಿಪಣಿ ವ್ಯವಸ್ಥೆಯ ಬೆಂಬಲ) ಬೇಧಿಸಿ ಇರಾನ್ ಕ್ಷಿಪಣಿ ದಾಳಿ ಪರಿಣಾಮಕಾರಿ ಆಯಿತು. ಕೊನೆಯ ದಿನಗಳಲ್ಲಿ ಸೂಪರ್ ಸಾನಿಕ್ ಕ್ಷಿಪಣಿ ಬಳಕೆಯನ್ನು ಸಹ ಮಾಡಿತು. ಇಸ್ರೇಲಿ ರಾಜಧಾನಿ ಟೆಲ್ ಅವಿವ್, ಹೈಫಾ ನಗರಗಳಲ್ಲಿ, ಪ್ರಮುಖ ಮಿಲಿಟರಿ ನೆಲೆ, ಮೊಸಾದ್ ಮುಖ್ಯ ಕಚೇರಿ, ತೈಲ ಸಂಸ್ಕರಣಗಳ ಮೇಲೆ ಇರಾನ್ ತೀವ್ರ ದಾಳಿ ನಡೆಸಿತು. ಹಲವು ನಾಗರಿಕ ವಾಸದ ಪ್ರದೇಶಗಳಿಗೂ ದಾಳಿಯ ಬಿಸಿ ಮುಟ್ಟಿತು.



ಬಹುಶಃ ಮೊದಲ ಬಾರಿಗೆ ಇಸ್ರೇಲಿ ಸರಕಾರ ಮತ್ತು ಜನತೆಗೆ ಮಾರಕ ದಾಳಿಗಳ ರುಚಿ ಸಿಕ್ಕಿತು. ಇಸ್ರೇಲಿ ಮಿಲಿಟರಿ, ಸರಕಾರ ಮತ್ತು ನಾಗರಿಕರು ಇಷ್ಟು ನಾಶವನ್ನು ಎಂದೂ ನೋಡಿರಲಿಲ್ಲ. ಅದರಲ್ಲೂ ಇಸ್ರೇಲಿ ನಾಗರಿಕರಿಗೆ ಬಹುಶಃ ಮೊದಲ ಬಾರಿಗೆ ಯುದ್ಧದ ದೊಡ್ಡ ಪ್ರಮಾಣದ ಅನುಭವ ನೇರವಾಗಿ ಆಯಿತು. ದೂರದಲ್ಲಿದ್ದ ಯುದ್ಧ ಮನೆಬಾಗಿಲಿಗೆ ಬಂತು. ಇಸ್ರೇಲ್ ಹಲವು ಬಾರಿ ಪ್ರತಿ ವರ್ಷವೆಂಬಂತೆ ಹಲವು ಯುದ್ಧಗಳನ್ನು ಹೂಡಿದ್ದರೂ, ನಾಗರಿಕರಿಗೆ ನೇರವಾದ ಯುದ್ಧದ ಅನುಭವವಿರಲಿಲ್ಲ. ಇಸ್ರೇಲಿ ನಾಗರಿಕರು ದಿನಕ್ಕೆ ಹಲವು ಬಾರಿ ಸೈರನ್, ಬಾಂಬ್–ನಿರೋಧಕ ಶೆಲ್ಟರ್‌ಗೆ ಓಡೋಡಿ ಸುಸ್ತಾದರು.

ಇಸ್ರೇಲ್‌ನಲ್ಲಿ 29 ಸಾವುಗಳಾದವು ಮತ್ತು 2500ಕ್ಕೂ ಹೆಚ್ಚು ಗಾಯಗೊಂಡರು ಎನ್ನಲಾಗಿದೆ. ಸಾವು–ನೋವು ಯುದ್ಧ ತಂದ ನಾಶಗಳ ಮಾಹಿತಿಯನ್ನು ಇಸ್ರೇಲಿ ಸರಕಾರ ನಿಷೇಧಿಸಿದ್ದು, ಸಾವು–ನೋವು ಮತ್ತು ನಾಶದ ವ್ಯಾಪ್ತಿ ಇನ್ನಷ್ಟು ಹೆಚ್ಚು ಇರಬಹುದು.

2. ಇಸ್ರೇಲ್ ಯುದ್ಧ ಆರಂಭಿಸಲು ಕೊಟ್ಟ ಕಾರಣಗಳೇನು?

ಇಸ್ರೇಲ್ ಇರಾನಿ ಅಣು ಸ್ಥಾವರಗಳ ಮೇಲೆ ದಾಳಿ ಮೂಲಕ ಆರಂಭಿಸಿದ ಯುದ್ಧಕ್ಕೆ ಕೊಟ್ಟ ಕಾರಣಗಳು ಮೂರು:

1. ಇರಾನ್ ಗುಪ್ತವಾಗಿ IAEA (ಅಂತರಾಷ್ಟ್ರೀ

ಪುಟ 14 ಕ್ಕೆ




ಇರಾನಿನ 23 ವರುಷಗಳ ಯುವ ಕವಯತ್ರಿ 'ಪಾರ್ನಿಯಾ ಅಬ್ಬಾಸ್ಸಿ' ಟೆಹರಾನಿನಲ್ಲಿ ಬಾಂಬ್ ದಾಳಿಗೆ ಬಲಿಯಾಗಿದ್ದಾಳೆ. ಅವಳ ಒಂದು ಪುಟ್ಟ ಕವಿತೆಯ ಅನುವಾದ.

ನಾನು ಕಣ್ಣೀರಿಟ್ಟೆ
ಇಬ್ಬರಿಗಾಗಿಯೂ
ನಿನಗಾಗಿ ಮತ್ತು ನನಗಾಗಿ

ಬಿಡಿಯುತ್ತಿವೆ
ನಕ್ಷತ್ರಗಳಿಗೆ
ನನ್ನ ಕಣ್ಣೀರ ಹನಿಗಳು!

ನಿನ್ನ ಜಗತ್ತಿನಲ್ಲಿ
ಸ್ವಾತಂತ್ರ್ಯದ ಬೆಳಕು
ನನ್ನಲ್ಲೋ
ನೆರಳುಗಳ ಹುಡುಕಾಟ!



ನಾನು ಮತ್ತು ನೀನು
ಅಂತಿಮವಾಗಿ
ಎಲ್ಲಾದರೊಂದುಕಡೆ
ಸಂಧಿಸಬಹುದು
ಜಗತ್ತಿನ ಅತ್ಯಂತ
ಸುಂದರವಾದ ಕವಿತೆ ಎಂದರೆ
ಸಾವು!

ನೀನು ಎಲ್ಲೋ ಒಂದು ಕಡೆ
ಬದುಕಿನ ಗುಣುಗುವಿಕೆಯ
ಬಗ್ಗೆ
ತಕರಾರು ತೆಗೆಯಬಹುದು
ಆದರೆ ನಾನು
ಮುಗಿಸುತ್ತೇನೆ

ಮತ್ತು
ನಾನು ಇರುತ್ತೇನೆ
ನಿನ್ನ ಆಕಾಶದಲ್ಲಿ
ಆ ಒಂದು
ಸಾಯುತ್ತಿರುವ ನಕ್ಷತ್ರವಾಗಿ.

ಅನುವಾದ:
ಡಾ.ಮಡಿವಾಳಪ್ಪ ಒಕ್ಕುಂದ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**